ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 21 ಸೋಮವಾರ 2023

ಸಂಪುಟ: 44 | ಸಂಚಿಕೆ: 126 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೃಷಿ ಸಚಿವರ ವಿರುದ್ಧ ರಾಜ್ಯಪಾಲರಿಗೆ 'ಲಂಚಕ್ಕೆ ಬೇಡಿಕೆ' ಪತ್ರ ವಿವಾದ

ಮೈಸೂರಿನ ಇಬ್ಬರು ಕೃಷಿ ಅಧಿಕಾರಿಗಳು ಸಿಐಡಿ ವಶಕ್ಕೆ

ಮಂಡ್ಯ, ಆ.20 (ಮೋಹನ್‌ರಾಜ್)– ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆಂದು ರಾಜ್ಯಪಾಲರಿಗೆ ಅಧಿಕಾರಿಗಳು ಪತ್ರ ಬರೆದಿದ್ದಾರೆ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಮೈಸೂರಿನ ಇಬ್ಬರು ಕೃಷಿ ಅಧಿಕಾರಿಗಳನ್ನು ಸಿಐಡಿ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲೂಕಿನ ಕೃಷಿ ಸಹಾಯಕ ನಿರ್ದೇಶಕ ಗುರುಪ್ರಸಾದ್ ಹಾಗೂ ಕೃಷಿ ಅಧಿಕಾರಿ ಸುದರ್ಶನ್ ಅವರನ್ನು ಸಿಐಡಿ ವಶಕ್ಕೆ ಪಡೆದಿದ್ದು, ಪ್ರಸ್ತುತ ಇವರು ಮೈಸೂರು ಕೃಷಿ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಇಂದು ಬೆಳಗ್ಗೆಯಿಂದಲೇ ಇವರನ್ನು ಸಿಐಡಿ, ಅಜ್ಞಾತ ಸ್ಥಳಕ್ಕೆ ಕರೆದೊಯ್ದು ವಿಚಾರಣೆಗೆ ಒಳಪಡಿಸಿದೆ. ಈ ಅಧಿಕಾರಿಗಳನ್ನು ಸಿಐಡಿ ವಶಕ್ಕೆ ಪಡೆದಿರುವುದನ್ನು ಕೃಷಿ ಇಲಾಖೆ ಜಂಟಿ ನಿರ್ದೇಶಕ ಚಂದ್ರಶೇಖರ್ ಸ್ಪಷ್ಟಪಡಿಸಿದ್ದಾರೆ. ಕಳೆದ 10 ದಿನಗಳ ಹಿಂದೆ ಮಂಡ್ಯ ಜಿಲ್ಲೆಯ 7 ತಾಲೂಕಿನ ಕೃಷಿ ಸಹಾಯಕ ನಿರ್ದೇಶಕರ ಹೆಸರಿನಲ್ಲಿ ಕೃಷಿ ಅಧಿಕಾರಿಗಳಿಂದ ಸಚಿವ ಎನ್.ಚಲುವರಾಯಸ್ವಾಮಿ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ರಾಜ್ಯಪಾಲರಿಗೆ ಪತ್ರ ಬರೆಯಲಾಗಿತ್ತು. ಈ ಪತ್ರಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರ ಕಚೇರಿ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು, ಈ ಬಗ್ಗೆ ವಿಚಾರಣೆ ನಡೆಸುವಂತೆ ಸೂಚನೆ ನೀಡಲಾಗಿತ್ತು. ಇದು ರಾಜಕೀಯ ತಿರುವು ಪಡೆದು ಆಡಳಿತ ಹಾಗೂ ಪ್ರತಿಪಕ್ಷಗಳ ನಡುವೆ ಟೀಕಾಪ್ರಹಾರಕ್ಕೆ ಕಾರಣವಾಗಿತ್ತು. ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ರಾಜೀನಾಮೆಗೆ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಸೇರಿದಂತೆ ಜೆಡಿಎಸ್ ಮತ್ತು ಬಿಜೆಪಿ ಆಗ್ರಹಿಸಿದ್ದವು. ಬಿಜೆಪಿ ಮಂಡ್ಯದಲ್ಲಿ ಅನಿರ್ದಿಷ್ಟಾವಧಿ ಧರಣಿ ಸಹ ನಡೆಸಿತ್ತು. ಈ ಪ್ರಕರಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸಿಐಡಿ ತನಿಖೆಗೆ ಒಪ್ಪಿಸಿದ್ದರು. ▶ 8ನೇ ಪುಟಕ್ಕೆ

> "ಮಾಹಿತಿ ಇಲ್ಲದೇ ಈ ಬಗ್ಗೆ ಮಾತನಾಡುವುದು ಸೂಕ್ತ ಅಲ್ಲ. ಮಂಡ್ಯದವರ ಹೆಸರು ಬಳಸಿಕೊಂಡು ಮೈಸೂರಿನವರು ಯಾಕೆ ಪತ್ರ ಬರೆದರು ಎಂಬ ಹಿನ್ನೆಲೆ ಗೊತ್ತಾಗಬೇಕಾಗಿದೆ. ಏನಾದರೂ ಇದ್ದರೆ ಅವರ ಹೆಸರಿನಲ್ಲೇ ಬರೆಯಬಹುದಿತ್ತು ಮಂಡ್ಯ ಜಿಲ್ಲೆಯ ಏಳು ಅಧಿಕಾರಿಗಳ ಹೆಸರು ಯಾಕೆ ಬಳಸಿದ್ದಾರೆ ಎಂದು ಗೊತ್ತಾಗಬೇಕು. ಸಿಐಡಿಯಿಂದ ಮಾಹಿತಿ ತರಿಸಿಕೊಳ್ಳುತ್ತೇನೆ.
> –ಚಲುವರಾಯಸ್ವಾಮಿ



ವರ್ಗಾವಣೆ ದಂಧೆ, ಮಂತ್ರಿಗಳಿಂದ ಸುಲಿಗೆ ಅಸಲಿ ಎನ್ನುವುದು ಸಾಬೀತು

ಕೃಷಿ ಅಧಿಕಾರಿಗಳ ಸಿಐಡಿ ವಶಕ್ಕೆ ಪಡೆದುಕೊಂಡ ಬಗ್ಗೆ ಮಾಜಿ ಸಿಎಂ ಕುಮಾರಸ್ವಾಮಿ ಪ್ರತಿಕ್ರಿಯೆ

ಬೆಂಗಳೂರು: ಕೃಷಿ ಸಚಿವ ಚಲುವರಾಯಸ್ವಾಮಿ ಅವರ ವಿರುದ್ಧ ರಾಜ್ಯಪಾಲರಿಗೆ ಪತ್ರ ಬರೆದ ಕೃಷಿ ಇಲಾಖೆ ಇಬ್ಬರು ಅಧಿಕಾರಿಗಳನ್ನು ಸಿಐಡಿ ವಶಕ್ಕೆ ಪಡೆಯುವ ಮೂಲಕ, ಈ ಸರ್ಕಾರದಲ್ಲಿ ವರ್ಗಾವಣೆ ದಂಧೆ ಹಾಗೂ ಮಂತ್ರಿಗಳಿಂದ ಅಧಿಕಾರಿಗಳ ಸುಲಿಗೆ ನಡೆಯುತ್ತಿದೆ ಎಂಬುದು ಸಾಬೀತಾಗಿದೆ ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆ ಪತ್ರವು ನಕಲಿಯೋ, ಅಸಲಿಯೋ ಆ ಮಾತು ಹಾಗಿರಲಿ. ಆದರೆ, ಕೃಷಿ ಇಲಾಖೆಯಲ್ಲಿ ಸುಲಿಗೆ, ವರ್ಗಾವಣೆ ದಂಧೆ ನಡೆಯುತ್ತಿರುವುದು ಅಸಲಿ ಎನ್ನುವುದು ಗೊತ್ತಾಯಿತಲ್ಲ ಎಂದ ಅವರು, ಆ ಅಧಿಕಾರಿಗಳು ದೂರಿನ ಪತ್ರ ಯಾಕೆ ಬರೆದರು. ಅವರು ಮೈಸೂರಿನವರಾದರೂ ಆಗಲಿ ಅಥವಾ ಮಂಡ್ಯದವರಾದರೂ ಆಗಲಿ. ಸತ್ಯ ಏನೆಂಬುದು ಬಯಲಿಗೆ ಬಂತಲ್ಲ ಎಂದರು.

ಇಬ್ಬರು ಅಧಿಕಾರಿಗಳನ್ನು ಏಕೆ ವಶಕ್ಕೆ ಪಡೆದಿದ್ದಾರೆ. ಅಧಿಕಾರಿಗಳ ಬಂಧನವಾಗಿದೆ ಅಂದರೆ ಭ್ರಷ್ಟಾಚಾರ, ವರ್ಗಾವಣೆ ದಂಧೆ ಆಗಿದೆ ಅಂತಲೇ ಅಲ್ಲವೇ? ಆರೋಪಿ ಸ್ಥಾನದಲ್ಲಿರುವ ಸಚಿವರೇ ಪ್ರತಿಯೊಂದಕ್ಕೂ ಉತ್ತರ, ಹೇಳಿಕೆ ಕೊಡುತ್ತಿದ್ದಾರೆ. ಸಿಐಡಿ ಪೊಲೀಸರು ತನಿಖೆಯ ವರದಿಯನ್ನು ಗೃಹ ಸಚಿವರಿಗೆ ಕೊಡುತ್ತಾರೋ ಅಥವಾ ಮುಖ್ಯಮಂತ್ರಿಗಳಿಗೆ ಕೊಡುತ್ತಾರೋ? ಇಲ್ಲವೇ ಆರೋಪಿ ಸ್ಥಾನದಲ್ಲಿರುವ ಸಚಿವರಿಗೆ ▶ 8ನೇ ಪುಟಕ್ಕೆ

ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ಖಂಡಿಸಿ

ಬಿಜೆಪಿಯಿಂದ ಇಂದು ಎಕ್ಸ್‌ಪ್ರೆಸ್ ವೇ ಬಂದ್ ಬದಲು ಮಂಡ್ಯದಲ್ಲಿ ಪ್ರತಿಭಟನೆ



ಫೇಸ್‌ಬುಕ್ ಲೈವ್‌ನಲ್ಲಿ ಸಂಸದ ಪ್ರತಾಪ್ ಸಿಂಹ ಸ್ಪಷ್ಟನೆ

ಮಂಡ್ಯ,ಆ.20 (ಮೋಹನ್‌ರಾಜ್)– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ಕ್ರಮ ಖಂಡಿಸಿ ಮೈಸೂರು ವಿಭಾಗೀಯ ಬಿಜೆಪಿ ಘಟಕ ಕರೆ ನೀಡಿದ್ದ **ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಬಂದ್ ಕರೆಯನ್ನು ವಾಪಸ್ ಪಡೆಯಲಾಗಿದೆ.**

ಈ ಬಗ್ಗೆ ಫೇಸ್‌ಬುಕ್ ಲೈವ್‌ನಲ್ಲಿ ಸ್ಪಷ್ಟನೆ ನೀಡಿರುವ ಸಂಸದ ಪ್ರತಾಪ್ ಸಿಂಹ, ನಾಳೆ ಬಿಜೆಪಿಯಿಂದ ಮೈಸೂರು–ಬೆಂಗಳೂರು ಹೆದ್ದಾರಿ ಬಂದ್ ಮಾಡುತ್ತಿಲ್ಲ. ಬದಲಾಗಿ ಮಂಡ್ಯ ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದ ಬಳಿ ಧರಣಿ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ನಾಳೆ ಮೈಸೂರು–ಬೆಂಗಳೂರು ಹೆದ್ದಾರಿ ತಡೆಗೆ ಬಿಜೆಪಿ ಕರೆ ಕೊಟ್ಟಿತ್ತು. ಆದರೆ ಹೆದ್ದಾರಿ ತಡೆಯಲು ಅನುಮತಿ ಸಿಗದ ಹಿನ್ನೆಲೆ, ಜೊತೆಗೆ ಸ್ವತಃ ಎಕ್ಸ್‌ಪ್ರೆಸ್ ವೇ ತಡೆಗೆ ಸಂಸದ ಪ್ರತಾಪ್ ಸಿಂಹ ಕೂಡ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಬಿಜೆಪಿ, ಹೆದ್ದಾರಿ ಬಂದ್ ಅನ್ನು ವಾಪಸ್ ಪಡೆದಿದ್ದು, ಮಂಡ್ಯ ನಗರದಲ್ಲೇ ಪ್ರತಿಭಟನೆ ಮಾಡಲು ನಿರ್ಧರಿಸಲಾಗಿದೆ. ನಾಳೆ ಬೆಳಗ್ಗೆ 11 ಗಂಟೆಗೆ ಪ್ರತಿಭಟನೆ ನಡೆಯಲಿದ್ದು, ಹೋರಾಟಕ್ಕೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಬರುವ ಸಾಧ್ಯತೆ ಇದೆ. ಈ ಪ್ರತಿಭಟನೆಯಲ್ಲಿ ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಿಜೆಪಿ ಕಾರ್ಯಕರ್ತರು ಭಾಗವಹಿಸಲಿದ್ದಾರೆ.

ಕಾವೇರಿ ನೀರು ಬಿಟ್ಟು ಈಗ ಸುಪ್ರೀಂಕೋರ್ಟ್‌ಗೆ ಅರ್ಜಿ

ಊರೆಲ್ಲಾ ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದಂತಿದೆ ಸರ್ಕಾರದ ಕ್ರಮ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕಿಡಿ

■ ನಮ್ಮ ನೀರು, ತಮಿಳುನಾಡು ಹಕ್ಕು ಸಂದೇಶ ■ ಜನರ ಮೇಲೆ 86 ಸಾವಿರ ಕೋಟಿ ಸಾಲದ ಹೊರೆ ■ ಬಿಜೆಪಿ ಮೈತ್ರಿ ಪ್ರಸ್ತಾಪ ಇದುವರೆಗೂ ಮಾಡಿಲ್ಲ


ಮೈಸೂರು, ಆ.20(ಬಿಎಲ್‌ಯು)– ಊರೆಲ್ಲಾ ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದಂತೆ ತಮಿಳುನಾಡಿಗೆ ಭಾರಿ ಪ್ರಮಾಣದಲ್ಲಿ ಕಾವೇರಿ ನೀರು ಬಿಟ್ಟು, ಈಗ ನೀರು ಬಿಡುವುದಿಲ್ಲ ಎಂದು ಸುಪ್ರೀಂಕೋರ್ಟ್‌ಗೆ ಅರ್ಜಿ ಹಾಕಲು ಸರ್ಕಾರ ಮುಂದಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ರಾಜ್ಯ ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆ.

ಮೈಸೂರಿನ ಸುತ್ತೂರು ಮಠದಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಕಾವೇರಿ, ಕಬಿನಿ ಸೇರಿದಂತೆ ಹಲವು ಜಲಾಶಯಗಳು ಬರಿದಾಗಿವೆ. ಬೆಂಗಳೂರಿನಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಲಿದೆ. ಇಂತಹ ಸಮಯದಲ್ಲಿ ಕರ್ನಾಟಕ ಸರ್ಕಾರ ತಮಿಳುನಾಡಿಗೆ ಸಾಕಷ್ಟು ಪ್ರಮಾಣದಲ್ಲಿ ಕಾವೇರಿ ನೀರು ಬಿಟ್ಟಿದೆ ಎಂದು ಸರ್ಕಾರದ ವಿರುದ್ಧ ಕಿಡಿಕಾರಿದರು.

ಮಳೆ ಬಾರದೆ ಜಲಾಶಯ ತುಂಬದ ಪರಿಸ್ಥಿತಿಯಲ್ಲಿ ಸಂಕಷ್ಟ ಸೂತ್ರ ಪಾಲಿಸುವಂತೆ ಕಾವೇರಿ ನ್ಯಾಯಾಧೀಕರಣ ಸಲಹೆ ನೀಡಿದೆ. ಹೀಗಿರುವಾಗ ಕರ್ನಾಟಕ ಸರ್ಕಾರ ಸಂಕಷ್ಟ ಸೂತ್ರ ಪಾಲಿಸುವುದಾಗಿ ಹೇಳಿ ಕಾವೇರಿ ನೀರು ಬಿಡಬಾರದಿತ್ತು ಎಂದು ಕುಮಾರಸ್ವಾಮಿ ಅಭಿಪ್ರಾಯಪಟ್ಟರು.

ಕಾವೇರಿ ನೀರು ಬಿಡುವಂತೆ ಕಾವೇರಿ ನಿರ್ವಹಣಾ ಪ್ರಾಧಿಕಾರದ ಬಳಿ ತಮಿಳುನಾಡು ಸರ್ಕಾರ ಹಕ್ಕು ಪ್ರತಿಪಾದನೆ ಮಾಡಿದ ಸಂದರ್ಭದಲ್ಲಿ ಸಂಕಷ್ಟ ಸೂತ್ರದ ಪ್ರಕಾರ ನೀರು ಬಿಡುವುದಿಲ್ಲ ಎಂದು ಕರ್ನಾಟಕದ ವಕೀಲರು ಪ್ರಾಧಿಕಾರದ ಮುಂದೆ ಸಮರ್ಥ ವಾದ ಮಂಡನೆ ಮಾಡಬೇಕಿತ್ತು. ಆದರೆ ಆಗ ಮೌನವಾಗಿ ತಮಿಳುನಾಡಿಗೆ ನೀರು ಬಿಟ್ಟು ಈಗ ನೀರು ಬಿಡುವುದಿಲ್ಲ ಎಂದು ಸುಪ್ರೀಂಕೋರ್ಟ್ ಮುಂದೆ ಅರ್ಜಿ ಹಾಕಲು ಸರ್ಕಾರ ಮುಂದಾಗಿದೆ. ಊರೆಲ್ಲಾ ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದಂತೆ ತಮಿಳುನಾಡಿಗೆ ಸಾಕಷ್ಟು ನೀರು ಬಿಟ್ಟು ಈಗ ನೀರು ಬಿಡುವುದಿಲ್ಲ ಎಂದು ಸುಪ್ರೀಂಕೋರ್ಟ್‌ಗೆ ಅರ್ಜಿ ▶ 8ನೇ ಪುಟಕ್ಕೆ

ಗ್ಯಾರಂಟಿ ಸ್ಕೀಂ ಹೆಸರಲ್ಲಿ ಜನರಿಗೆ ಮಕ್ಮಲ್ ಟೋಪಿ!



ಚುನಾವಣಾ ಪೂರ್ವದಲ್ಲಿ ಮೇಕೆದಾಟು ಯೋಜನೆ ಅನುಷ್ಠಾನ ಮಾಡಲು ನಮ್ಮ ನೀರು, ನಮ್ಮ ಹಕ್ಕು ಎಂದು ಪಾದಯಾತ್ರೆ ಮಾಡಿದರು. ಆದರೆ ಈಗ ತಮಿಳುನಾಡಿಗೆ ನೀರು ಬಿಟ್ಟು, 'ನಮ್ಮ ನೀರು, ತಮಿಳುನಾಡು ಹಕ್ಕು' ಎಂಬ ಸಂದೇಶ ಸಾರಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಹೆಚ್.ಡಿ.ಕುಮಾರಸ್ವಾಮಿ ಪರೋಕ್ಷ ವಾಗ್ದಾಳಿ ನಡೆಸಿದರು.

ಗ್ಯಾರಂಟಿ ಸ್ಕೀಂ ತೋರಿಸಿ ಕರ್ನಾಟಕದ ಜನತೆಗೆ ಮಕ್ಮಲ್ ಟೋಪಿ ಹಾಕುತ್ತಿದ್ದಾರೆ. 200 ಯೂನಿಟ್ ವಿದ್ಯುತ್ ಕೊಡುವುದಾಗಿ ಭರವಸೆ ನೀಡಿ, ಈಗ ಹಲವು ಷರತ್ತುಗಳನ್ನು ವಿಧಿಸುತ್ತಿದ್ದಾರೆ. ಇದರಿಂದ ಬಹಳಷ್ಟು ಜನರಿಗೆ ಉಚಿತ ವಿದ್ಯುತ್ ದೊರೆಯದೆ ಬಿಲ್ ಪಾವತಿಸುತ್ತಿದ್ದಾರೆ. ಗ್ಯಾರಂಟಿ ಸ್ಕೀಂನಲ್ಲಿ ಪ್ರತಿ ತಿಂಗಳು ಒಂದು ಕುಟುಂಬಕ್ಕೆ 4ರಿಂದ 5 ಸಾವಿರ ರೂ. ದೊರೆಯುತ್ತದೆ ಎಂದು ಪ್ರಚಾರ ಗಿಟ್ಟಿಸಿಕೊಳ್ಳುತ್ತಿದ್ದಾರೆ. ಆದರೆ ಗ್ಯಾರಂಟಿ ಸ್ಕೀಂನಲ್ಲಿ ಹಣ ಕೊಟ್ಟು ಜನರ ಮೇಲೆ ಸಾಲದ ಹೊರೆ ಹೊರಿಸುತ್ತಿರುವುದನ್ನು ಮಾತ್ರ ಜನರಿಗೆ ಹೇಳುತ್ತಿಲ್ಲ. ಗ್ಯಾರಂಟಿ ಸ್ಕೀಂಗಾಗಿ 86 ಸಾವಿರ ಕೋಟಿ ಸಾಲ ಮಾಡಿದ್ದಾರೆ. ಒಟ್ಟಾರೆ ರಾಜ್ಯದ ಜನರ ಮೇಲೆ 5.65 ಲಕ್ಷ ಕೋಟಿ ಸಾಲದ ಹೊರೆ ಹೊರೆಸಿದ್ದಾರೆ. ಈ ಸಾಲವನ್ನು ರಾಜ್ಯದ ಜನತೆಯೇ ತೀರಿಸಬೇಕು. ಇದನ್ನು ಕರ್ನಾಟಕದ ಜನತೆ ಅರಿತುಕೊಳ್ಳಬೇಕು ಎಂದರು.

ಎನ್‌ಇಪಿ ರದ್ದು ಸಂಬಂಧ ಶಿಕ್ಷಣ ತಜ್ಞರೊಂದಿಗೆ ಇಂದು ಸಿಎಂ ಚರ್ಚೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ರದ್ದುಗೊಳಿಸುವ ಕುರಿತು ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಶಿಕ್ಷಣ ತಜ್ಞರು ಮತ್ತು ವಿಶ್ವವಿದ್ಯಾಲಯಗಳ ಕುಲಪತಿಗಳೊಂದಿಗೆ ಸೋಮವಾರ ಸಭೆ ನಡೆಸಲಿದ್ದಾರೆ. ಈ ವೇಳೆ ರಾಜ್ಯ ಶಿಕ್ಷಣ ನೀತಿ ರೂಪಿಸಲು ಸರ್ಕಾರವು ಸಮಿತಿಯನ್ನು ಅಂತಿಮಗೊಳಿಸುವ ಸಾಧ್ಯತೆಯಿದೆ.

ಕೆಆರ್‌ಎಸ್ ಉದ್ಯಾನವನದಲ್ಲಿ ಪ್ರವಾಸಿಗರಿಗೆ ಚಿರತೆ ಆಯಿತು ಈಗ ನಾಯಿ ಕಂಟಕ!


ಏಕಾಏಕಿ ದಾಳಿ ನಡೆಸಿ 15ಕ್ಕೂ ಅಧಿಕ ಮಂದಿಗೆ ಗಾಯ

● ರಾತ್ರಿ 7 ಗಂಟೆಗೆ ಉದ್ಯಾನವನ ಬಂದ್ ● ಗಾಯಾಳುಗಳಿಗೆ ಚಿಕಿತ್ಸಾ ವ್ಯವಸ್ಥೆ

ಮೈಸೂರು, ಆ.20 (ಎಂಟಿವೈ)– ಕೆಆರ್‌ಎಸ್ ಉದ್ಯಾನವನದಲ್ಲಿ ಇದುವರೆಗೆ ಚಿರತೆ ಹಾವಳಿಯಿಂದ ತತ್ತರಿಸಿದ್ದ ಪ್ರವಾಸಿಗರು ಈಗ ನಾಯಿಗಳು ಕಂಟಕವಾಗಿ ಪರಿಣಮಿಸಿ. ಶ್ವಾನವೊಂದು ಇಂದು ದಿಢೀರ್ ದಾಳಿ ನಡೆಸಿ 15ಕ್ಕೂ ಹೆಚ್ಚು ಪ್ರವಾಸಿಗರಿಗೆ ಕಚ್ಚಿ ಗಾಯಗೊಳಿಸಿದೆ. ಇದರಿಂದ ಎಚ್ಚೆತ್ತ ಅಧಿಕಾರಿಗಳು ರಾತ್ರಿ 7 ಗಂಟೆಗೆ ಉದ್ಯಾನವನ ಬಂದ್ ಮಾಡಿ, ಪ್ರವಾಸಿಗರನ್ನು ಹೊರಗೆ ಕಳುಹಿಸಿದ್ದಾರೆ.

ವಾರಾಂತ್ಯ ರಜೆ ಹಿನ್ನೆಲೆಯಲ್ಲಿ ಕೆಆರ್‌ಎಸ್ ಉದ್ಯಾನವನದ ಸೊಬಗು ಕಣ್ತುಂಬಿಕೊಳ್ಳಲೆಂದು ವಿವಿಧೆಡೆಯಿಂದ ಅಪಾರ ಸಂಖ್ಯೆಯ ಪ್ರವಾಸಿಗರು ಆಗಮಿಸಿದ್ದರು. ಧ್ವನಿ ಮತ್ತು ಬೆಳಕು ವೀಕ್ಷಣೆಗೆ ಪ್ರವಾಸಿಗರು ನೂಕುನುಗ್ಗಲಲ್ಲಿ ತೆರಳುತ್ತಿದ್ದಾಗ ನಾರ್ಥ್‌ಗೇಟ್ ಪಾರ್ಕ್ ಕಡೆಯಿಂದ ನುಗ್ಗಿದ ಶ್ವಾನ, ದಿಢೀರನೆ ಸಿಕ್ಕ ಸಿಕ್ಕವರ ಮೇಲೆ ದಾಳಿ ನಡೆಸಿತು. ಭಯದಿಂದ ಪ್ರವಾಸಿಗರು ದಿಕ್ಕಾಪಾಲಾಗಿ ಓಡಿಹೋದರೂ ಶ್ವಾನ ಸಿಕ್ಕ ಸಿಕ್ಕವರಿಗೆ ಕಚ್ಚಿತು. ಘಟನೆಯಲ್ಲಿ 15ಕ್ಕೂ ಹೆಚ್ಚು ಮಂದಿ ಗಾಯಗೊಂಡರು.

ಆತಂಕದಿಂದ ಪ್ರವಾಸಿಗರು ಕಿರುಚಿದ್ದರಿಂದ ಸಮೀಪದಲ್ಲಿದ್ದ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ, ಶ್ವಾನವನ್ನು ಓಡಿಸಲು ಪ್ರಯತ್ನಿಸಿದರು. ಈ ವೇಳೆ ಮ್ಯೂಸಿಕ್ ಫೌಂಟೇನ್ ಬಳಿ ಓಡಿ ಹೋಗಿ ಅಡಗಿತು. ಪ್ರವಾಸಿಗರ ನೆರವಿಗೆ ಧಾವಿಸಿದ ಪೊಲೀಸರು, ▶ 8ನೇ ಪುಟಕ್ಕೆ



ಶ್ವಾನ ದಾಳಿಯಿಂದಾಗಿ ರಾತ್ರಿ 7ಕ್ಕೆ ಕೆಆರ್‌ಎಸ್ ಉದ್ಯಾನವನ ಬಂದ್ ಆಗಿರುವುದು.

ಕಾವೇರಿ, ಮಹದಾಯಿ ವಿವಾದ

ಆ.23ಕ್ಕೆ ಸರ್ವಪಕ್ಷಗಳ ಸಭೆ



ಬೆಂಗಳೂರು: ಕಾವೇರಿ ಮತ್ತು ಮಹದಾಯಿ ವಿವಾದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಆ.23ರಂದು ಸರ್ವಪಕ್ಷಗಳ ಸಭೆ ಕರೆಯಲಾಗಿದೆ. ರಾಜ್ಯದಲ್ಲಿ ಮಳೆ ಕೊರತೆಯಿಂದ ಕಾವೇರಿ ಕೊಳ್ಳದ ಜಲಾಶಯಗಳಲ್ಲಿ ನೀರು ಕಡಿಮೆ ಇದೆ. ಇಂತಹ ಸಂಕಷ್ಟ ಸಂದರ್ಭದಲ್ಲಿ ತಮಿಳುನಾಡಿಗೆ ನೀರು ಬಿಡಬೇಕು ಎಂಬ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶ ಸರ್ಕಾರವನ್ನು ಸಂದಿಗ್ಧಕ್ಕೆ ಸಿಲುಕಿಸಿದ್ದು, ಈ ಬಗ್ಗೆ ಚರ್ಚೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಸರ್ವಪಕ್ಷಗಳ ಮುಖಂಡರ ಸಭೆ ಕರೆದಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಬುಧವಾರ ಬೆಳಗ್ಗೆ ಸರ್ವಪಕ್ಷಗಳ ಸಭೆ ನಡೆಯಲಿದ್ದು, ಕಾವೇರಿ ಸಂಕಷ್ಟ ಸೂತ್ರ ಹಾಗೂ ರಾಜ್ಯದ ರೈತರ ಹಿತರಕ್ಷಣೆ ಸಂಬಂಧ ಏನೆಲ್ಲಾ ಮಾಡಬೇಕು ಎಂಬ ಬಗ್ಗೆ ಚರ್ಚೆ ನಡೆಯಲಿದೆ ಎಂದು ತಿಳಿದುಬಂದಿದೆ. ಮಳೆಯ ಅಭಾವದಿಂದ ರಾಜ್ಯದಲ್ಲಿ ನೀರಿನ ಕೊರತೆಯಾಗಿದೆ. ಕುಡಿಯುವ ನೀರಿಗೂ ತೊಂದರೆಯಾಗಿದೆ. ಹೀಗಾಗಿ ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಿಲ್ಲ ಎಂದು ರಾಜ್ಯ ಸರ್ಕಾರ ವಾದಿಸಿದ್ದರೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ನಿತ್ಯ 10 ಸಾವಿರ ಕ್ಯೂಸೆಕ್ ನೀರು ಬಿಡುವಂತೆ ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಸ್ವಲ್ಪಮಟ್ಟಿನ ನೀರನ್ನು ಬಿಡುಗಡೆ ಮಾಡಿದೆ. ನೀರು ಬಿಡುಗಡೆಗೆ ರೈತರು ಹಾಗೂ ಪ್ರತಿಪಕ್ಷಗಳಿಂದ ವಿರೋಧ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ, ಈ ಬಗ್ಗೆ ಚರ್ಚಿಸಲು ಸರ್ವಪಕ್ಷಗಳ ಸಭೆ ನಿಗದಿ ಮಾಡಿದ್ದಾರೆ. ಸಭೆಯಲ್ಲಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶದ ಸಾಧಕ–ಬಾಧಕಗಳ ಬಗ್ಗೆ ಚರ್ಚೆ ನಡೆಸಿ, ರಾಜ್ಯದ ನಿಲುವು ಏನಾಗಿರಬೇಕು ಎಂಬ ಬಗ್ಗೆ ತೀರ್ಮಾನ ಕೈಗೊಳ್ಳಲಾಗುತ್ತದೆ. ಕಾವೇರಿ ಜಲವಿವಾದಗಳಿಗೆ ಸಂಬಂಧಿಸಿದಂತೆ ಸರ್ಕಾರವು ಆ.23ರಂದು ಸರ್ವಪಕ್ಷ ಸಭೆ ಕರೆದಿದೆ. ಸಭೆಯಲ್ಲಿ ಭಾಗಿಯಾಗುವಂತೆ ಕೆಲವು ಹಿರಿಯ ಸಂಸದರನ್ನು ಕರೆಯಲಾಗಿದೆ. ವಿವಾದ ಸಂಬಂಧ ಪರಿಹಾರ ಕಂಡುಕೊಳ್ಳಲು ಈ ಸಭೆ ಕರೆಯಲಾಗಿದೆ.

ಪ್ರೀಪೇಯ್ಡ್ ಸ್ಮಾರ್ಟ್ ವಿದ್ಯುತ್ ಮೀಟರ್ ವ್ಯವಸ್ಥೆ ಜಾರಿಗೆ ಸಿದ್ಧತೆ

ಮೊಬೈಲ್ ಪ್ರೀಪೇಯ್ಡ್ ರೀಚಾರ್ಜ್ ಮಾದರಿ ವಿದ್ಯುತ್ ಬಳಕೆಯ ನೂತನ ವ್ಯವಸ್ಥೆ




ಫೈಲ್ ಚಿತ್ರ

- ಕೆಇಆರ್‌ಸಿ ಅಧಿಸೂಚನೆ; ಆಕ್ಷೇಪಣೆ ಸಲ್ಲಿಸಲು ಅವಕಾಶ
- ತಿಂಗಳಿಗೊಮ್ಮೆ ಬರುವ ಬಿಲ್ ಹೊರೆಯಿಂದ ಮುಕ್ತಿ
- ಈಗ ಪಾವತಿಸಿರುವ ಠೇವಣಿ ಹಣವೂ ವಾಪಸು
- ಪ್ರತಿ ವರ್ಷ ಠೇವಣಿ ಹಣ ಪಾವತಿಸಬೇಕಾಗಿಲ್ಲ
- ವಿದ್ಯುತ್ ಬಳಕೆ ಬಗ್ಗೆ ಮೊಬೈಲ್ ಮೂಲಕ ಮಾಹಿತಿ
- ಈಗ ಯೋಜನೆ ಐಚ್ಛಿಕ; ಮುಂದೊಂದು ದಿನ ಕಡ್ಡಾಯ

ಮೈಸೂರು,ಆ.20(ಬಿಎಲ್‌ಯು)– ಇನ್ನು ಮುಂದೆ ಸರದಿ ಸಾಲಿನಲ್ಲಿ ನಿಂತು ವಿದ್ಯುತ್ ಬಿಲ್ ಕಟ್ಟುವ ಗೋಜಿಲ್ಲ. ಕರೆಂಟ್ ಬಿಲ್ ಬರಲಿಲ್ಲವಲ್ಲ ಅಂತ ಮೀಟರ್ ರೀಡರ್ ದಾರಿ ಕಾಯುವ ಪರಿಸ್ಥಿತಿ ಬರಲ್ಲ. ಇಷ್ಟೊಂದು ವಿದ್ಯುತ್ ಬಿಲ್ ಬಂದಿದೆಯಲ್ಲ ಅಂತ ಮೀಟರ್ ದೋಷದ ಬಗ್ಗೆ ಸಂಶಯಪಡುವಂತಿಲ್ಲ. ಏಕೆಂದರೆ ಮೊಬೈಲ್ ಪ್ರೀಪೇಯ್ಡ್ ಕರೆನ್ಸಿ ಚಾರ್ಜ್‌ನಂತೆ ಈಗ ಪ್ರೀಪೇಯ್ಡ್ ವಿದ್ಯುತ್ ಬಳಕೆ ವ್ಯವಸ್ಥೆ ಜಾರಿಗೆ ಬರುತ್ತಿದೆ. ನಮಗೆ ಅಗತ್ಯವಿರುವಷ್ಟು ವಿದ್ಯುತ್‌ಗೆ ಹಣ ಪಾವತಿಸುವುದರೊಂದಿಗೆ ಚಾರ್ಜ್ ಮಾಡಿಸಿಕೊಂಡು ಬಳಸಬಹುದು. ಜೊತೆಗೆ ವರ್ಷಕ್ಕೊಮ್ಮೆ ಡಿಪಾಸಿಟ್ ಕಟ್ಟುವಂತಿಲ್ಲ.

ಪ್ರೀಪೇಯ್ಡ್ ಸ್ಮಾರ್ಟ್ ವಿದ್ಯುತ್ ಮೀಟರ್ ಅಳವಡಿಕೆಗೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಸ್ಮಾರ್ಟ್ ಮೀಟರ್ ಅಳವಡಿಕೆ ನೀತಿ–2023 ಅನ್ನು ಗೆಜೆಟ್‌ನಲ್ಲಿ ಪ್ರಕಟಿಸಿದೆ. ಆಗಸ್ಟ್ 4ರಂದು ಈ ಸಂಬಂಧ ಅಧಿಸೂಚನೆ ಹೊರಡಿಸಿರುವ ಕೆಇಆರ್‌ಸಿ, ಪ್ರೀಪೇಯ್ಡ್ ಸ್ಮಾರ್ಟ್ ಮೀಟರ್ ಅಳವಡಿಸುವ ಪ್ರಕ್ರಿಯೆಗೆ ಚಾಲನೆ ನೀಡಿದೆ.

ಮನೆ, ಕಾರ್ಖಾನೆ, ಪಂಪ್‌ಸೆಟ್ ಸೇರಿದಂತೆ ಎಲ್ಲಾ ಕಡೆ ವಿದ್ಯುತ್ ಬಳಸುವವರು ಪ್ರೀಪೇಯ್ಡ್ ಸ್ಮಾರ್ಟ್ ಮೀಟರ್ ಅನ್ನು ಅಳವಡಿಸಿಕೊಳ್ಳಬಹುದು. ಈಗಿನ ವಿದ್ಯುತ್ ಮೀಟರ್‌ನಲ್ಲಿ ಒಂದು ತಿಂಗಳಿಗೆ ಒಮ್ಮೆ ಬಿಲ್ ಬರುತ್ತದೆ. ಮೀಟರ್ ರೀಡರ್ ಬಂದು ಬಿಲ್ ಕೊಡುವ ತನಕ ಕಾಯಬೇಕು. ಇದು ಒಂದು ರೀತಿ ಪೋಸ್ಟ್ ಪೇಯ್ಡ್ ಮೊಬೈಲ್ ಬಿಲ್ ಮಾದರಿಯಲ್ಲಿದೆ. ಆದರೆ ಪ್ರೀಪೇಯ್ಡ್ ಸ್ಮಾರ್ಟ್ ವಿದ್ಯುತ್ ಮೀಟರ್ ಪ್ರೀಪೇಯ್ಡ್ ಮೊಬೈಲ್ ಚಾರ್ಜ್ ಮಾದರಿಯಲ್ಲಿರುತ್ತದೆ. ಗ್ರಾಹಕ ತನಗೆ ಬೇಕಾಗುವಷ್ಟು ವಿದ್ಯುತ್ ಪ್ರಮಾಣಕ್ಕೆ ಪ್ರೀಪೇಯ್ಡ್‌ನಲ್ಲಿ ಹಣ ಪಾವತಿಸುವುದರೊಂದಿಗೆ ಚಾರ್ಜ್ ಮಾಡಿಸಿಕೊಳ್ಳಬಹುದು. ಆಗ ಚಾರ್ಜ್ ಮಾಡಿಸಿರುವ ಬಗ್ಗೆ ಲಿಂಕ್ ಆಗಿರುವ ಮೊಬೈಲ್‌ಗೆ ಮೆಸೇಜ್ ಬರುತ್ತದೆ. ಚಾರ್ಜ್ ಮಾಡಿಸಿರುವ ಹಣ ಇನ್ನೇನು ಮುಗಿಯುತ್ತಾ ಬಂದಂತೆ ಕೂಡಲೇ ಚಾರ್ಜ್ ಮಾಡಿಸಿಕೊಳ್ಳಿ ಎಂದು ಗ್ರಾಹಕನಿಗೆ ಆಗಾಗ ಮೆಸೇಜ್ ಎಚ್ಚರಿಸುತ್ತದೆ. ಒಂದು ವೇಳೆ ಚಾರ್ಜ್ ಮಾಡಿಸಿದಷ್ಟು ವಿದ್ಯುತ್ ಬಳಕೆ ಪೂರ್ಣಗೊಂಡರೆ ಅದರ ಮೆಸೇಜ್ ಕೂಡ ಮೊಬೈಲ್‌ಗೆ ಬರುತ್ತದೆ. ಈ ಕೂಡಲೇ ರೀಚಾರ್ಜ್ ಮಾಡಿಸಿಕೊಂಡರೆ ವಿದ್ಯುತ್ ಸಂಪರ್ಕ ಮುಂದುವರೆಯುತ್ತದೆ ಎಂಬ ಸಂದೇಶ ಕೂಡ ಮೊಬೈಲ್‌ಗೆ ರವಾನೆಯಾಗುತ್ತದೆ. ಈಗಿರುವ ವ್ಯವಸ್ಥೆಯಲ್ಲಿ ಬಿಲ್ ಕಟ್ಟದಿದ್ದಾಗ ಚೆಸ್ಕಾಂನವರು ಮನೆಗೆ ಬಂದು ವಿದ್ಯುತ್ ಸಂಪರ್ಕ ಕಡಿತಗೊಳಿಸುತ್ತಾರೆ. ಬಿಲ್ ಪಾವತಿಸಿದರೂ ಆತ ಮತ್ತೆ ವಿದ್ಯುತ್ ಸಂಪರ್ಕ ನೀಡಲು ಸತಾಯಿಸುತ್ತಾರೆ. ಆದರೆ ಪ್ರೀಪೇಯ್ಡ್ ಸ್ಮಾರ್ಟ್ ವಿದ್ಯುತ್ ಮೀಟರ್ ಅಳವಡಿಸಿಕೊಂಡರೆ ಈ ತೊಂದರೆ ಇರುವುದಿಲ್ಲ. ಚಾರ್ಜ್ ಮಾಡಿದ ಕೂಡಲೇ ವಿದ್ಯುತ್ ಸಂಪರ್ಕ ದೊರೆಯುತ್ತದೆ. ಜೊತೆಗೆ ವಿದ್ಯುತ್ ಮೀಟರ್‌ನಲ್ಲಿ ದೋಷ ಉಂಟಾಗಿ ಹೆಚ್ಚಿನ ಬಿಲ್ ಬರುತ್ತಿದೆ ಎಂಬ ಅನುಮಾನ ಬರುವುದು ಕೂಡ ತಪ್ಪುತ್ತದೆ. ಕೆಇಆರ್‌ಸಿ ಇದನ್ನು ಜಾರಿಗೊಳಿಸುವ ಮುನ್ನ ಪ್ರಾಯೋಗಿಕವಾಗಿ ಮೈಸೂರು ಮತ್ತು ಬೆಂಗಳೂರಿನಲ್ಲಿ 100 ಮನೆಗಳಿಗೆ ಪ್ರೀಪೇಯ್ಡ್ ಸ್ಮಾರ್ಟ್ ವಿದ್ಯುತ್ ಮೀಟರ್ ಅಳವಡಿಸಿತ್ತು. ಸುಸೂತ್ರ ನಿರ್ವಹಣೆ ಹಾಗೂ ▶ 8ನೇ ಪುಟಕ್ಕೆ



> "ಪ್ರೀಪೇಯ್ಡ್ ಸ್ಮಾರ್ಟ್ ವಿದ್ಯುತ್ ಮೀಟರ್ ಅಳವಡಿಕೆಯ ವ್ಯವಸ್ಥೆ ಬಹುಪಯೋಗಿಯಾಗಿದೆ. ಇದರಿಂದ ಸೋರಿಕೆ ತಪ್ಪುತ್ತದೆ, ಪಾರದರ್ಶಕತೆ ಇರುತ್ತದೆ. ಒಂದೇ ಬಾರಿ ವಿದ್ಯುತ್ ಬಿಲ್ ಕಟ್ಟುವ ಹೊರೆಯಿಂದ ಗ್ರಾಹಕ ಮುಕ್ತನಾಗಬಹುದು. ಜೊತೆಗೆ ಮಿತವಾಗಿ ವಿದ್ಯುತ್ ಬಳಸಬಹುದು ಎಂದು ಗ್ರಾಹಕ ಅರಿತುಕೊಳ್ಳುತ್ತಾನೆ. ಪ್ರತಿ ವರ್ಷ ಗ್ರಾಹಕ ವಿದ್ಯುತ್ ಬಿಲ್ ಜೊತೆ ಠೇವಣಿ ಹಣ ಕಟ್ಟುವುದು ಇದರಿಂದ ತಪ್ಪುತ್ತದೆ. **–ಪ್ರಭಾಕರ್, ಕೆಇಆರ್‌ಸಿ ಸಲಹಾ ಸಮಿತಿ ಮಾಜಿ ಸದಸ್ಯ**



> "ಪ್ರೀಪೇಯ್ಡ್ ಸ್ಮಾರ್ಟ್ ವಿದ್ಯುತ್ ಮೀಟರ್ ವ್ಯವಸ್ಥೆ ಕೈಗಾರಿಕೋದ್ಯಮಿಗಳ ಬಹುದಿನದ ಹೋರಾಟದ ಫಲವಾಗಿದೆ. ನೂತನ ವ್ಯವಸ್ಥೆ ಕೈಗಾರಿಕೆಗಳಿಗೆ ಬಹುಪಯೋಗಿ. ಕೈಗಾರಿಕೆಗಳು ಲಕ್ಷಾಂತರ ರೂ. ಹಣವನ್ನು ಠೇವಣಿಯಾಗಿ ಇಟ್ಟಿವೆ. ಎಸ್ಕಾಂಗಳು ಠೇವಣಿಗೆ ಕೇವಲ 4.5 ಬಡ್ಡಿ ಮಾತ್ರ ನೀಡುತ್ತಿದೆ. ಸ್ಮಾರ್ಟ್ ವಿದ್ಯುತ್ ಮೀಟರ್ ಅಳವಡಿಸಿಕೊಂಡರೆ ಕಾರ್ಖಾನೆಗಳ ಲಕ್ಷಾಂತರ ರೂಪಾಯಿ ಠೇವಣಿ ಹಣ ವಾಪಸು ಬರುತ್ತದೆ. ಜೊತೆಗೆ ಪ್ರತಿ ವರ್ಷ ಠೇವಣಿ ಹಣ ಪಾವತಿಸುವುದು ತಪ್ಪುತ್ತದೆ.
> **–ಸುರೇಶ್‌ಕುಮಾರ್‌ಜೈನ್, ಪ್ರಧಾನ ಕಾರ್ಯದರ್ಶಿ, ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಉದ್ಯಮಿಗಳ ಪರಿಷತ್**

ಮೈಸೂರು ಮಿತ್ರ
ಸೋಮವಾರ 21 ಆಗಸ್ಟ್ 2023

ಚಂದ್ರಯಾನ 3: ಆ.23ರ ಸಂಜೆ 6:04ಕ್ಕೆ ಚಂದ್ರನ ಮೇಲೆ ಇಳಿಯಲಿದೆ ISRO ನೌಕೆ




ಶ್ರೀಹರಿಕೋಟಾ: ಚಂದ್ರಯಾನ–3ರ ಎರಡನೆಯ ಮತ್ತು ಕೊನೆಯ ಡಿ–ಬೂಸ್ಟಿಂಗ್ ಕಾರ್ಯ (ಲ್ಯಾಂಡರ್‌ನ ವೇಗ ತಗ್ಗಿಸುವ ಪ್ರಕ್ರಿಯೆ) ಇಂದು (ಭಾನುವಾರ) ಬೆಳಗ್ಗೆ ಯಶಸ್ವಿಯಾಗಿ ಪೂರ್ಣಗೊಂಡ ಬೆನ್ನಲ್ಲೇ ಚಂದ್ರಯಾನ 3 ನೌಕೆ ಚಂದ್ರನ ಮೇಲ್ಮೈ ಮೇಲೆ ಲ್ಯಾಂಡಿಂಗ್ ಆಗುವ ದಿನಾಂಕ ಘೋಷಣೆ ಮಾಡಿದೆ. ನೌಕೆಯು ಚಂದ್ರನ ಅಂತಿಮ ಕಕ್ಷೆಯನ್ನು ತಲುಪಿದ್ದು, ದಕ್ಷಿಣ ಧ್ರುವದಲ್ಲಿ ಲ್ಯಾಂಡ್ ಆಗಬೇಕಿದೆ. ಇದಕ್ಕೆ ಇದೀಗ ಇಸ್ರೋ ಮುಹೂರ್ತ ನಿಗದಿಪಡಿಸಿದ್ದು, ಆಗಸ್ಟ್ 23ರ ಬುಧವಾರ ಸಂಜೆ 6:04ಕ್ಕೆ ನೌಕೆ ಚಂದ್ರನ ಮೇಲೆ ಲ್ಯಾಂಡ್ ಆಗಲಿದೆ.

ಪ್ರಸ್ತುತ ವಿಕ್ರಮ್ ಲ್ಯಾಂಡರ್ ಚಂದ್ರನಿಗೆ ಅತ್ಯಂತ ಸಮೀಪವಿರುವ ಬಿಂದು 25 ಕಿಮೀ ಮತ್ತು ಚಂದ್ರನಿಂದ 134 ಕಿಮೀ ದೂರದ ಕಕ್ಷೆಯನ್ನು ತಲುಪಿದೆ. ಈ ಕಕ್ಷೆಯಿಂದಲೇ ದಕ್ಷಿಣ ಧ್ರುವ ಪ್ರದೇಶದಲ್ಲಿ ಸಾಫ್ಟ್ ಲ್ಯಾಂಡಿಂಗ್ ಪ್ರಯತ್ನಿಸುತ್ತದೆ ಎಂದು ಇಸ್ರೊ ಹೇಳಿದೆ. 2ನೇ ಮತ್ತು ಅಂತಿಮ ಡಿ ಬೂಸ್ಟಿಂಗ್ ಕಾರ್ಯಾಚರಣೆಯು ಚಂದ್ರನ ಕಕ್ಷೆಯನ್ನು 25 km x 134 km ನಷ್ಟು ಸನಿಹಕ್ಕೆ ತಲುಪಿದೆ. ಮಾಡ್ಯೂಲ್ ಆಂತರಿಕ ತಪಾಸಣೆಗೆ ಒಳಗಾಗುತ್ತದೆ ಮತ್ತು ನಿರ್ದಿಷ್ಟಪಡಿಸಿದ ಲ್ಯಾಂಡಿಂಗ್ ಸೈಟ್‌ನಲ್ಲಿ ಸೂರ್ಯೋದಯಕ್ಕಾಗಿ ಕಾಯುತ್ತಿದೆ. ಚಂದ್ರನ ಮೇಲೆ ಇಳಿಯುವ ಪ್ರಕ್ರಿಯೆಯು ಆ.23ರಂದು ಬೆಳಗ್ಗೆ ಸ್ಥಳೀಯ ಕಾಲಮಾನ 17.45 ಗಂಟೆಗಳಲ್ಲಿ ಪ್ರಾರಂಭವಾಗುವ ನಿರೀಕ್ಷೆಯಿದೆ. ಲ್ಯಾಂಡರ್ ವಿಕ್ರಮ್ ಸ್ವಯಂಚಾಲಿತ ಕ್ರಮದಲ್ಲಿ ಚಂದ್ರನ ಕಕ್ಷೆಯಲ್ಲಿ ಇಳಿಯುತ್ತಿದೆ; ಹೇಗೆ ಹೋಗಬೇಕೆಂದು ಅದು ತಾನಾಗಿಯೇ ನಿರ್ಧರಿಸುತ್ತದೆ ಎಂದು ಇಸ್ರೊ ಟ್ವಿಟರ್‌ನಲ್ಲಿ ತಿಳಿಸಿದೆ.

25 ಕಿಲೋ ಮೀಟರ್ ಹಾಗೂ 134 ಕಿಲೋ ಮೀಟರ್ ಕಕ್ಷೆ ಚಂದ್ರನ ಸಮೀಪದ ಕಕ್ಷೆಯಾಗಿದ್ದು ಚಂದ್ರನ ಮೇಲೆ ಇಳಿಯುವ ಪ್ರಕ್ರಿಯೆ ಆಗಸ್ಟ್ 23ರಂದು ನಡೆಯಲಿದೆ. ಹೀಗಾಗಿ ಇಡೀ ಜಗತ್ತು ಭಾರತದ ಕಡೆ ಕಣ್ಣಿಟ್ಟು ಕಾಯುತ್ತಿದೆ.

ಚಂದ್ರನ ಮೇಲೆ ಲ್ಯಾಂಡಿಂಗ್: ಈ ಬಾರಿ ಇಸ್ರೋ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಚಂದ್ರನ ಯೋಜನೆಗೆ ಸಿದ್ಧತೆ ನಡೆಸಿತ್ತು. ಹೀಗಾಗಿ 'ಚಂದ್ರಯಾನ–3' ಲ್ಯಾಂಡರ್ ಹೈಫೈ ಆಗಿದೆ. ಲ್ಯಾಂಡರ್ ಪೊಸಿಷನ್ ಡಿಟೆಕ್ಷನ್ ಕ್ಯಾಮೆರಾ (LPDC) ಕೂಡ ಅತ್ಯಾಧುನಿಕ ತಂತ್ರಜ್ಞಾನವೇ ಆಗಿದೆ. ಇದು ವಿಕ್ರಮ್ ಲ್ಯಾಂಡರ್ ತನಗಾಗಿ ಸರಿಯಾದ ಮತ್ತು ಸಮತಟ್ಟು ಲ್ಯಾಂಡಿಂಗ್ ಸ್ಥಳ ಹುಡುಕಲು ಸಹಾಯ ಮಾಡುತ್ತದೆ. ಕ್ಯಾಮರಾದ ಸಹಾಯದಿಂದ ವಿಕ್ರಮ್ ಲ್ಯಾಂಡರ್ ಎಲ್ಲಿ ಇಳಿಯುತ್ತಿದೆ, ಹೇಗೆ ಇಳಿಯುತ್ತಿದೆ ಎಂಬುದನ್ನು ನೋಡಬಹುದು.

ಚಂದ್ರಯಾನ ಕೈಗೊಂಡಿದ್ದ ರಷ್ಯಾದ ಲೂನಾ–25 ಬಾಹ್ಯಾಕಾಶ ನೌಕೆ ಚಂದ್ರನ ಮೇಲ್ಮೈ ಮೇಲೆ ಪತನ



ಮಾಸ್ಕೋ: ಇಸ್ರೋದ ಚಂದ್ರಯಾನ–3 ಬೆನ್ನಲ್ಲೇ ರಷ್ಯಾ ಕೈಗೊಂಡಿದ್ದ ಚಂದ್ರಯಾನ ನೌಕೆ ತಾಂತ್ರಿಕ ದೋಷದಿಂದ ಚಂದ್ರನ ಮೇಲ್ಮೈ ಮೇಲೆ ಇಳಿಯುವ ಒಂದು ದಿನದ ಮೊದಲೇ ಪತನವಾಗಿದೆ. ತಾಂತ್ರಿಕ ದೋಷದಿಂದ ಚಂದ್ರನ ಮೇಲ್ಮೈ ಮೇಲೆ ಇಳಿಯುವ ಒಂದು ದಿನದ ಮೊದಲೇ ರಷ್ಯಾದ 'ಲೂನಾ–25' ಬಾಹ್ಯಾಕಾಶ ನೌಕೆ ಪತನಗೊಂಡಿದೆ. ಚಂದ್ರನಲ್ಲಿ ಘನೀಕರಣಗೊಂಡಿರುವ ನೀರು ಮತ್ತು ಅಮೂಲ್ಯ ಅಂಶಗಳಿರುವ ಕುರಿತು ಅನ್ವೇಷಣೆ ನಡೆಸಲು ಉದ್ದೇಶದಿಂದ 'ಲೂನಾ–25' ನೌಕೆಯನ್ನು ಆಗಸ್ಟ್ 11ರಂದು ರಷ್ಯಾ ಉಡಾವಣೆ ಮಾಡಿತ್ತು. ನೌಕೆಯು ಸೋಮವಾರ(ಆಗಸ್ಟ್ 21) ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿಯಲು ಸಮಯ ನಿಗದಿ ಮಾಡಲಾಗಿತ್ತು.

ಆಗಸ್ಟ್ 21ಕ್ಕೆ ಚಂದ್ರನ ಮೇಲೆ ನೌಕೆಯನ್ನು ಇಳಿಸಲು ಯೋಜಿಸಲಾಗಿತ್ತು. ಇದರನ್ವಯ ಶನಿವಾರ ಪ್ರೀ ಲ್ಯಾಂಡಿಂಗ್ ಕಕ್ಷೆಗೆ ನೌಕೆಯನ್ನು ತರುವ ಕೆಲಸ ನಡೆದಿತ್ತು. ಸುಮಾರು 11 ಗಂಟೆಯ ವೇಳೆ ನೌಕೆಯಲ್ಲಿ ತಾಂತ್ರಿಕ ದೋಷ ಕಂಡು ಬಂದಿತ್ತು. ಯೋಜಿತ ಕಕ್ಷೆಗೆ ನೌಕೆಯು ಹೋಗಲು ವಿಫಲವಾಗಿದ್ದು, ಪತನಗೊಂಡಿದೆ ಎಂದು ರಷ್ಯಾದ ಬಾಹ್ಯಾಕಾಶ ಸಂಸ್ಥೆ 'ರೊಸ್ಕೋಸ್ಮಾಸ್' ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಇದರಿಂದ ಚಂದ್ರನ ದಕ್ಷಿಣ ಧ್ರುವದ ಮೇಲೆ ಸಾಫ್ಟ್ ಲ್ಯಾಂಡ್ ಮಾಡಿದ ಮೊದಲ ರಾಷ್ಟ್ರವಾಗಬೇಕು ಎಂಬ ರಷ್ಯಾದ ಕನಸು ಭಗ್ನವಾಗಿದೆ. ಭಾರತದ ಚಂದ್ರಯಾನ–3 ನೌಕೆ ಬುಧವಾರ (ಆಗಸ್ಟ್ 23) ಚಂದ್ರನ ಮೇಲೆ ಸಾಫ್ಟ್ ಲ್ಯಾಂಡಿಂಗ್ ಮಾಡಲಿದೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಪ್ರಕಾರ, ಚಂದ್ರಯಾನ–3 ಆಗಸ್ಟ್ 23, 2023 (ಬುಧವಾರ), ಸಂಜೆ 6–04ಕ್ಕೆ ಚಂದ್ರನ ಮೇಲೆ ಇಳಿಯಲಿದೆ. ಇದು ಸಾಧ್ಯವಾದರೆ ಅಮೆರಿಕ, ರಷ್ಯಾ ಮತ್ತು ಚೀನಾ ನಂತರ ಈ ಸಾಧನೆ ಮಾಡಿದ ವಿಶ್ವದ ನಾಲ್ಕನೇ ರಾಷ್ಟ್ರ ಎಂಬ ಕೀರ್ತಿಗೆ ಭಾರತ ಭಾಜನವಾಗಲಿದೆ.

ಇಂದು, ನಾಳೆ ವಿಚಾರ ಸಂಕಿರಣ

ಮೈಸೂರು,ಆ.20– ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಕರ್ನಾಟಕ ಸರ್ಕಾರ ಮತ್ತು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ವತಿಯಿಂದ ಆ.21 ಮತ್ತು 22ರಂದು 'ಭಾರತದಲ್ಲಿ ಬುಡಕಟ್ಟು ಪರಿವರ್ತನೆ: ಸಮಸ್ಯೆಗಳು ಮತ್ತು ಸವಾಲುಗಳು' ವಿಚಾರದ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣವನ್ನು ನಗರದ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಚಾಮರಾಜನಗರ ವಿವಿ ಉಪಕುಲಪತಿ ಪ್ರೊ.ಎಂ.ಆರ್.ಗಂಗಾಧರ್, ಆ.21ರಂದು ಬೆಳಗ್ಗೆ 10.30ಕ್ಕೆ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿರ್ದೇಶಕ ಬಿ.ಕಲ್ಲೇಶ್ ಅಧ್ಯಕ್ಷತೆ ವಹಿಸುವರು. ಆ.22ರಂದು ಸಂಜೆ 4.30ಕ್ಕೆ ಸಮಾರೋಪ ಸಮಾರಂಭ ಹಮ್ಮಿಕೊಂಡಿದ್ದು, ಮೈಸೂರು ವಿವಿ ಮಾನವಶಾಸ್ತ್ರ ಅಧ್ಯಯನ ವಿಭಾಗದ ನಿವೃತ ಪ್ರಾಧ್ಯಾಪಕ ಪ್ರೊ.ಹೆಚ್.ಕೆ.ಭಟ್ ಅಧ್ಯಕ್ಷತೆ ವಹಿಸುವರು. ಕನ್ನಡ ವಿವಿ ಹಂಪಿಯ ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಕೆ.ಎಂ.ಮೇತ್ರಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಎಂಎಸ್ಸಿ ಮಾಲಿಕ್ಯುಲರ್ ಬಯಾಲಜಿ ಕೋರ್ಸಿಗೆ ಅರ್ಜಿ

ಮೈಸೂರು, ಆ. 20– ಯುವರಾಜ ಕಾಲೇಜಿನಲ್ಲಿ ಐದು ವರ್ಷಗಳ ಇಂಟಿಗ್ರೇಟೆಡ್ ಎಂ.ಎಸ್ಸಿ. ಮಾಲಿಕ್ಯುಲರ್ ಬಯಾಲಜಿ ಕೋರ್ಸಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಕೋರ್ಸು ಉದ್ಯಮ ಹಾಗೂ ಸಂಶೋಧನಾ ರಂಗಗಳಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡುತ್ತದೆ.

ಈ ಕೋರ್ಸಿಗೆ ಪಿಯುಸಿ/10+2/ರ ಸಮಾನ ವಿದ್ಯಾರ್ಹತೆಯುಳ್ಳ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಕೋರ್ಸಿಗೆ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2020ರ ಅನುಸಾರ ಪ್ರವೇಶಾತಿ ಬಯಸಿ ಬರುವ ಅರ್ಹ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಇಲಾಖೆಯಿಂದ ಕಲ್ಪಿಸುವ UUCMS-Admission Portal https://uucms.kar nataka.gov.in ವೆಬ್‌ಸೈಟ್‌ನ ಮೂಲಕ ಸೆ.8ರವರೆಗೆ ಅರ್ಜಿ ಸಲ್ಲಿಸಬೇಕು. ಅರ್ಜಿಗಳನ್ನು ವಿದ್ಯಾರ್ಥಿಗಳು ಒಂದು ಸೆಟ್ ಪ್ರಿಂಟ್ ತೆಗೆದುಕೊಂಡು ಪ್ರವೇಶಾತಿ ಸಮಯದಲ್ಲಿ ಕಾಲೇಜಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಾಲೇಜಿನ ವೆಬ್‌ಸೈಟ್ ನೋಡಬಹುದು ಮತ್ತು ಸಂಯೋಜನಾಧಿಕಾರಿಗಳನ್ನು ಕಚೇರಿ ಅವಧಿಯಲ್ಲಿ ಅಥವಾ ಇ–ಮೇಲ್ ಐಡಿ ycmmb2010@gmail.com/nodalofficernep@ycm.uni-mysore.ac.in. ಮೂಲಕ ಸಂಪರ್ಕಿಸಬಹುದು.

ನಿಧನ

ತುಳಸಮ್ಮ



ಮೈಸೂರು,ಆ.20–ಮೈಸೂರು ಕನ್ನಡ ವೇದಿಕೆ ಕಾರ್ಯದರ್ಶಿ ಕುಮಾರ್‌ರವರ ತಾಯಿ ಶ್ರೀಮತಿ ತುಳಸಮ್ಮ(90) ಅವರು ಇಂದು ಬೆಳಗ್ಗೆ ಕುವೆಂಪುನಗರದ ನಿವಾಸದಲ್ಲಿ ನಿಧನರಾದರು. ಮೃತರು ಅಪಾರ ಬಂಧುವರ್ಗ ಅಗಲಿದ್ದು, ಅಂತ್ಯಕ್ರಿಯೆ ಜಯನಗರ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಮೈಸೂರು ಕನ್ನಡ ವೇದಿಕೆ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.

ಎನ್.ನಟರಾಜು



ಮಂಡ್ಯ ತಾಲೂಕು ಕೋಡಿಯಾಲ ಗ್ರಾಮದ ಎನ್. ನಟರಾಜು (62) ಇಂದು ನಿಧನರಾದರು. ಇವರು ದಿವಂಗತ ಬಿ.ವಿ. ನಾರಾಯಣಯ್ಯ ಅವರ ಪುತ್ರ. ಕೋಡಿಯಾಲ ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷರೂ ಆದ ಇವರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ನೇಕಾರ ಉದ್ಯಮಿಯಾಗಿದ್ದ ಇವರ ಅಂತ್ಯಕ್ರಿಯೆ ಗ್ರಾಮದ ರುದ್ರಭೂಮಿಯಲ್ಲಿ ಇಂದು ಸಂಜೆ ನೆರವೇರಿತು.

ಎಲ್ಲವೂ ಇದ್ದು ಆರೋಗ್ಯ ಇಲ್ಲದಿದ್ದಲ್ಲಿ ಇದ್ದದ್ದು ವ್ಯರ್ಥ

● ಶಾಸಕ ಜಿ.ಟಿ.ದೇವೇಗೌಡರ ವಾಸ್ತವ ನುಡಿ ● ಪೇಜಾವರ ವಿಶ್ವಪ್ರಸನ್ನ ತೀರ್ಥರ ಚಾತುರ್ಮಾಸ್ಯ ಅಂಗವಾಗಿ ಬೃಹತ್ ಉಚಿತ ಆಯುರ್ವೇದ ಆರೋಗ್ಯ ತಪಾಸಣೆ

ಮೈಸೂರು, ಆ.20(ಜಿಎ)–ಜೀವನದಲ್ಲಿ ಎಷ್ಟೇ ಆಸ್ತಿ, ಐಶ್ವರ್ಯ ಇದ್ದರೂ, ಆರೋಗ್ಯವಿಲ್ಲದಿದ್ದರೆ ಜೀವನವೇ ಶೂನ್ಯ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರ 36ನೇ ಚಾತುರ್ಮಾಸ್ಯ ವ್ರತದ ಅಂಗವಾಗಿ ಲಯನ್ಸ್ ಇಂಟರ್‌ನ್ಯಾಷನಲ್ ಮತ್ತು ರೋಟರಿ ಇನ್ನರ್‌ವ್ಹೀಲ್ ವತಿಯಿಂದ ಸರಸ್ವತಿಪುರಂನ ಶ್ರೀ ಕೃಷ್ಣಧಾಮದಲ್ಲಿ ಆಯೋಜಿಸಿದ್ದ ಬೃಹತ್ ಉಚಿತ ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಕ್ಕಳಿಗೆ ಮಾನವೀಯ ಮೌಲ್ಯ ಕಲಿಸಬೇಕು. ನಮ್ಮ ಮೂಲ ಧರ್ಮ, ಸಂಸ್ಕೃತಿ–ಸಂಸ್ಕಾರದ ಪಾಠ ಹೇಳಿಕೊಡಬೇಕು. ಹೀಗೆ ಮಕ್ಕಳಲ್ಲಿ ಶಿಕ್ಷಣ ಮತ್ತು ಸಂಸ್ಕೃತಿ ನೀಡಿದರೆ ಮಾತ್ರ ಸಮಾಜ ಅಭಿವೃದ್ಧಿ ಹೊಂದಲು ಸಾಧ್ಯ. ವೈದ್ಯರು ಸಾಮಾಜಿಕ ಕಳಕಳಿ ಹೊಂದಬೇಕು. ಇದು ದೇವಲೋಕವಲ್ಲ, ವೈದ್ಯರಲೋಕ. ವೈದ್ಯರು ಸಮರ್ಪಣಾ ಭಾವದಿಂದ ಸೇವೆ ಸಲ್ಲಿಸುವಂತಾಗಬೇಕು. ವಾಣಿಜ್ಯೀಕರಣಗೊಂಡಿರುವ ಈ ಕಾಲದಲ್ಲಿಯೂ ಅನೇಕ ವೈದ್ಯರು ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಪ್ರಶಂಸಿಸಿದರು.

ಈ ಹಿಂದೆ ಇದ್ದ ಪೇಜಾವರ ಶ್ರೀಗಳಿಗೆ ನನ್ನ ಕಂಡರೆ ಅಚ್ಚು–ಮೆಚ್ಚು ವಿಶೇಷ ಒಲವು. ಅವರ ಕನಸು, ಗುರಿ ಎಲ್ಲವನ್ನು ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಹಾಗೇ ನಾವೂ ದ್ವೇಷ ಅಸೂಯೆ ಬಿಟ್ಟು ಬಿಡೋಣ. ನಮ್ಮ ಉತ್ತಮ ನಡೆ ಜೀವನದಲ್ಲಿ ಮುಖ್ಯ. ಸ್ವಾಮೀಜಿ ಅವರು ತೋರಿಸಿದ ಮಾರ್ಗದಲ್ಲಿ ಸಾಗೋಣ. ಸಮಯವನ್ನು ವ್ಯರ್ಥ ಮಾಡುವುದು ಬೇಡ. ಜನರ ಸೇವೆ ಮಾಡುವ ಮೂಲಕ ಜೀವನವನ್ನು ಸಾರ್ಥಕಪಡಿಸಿಕೊಳ್ಳೋಣ ಎಂದು ತಿಳಿಸಿದರು.



ಸರಸ್ವತಿಪುರಂನ ಶ್ರೀ ಕೃಷ್ಣಧಾಮದಲ್ಲಿ ಆಯೋಜಿಸಿದ್ದ ಬೃಹತ್ ಉಚಿತ ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರದಲ್ಲಿ ವೈದ್ಯಕೀಯ ಮೌಲ್ಯಮಾಪನ ಮತ್ತು ರೇಟಿಂಗ್ ಬೋರ್ಡ್ ಫಾರ್ ಇಂಡಿಯನ್ ಸಿಸ್ಟಮ್ ಆಫ್ ಮೆಡಿಸಿನ್ (MARBISM) ಅಧ್ಯಕ್ಷ ಡಾ.ರಘುರಾಮ್ ಭಟ್ ಅವರಿಗೆ 'ಕೃಷ್ಣಾನುಗ್ರಹ' ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ನಂತರ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅವರು ಮಾತನಾಡಿ, ಪ್ರತಿಯೊಬ್ಬರು ದೈಹಿಕ ಹಾಗೂ ಮಾನಸಿಕ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು. ಉತ್ತಮ ಜೀವನಶೈಲಿ, ಮಿತವಾದ ಸಾತ್ವಿಕ ಆಹಾರದ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು. ಜೀವನದಲ್ಲಿ ಉತ್ತಮ ಗುಣಗಳನ್ನು ಮೈಗೂಡಿಸಿಕೊಳ್ಳುವ ಮೂಲಕ ಸಮಾಜಕ್ಕೆ ಉತ್ತಮ ವ್ಯಕ್ತಿಗಳಾಗಬೇಕು ಎಂದು ಸಲಹೆ ನೀಡಿದರು.

ರಾಮಕೃಷ್ಣ ಆಶ್ರಮದ ಮಹಾಮೇಧಾನಂದ ಸ್ವಾಮೀಜಿ ಮಾತನಾಡಿ, ರೋಗಿಯೇ ನಾರಾಯಣ. ರೋಗಿಯಾಗಿ ತಮ್ಮ ಮುಂದೆ ಬಂದಿರುವುದು ನಾರಾಯಣ, ಅವನ ಸೇವೆಯನ್ನು ಮಾಡಿದರೆ, ಅದು ಪೂಜೆಗೆ ಸಮಾನ. ಇದರಿಂದ ಅವನಿಗೆ ಗುಣವಾಗುವುದರ ಜೊತೆಗೆ ನಮ್ಮ ಮನಸ್ಸು ಪವಿತ್ರವಾಗುತ್ತದೆ. ಮಾಡುವ ಪ್ರತಿಯೊಂದು ಸೇವೆಯನ್ನು ಭಗವಂತನ ಸೇವೆಯೆಂದು ಮಾಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವೈದ್ಯಕೀಯ ಮೌಲ್ಯಮಾಪನ ಮತ್ತು ರೇಟಿಂಗ್ ಬೋರ್ಡ್ ಫಾರ್ ಇಂಡಿಯನ್ ಸಿಸ್ಟಮ್ ಆಫ್ ಮೆಡಿಸಿನ್ (MARBISM) ಅಧ್ಯಕ್ಷ ಡಾ.ರಘುರಾಮ್ ಭಟ್ ಅವರಿಗೆ 'ಕೃಷ್ಣಾನುಗ್ರಹ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಶಿಬಿರದಲ್ಲಿ ರಕ್ತ ಪರೀಕ್ಷೆ, ಹೃದ್ರೋಗ, ಹಲ್ಲು, ನೇತ್ರ ತಪಾಸಣೆಯನ್ನು ನುರಿತ ಆಯುರ್ವೇದ ತಜ್ಞ ವೈದ್ಯರು ನಡೆಸಿದರು. ನೂರಾರು ಮಂದಿ ಆರೋಗ್ಯ ಶಿಬಿರದ ಪ್ರಯೋಜನ ಪಡೆದುಕೊಂಡರು. ಆದಿಚುಂಚನಗಿರಿ ವಿಶ್ವವಿದ್ಯಾಲಯ ಉಪಕುಲಪತಿ ಎಂ.ಎ.ಶೇಖರ್, ಪ್ರಾಚಾರ್ಯ ರಾಧಾಕೃಷ್ಣ ರಾಮರಾವ್, ಆಯುರ್ವೇದ ತಜ್ಞ ಬಿ.ಗುರುಬಸವರಾಜ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಲಕ್ಷ್ಮಿನಾರಾಯಣ ಶೆಣೈ, ರಮ್ಯ ಅಶೋಕ್, ರವಿಚಂದ್ರ ಕುಲಕರ್ಣಿ, ವಾಸುದೇವಭಟ್, ಎಂ.ಕೃಷ್ಣದಾಸ್ ಪುರಾಣಿಕ್, ರವಿಶಾಸ್ತ್ರಿ, ಪುಟ್ಟಣ್ಣ ಭಟ್, ಕೆ.ಎಸ್. ಗುರುರಾಜ, ಸುಬ್ರಮಣ್ಯ ಆರ್.ತಂತ್ರಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಫೋಟೋಗ್ರಫಿ ಅಸೋಸಿಯೇಷನ್ ವತಿಯಿಂದ ಕಲಾಮಂದಿರದ ಸುಚಿತ್ರ ಆರ್ಟ್ ಗ್ಯಾಲರಿಯಲ್ಲಿ ಆಯೋಜಿಸಿದ್ದ ಛಾಯಾಚಿತ್ರ ಪ್ರದರ್ಶನದಲ್ಲಿ ಪ್ರಶಸ್ತಿ ಪಡೆದ 'ಮೈಸೂರು ಮಿತ್ರ' ಛಾಯಾಗ್ರಾಹಕ ಎಂ.ಎನ್.ಲಕ್ಷ್ಮಿನಾರಾಯಣ್ ಯಾದವ್, ಪತ್ರಿಕಾ ಛಾಯಾಗ್ರಾಹಕ ಎಸ್.ಆರ್.ಮದುಸೂಧನ್, ಛಾಯಾಗ್ರಾಹಕ ರವಿಶಂಕರ್ ಅವರಿಗೆ ಶಾಸಕ ತನ್ವೀರ್ ಸೇಠ್, ವಿಧಾನ ಪರಿಷತ್ ಸದಸ್ಯರಾದ ಎ.ಹೆಚ್.ವಿಶ್ವನಾಥ್, ಮರಿತಿಬ್ಬೇಗೌಡ ಅವರು ಪ್ರಶಸ್ತಿ ವಿತರಿಸಿದರು. ಈ ಸಂದರ್ಭದಲ್ಲಿ ಮೈಸೂರು ಫೋಟೋಗ್ರಾಫರ್ ಅಸೋಸಿಯೇಷನ್ ಅಧ್ಯಕ್ಷ ಶಾಂತಪ್ಪ, ಕಾರ್ಯದರ್ಶಿ ಶೇಷಾದ್ರಿ, ಮುರುಳಿ ಇನ್ನಿತರರು ಉಪಸ್ಥಿತರಿದ್ದರು.

ಫಿಫಾ ಫುಟ್‌ಬಾಲ್: ಇಂಗ್ಲೆಂಡ್ ಮಣಿಸಿ ಮೊದಲ ವನಿತಾ ವಿಶ್ವಕಪ್ ಗೆದ್ದ ಸ್ಪೇನ್



ಸಿಡ್ನಿ: ಭಾನುವಾರ ನಡೆದ ರೋಚಕ ಫೈನಲ್‌ನಲ್ಲಿ ಓಲ್ಗಾ ಕಾರ್ಮೋನಾ ಅವರ ಮೊದಲಾರ್ಧದ ಅಮೋಘ ಗೋಲ್‌ನೊಂದಿಗೆ ಸ್ಪೇನ್ ಇಂಗ್ಲೆಂಡ್ ವಿರುದ್ಧ 1–0 ಗೆಲುವಿನೊಂದಿಗೆ ಮೊದಲ ಬಾರಿಗೆ ಫಿಫಾ ವನಿತಾ ಫುಟ್‌ಬಾಲ್ ವಿಶ್ವಕಪ್ ಅನ್ನು ಗೆದ್ದುಕೊಂಡಿದೆ.

ಎರಡೂ ತಂಡಗಳು ಮೊದಲ ಬಾರಿಗೆ ಫೈನಲ್‌ನಲ್ಲಿ ಆಡಿದ್ದು. ಈ ಗೆಲುವು ಸ್ಪ್ಯಾನಿಷ್ ವನಿತೆಯರಿಗೆ ಅವರ ಮೊದಲ ಪ್ರಮುಖ ಅಂತಾರಾಷ್ಟ್ರೀಯ ಟ್ರೋಫಿ ಮುಡಿಗೇರಿಸುವಂತೆ ಮಾಡಿತು. ಕಳೆದ ವರ್ಷ 05ಸಿ ಯುರೋಪಿಯನ್. ಚಾಂಪಿಯನ್‌ಶಿಪ್‌ನಲ್ಲಿ ಚಾಂಪಿಯನ್ ಇಂಗ್ಲೆಂಡ್‌ಗೆ ಕ್ವಾರ್ಟರ್ ಫೈನಲ್ ಸೋಲಿನ ಸೇಡು ತೀರಿಸಿಕೊಂಡಿತು.

ತ.ನಾಡಿಗೆ ನೀರು ಬಿಟ್ಟು ಕನ್ನಡಿಗರು, ನಾಡಿನ ರೈತರಿಗೆ ಸರ್ಕಾರದಿಂದ ದ್ರೋಹ

ಪ್ರತಿಭಟನೆ ನಂತರ ವಾಟಾಳ್ ನಾಗರಾಜ್ ಆಕ್ರೋಶ



ಮೈಸೂರು,ಆ.20(ಪಿಎಂ)– ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಸೂಚಿಸಿದಷ್ಟು ನೀರು ತಮಿಳುನಾಡಿಗೆ ಹರಿದು ಹೋಗಿದ್ದು, ಇದು ಕನ್ನಡಿಗರು, ನಾಡಿನ ರೈತರಿಗೆ ಸರ್ಕಾರ ಮಾಡಿದ ದ್ರೋಹ. ಇಷ್ಟೆಲ್ಲಾ ನೀರು ಬಿಟ್ಟು ಆ.23ರಂದು ಸರ್ವಪಕ್ಷಗಳ ಸಭೆ ಕರೆದಿರುವುದು ಏಕೆ ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಜಯಚಾಮರಾಜ ಒಡೆಯರ್ ವೃತ್ತದಲ್ಲಿ (ಹಾರ್ಡಿಂಗ್ ವೃತ್ತ) ಭಾನುವಾರ ಕಾವೇರಿ ನೀರನ್ನು ತಮಿಳುನಾಡಿಗೆ ಬಿಡದಂತೆ ಒತ್ತಾಯಿಸಿ ಬೆಂಬಲಿಗರೊಂದಿಗೆ ಪ್ರತಿಭಟನೆ ನಡೆಸಿ, ಬಳಿಕ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು. ರಾಜ್ಯದಲ್ಲಿ ನಿಜಲಿಂಗಪ್ಪ ಅವರಿಂದ ಹಿಡಿದು ಸಿದ್ದರಾಮಯ್ಯನವರವರೆಗೂ ನೋಡಿದ್ದೇವೆ. ಬಂಗಾರಪ್ಪ ಅವರನ್ನು ಬಿಟ್ಟರೆ ಉಳಿದೆಲ್ಲಾ ಮುಖ್ಯಮಂತ್ರಿಗಳು ತಮಿಳುನಾಡಿಗೆ ನೀರು ಬಿಟ್ಟಿದ್ದಾರೆ. ನಿರ್ವಹಣಾ ಪ್ರಾಧಿಕಾರದವರು ನೀರು ಬಿಡಿ ಎಂದಾಕ್ಷಣ ನಮ್ಮ ಸರ್ಕಾರ ಹೇಳದೇ ಕೇಳದೇ ನೀರು ಬಿಟ್ಟಿದೆ. ಇದರಿಂದ ಬೇಕಾದಷ್ಟು ನೀರು ಹರಿದು ಹೋಗಿದೆ. ಪ್ರಾಧಿಕಾರದವರು ನೀರು ಬಿಡಿ ಎಂದಾಗ, ವಿರೋಧ ಪಕ್ಷಗಳು, ರೈತರು, ಕನ್ನಡ ಚಳವಳಿಗಾರರು ಎಲ್ಲರನ್ನೂ ಕರೆದು ಚರ್ಚಿಸಬಹುದಿತ್ತು. ಆದರೆ ಸರ್ಕಾರ ಅದನ್ನು ಮಾಡಲಿಲ್ಲ ಎಂದು ಕಿಡಿಕಾರಿದರು.

ಪ್ರತಿದಿನ 10 ಸಾವಿರ ಕ್ಯೂಸೆಕ್ ನೀರನ್ನು 15 ದಿನಗಳ ಕಾಲ ಈಗಾಗಲೇ ಬಿಡಲಾಗುತ್ತಿದೆ. ಈಗ ತಮಿಳುನಾಡು ಸರ್ಕಾರ 15 ಸಾವಿರ ಕ್ಯೂಸೆಕ್ ನೀರು ಕೊಡಬೇಕೆಂದು ಸುಪ್ರೀಂಕೋರ್ಟ್‌ಗೆ ಹೋಗಿದೆ. ತಮಿಳುನಾಡಿನಲ್ಲಿ ನಮಗಿಂತ ಎರಡರಷ್ಟು ಬೆಳೆ ಬೆಳೆಯಲಾಗುತ್ತಿದೆ. ಅವರಿಗೆ ನೀರು, ನಮಗೆ ಕಣ್ಣೀರು. ಇದು ಅತ್ಯಂತ ನೋವಿನ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಇದೀಗ ತಮಿಳುನಾಡಿಗೆ ನೀರು ಬಿಡದಂತೆ ಬಿಜೆಪಿಯವರು ಹೋರಾಟ ಮಾಡುತ್ತೇವೆಂದು ಹೊರಟಿದ್ದು, ಇದು ಒಳ್ಳೆಯ ಬೆಳವಣಿಗೆ. ಆದರೆ ಇವರೂ ತಮ್ಮ ಆಡಳಿತಾವಧಿಯಲ್ಲಿ ನೀರು ಬಿಟ್ಟಿದ್ದಾರೆ. ಈಗ ನೀರು ಬಿಟ್ಟಿರುವುದು ಅಪರಾಧ. ಈ ಅಪರಾಧಕ್ಕೆ ಸರ್ಕಾರವೇ ಹೊಣೆ. ಕೆಆರ್‌ಎಸ್ ಬರಿದಾಗುತ್ತಿದೆ. ಮಳೆಯೂ ಇಲ್ಲ. ಈ ಪರಿಸ್ಥಿತಿಯಲ್ಲಿ ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರು ಬಿಡಬಾರದು. ಈಗಲೂ ನೀರು ಬಿಟ್ಟರೆ ಇಡೀ ರಾಜ್ಯಾದ್ಯಂತ ಕನ್ನಡ ಚಳವಳಿ ವಾಟಾಳ್ ಪಕ್ಷ ತೀವ್ರ ಹೋರಾಟ ಮಾಡಲಿದೆ ಎಂದು ಎಚ್ಚರಿಸಿದರು.

ಸರ್ಕಾರ ಇದರಲ್ಲಿ ರಾಜಕೀಯ ಮಾಡಬಾರದು. ಜೆಡಿಎಸ್ ಮತ್ತು ಬಿಜೆಪಿಯವರೂ ರಾಜಕೀಯ ಮಾಡಬಾರದು. ಮೂರು ಪಕ್ಷಗಳು ರಾಜ್ಯದ ಹಿತದೃಷ್ಟಿಯಿಂದ ಸ್ಪಷ್ಟ ನಿರ್ಧಾರಕ್ಕೆ ಬರಬೇಕು. ಸರ್ಕಾರ ಏನೂ ಮಾಡದೇ ಇದ್ದರೆ ಎಲ್ಲಾ ಕನ್ನಡಪರ ಸಂಘಟನೆಗಳು ಸಭೆ ಸೇರಿ ಮುಂದಿನ ಹೋರಾಟದ ಬಗ್ಗೆ ನಿರ್ಧಾರ ಕೈಗೊಳ್ಳುತ್ತೇವೆ ಎಂದು ತಿಳಿಸಿದರು.

ಸಿಎಂ ಸಿದ್ದರಾಮಯ್ಯನವರಿಗೆ ಮೊದಲಿದ್ದ ಗಟ್ಟಿ ಧ್ವನಿ ಬರಬೇಕು...

"ಸಿದ್ದರಾಮಯ್ಯನವರಿಗೆ ಮೊದಲಿದ್ದ ಧ್ವನಿ ಇಲ್ಲ. ಏನೋ ಒಂದು ರೀತಿ ಕಾಟಾಚಾರವಿದೆ. ಮೊದಲು ಮುಖ್ಯಮಂತ್ರಿ ಆಗಿದ್ದಾಗ ಅವರಲ್ಲಿದ್ದ ನಿಲುವು, ಸ್ಪಷ್ಟತೆ ಈಗ ಇಲ್ಲ. ಅವರ ಬಗ್ಗೆ ನನಗೆ ಗೌರವವಿದೆ. ಅವರು ಈಗೇಕೆ ಆ ರೀತಿಯಲ್ಲಿ ಆಗಿದ್ದಾರೋ ಗೊತ್ತಿಲ್ಲ. ಅವರಿಗೆ ಏನು ಒತ್ತಡ ಇದೆಯೋ ಗೊತ್ತಿಲ್ಲ. ಅವರೇನೂ ಹೆದರಬೇಕಿಲ್ಲ. ಐದು ವರ್ಷ ಮುಖ್ಯಮಂತ್ರಿಯಾಗಿ ಇರುತ್ತಾರೆ, ಇರಬೇಕು. ಈ ಬಗ್ಗೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ರಾಜ್ಯದ ಸಮಸ್ಯೆ ಬಂದಾಗ ಧ್ವನಿ ಎತ್ತಬೇಕು. ಮೊದಲಿದ್ದ ಧ್ವನಿ ಅವರಲ್ಲಿ ಬರಬೇಕು. **–ವಾಟಾಳ್ ನಾಗರಾಜ್**

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.8.2023 ಸೋಮವಾರ, ಮಳೆ ನಕ್ಷತ್ರ: ಮಖ 17.08.2023ರಿಂದ 30.08.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾ ರಥೋತ್ಸವ, ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ಟ್ರಸ್ಟ್ ಆವರಣ, ಕೆ.ಆರ್. ಮೊಹಲ್ಲಾ, ಬೆಳಗ್ಗೆಯಿಂದ.

■ **ಹೆಚ್.ವಿ.ರಾಜೀವ್ ಸ್ನೇಹ ಬಳಗ, ಸುಶೃತ ನೇತ್ರ ಚಿಕಿತ್ಸಾಲಯ:** ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ತಪಾಸಣೆ, ರಕ್ತದೊತ್ತಡ, ಮಧುಮೇಹ ತಪಾಸಣಾ ಕಾರ್ಯಕ್ರಮ, ಉಪಸ್ಥಿತಿ: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮೇಯರ್ ಶಿವಕುಮಾರ್, ಬಿಜೆಪಿ ಮುಖಂಡ ಯು.ಎಸ್.ಶೇಖರ್, ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಸ್ಥಳ: ಸುಮಸೋಪಾನ ಉದ್ಯಾನವನ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ.

■ **ಲಯನ್ಸ್ ಕ್ಲಬ್ ಆಫ್ ಮೈಸೂರು ನಿಸರ್ಗ, ಲಯನ್ಸ್ ಕ್ಲಬ್ ಆಫ್ ಮಯೂರಿ, ಲಿಯೋ ಕ್ಲಬ್ ಆಫ್ ಮೈಸೂರು ಯರೀಶ್, ಮೈಸೂರು ಡಿಸ್ಟ್ರಿಕ್ಟ್ ಡೆಫ್ ಅಸೋಸಿಯೇಷನ್ :** ಉಚಿತ ಅಕ್ಯೂಪ್ರೆಶರ್, ಸುಜೋಕ್ ಮ್ಯಾಗ್ನೆಟ್ ಮತ್ತು ವೈಬ್ರೇಷನ್ ತೆರಪಿ ಚಿಕಿತ್ಸೆ, ಸ್ಥಳ: ರಾಹುಲ್ ಕನ್ವೆನ್ಷನ್ ಹಾಲ್, ವಿಶ್ವೇಶ್ವರನಗರ, ಬೆಳಗ್ಗೆ 8ರಿಂದ ಮಧ್ಯಾಹ್ನ 12 ಗಂಟೆವರೆಗೆ, ಸಂಜೆ 4ರಿಂದ 8 ರವರೆಗೆ.

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ವಸ್ತ್ರ ಉತ್ಸವ–2023, ಸ್ಥಳ: ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10ರಿಂದ ರಾತ್ರಿ 9 ರವರೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ, ಪತ್ರಿಕೋದ್ಯಮ ಮತ್ತು ಸಮೂಹ ವಿಭಾಗ :** ಜನರ್ಥಿ–23 ಎರಡು ದಿನಗಳ ರಾಜ್ಯ ಮಟ್ಟದ ಮೀಡಿಯಾ ಫೆಸ್ಟ್, ಉದ್ಘಾಟನೆ: ರಾಜವಂಶಸ್ಥರಾದ ಶ್ರೀಮತಿ ಡಾ. ಪ್ರಮೋದಾದೇವಿ ಒಡೆಯರ್, ಸ್ಥಳ: ಬಿ.ಎನ್. ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್ (ಬಿಐಎಂಎಸ್) ಆಡಿಟೋರಿಯಂ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ :** ಭಾರತದಲ್ಲಿ ಬುಡಕಟ್ಟು ಪರಿವರ್ತನೆ: ಸಮಸ್ಯೆಗಳು ಮತ್ತು ಸವಾಲುಗಳು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ: ಚಾಮರಾಜನಗರ ವಿಶ್ವವಿದ್ಯಾನಿಯದ ಉಪಕುಲಪತಿ ಪ್ರೊ.ಎಂ.ಆರ್.ಗಂಗಾಧರ್, ಅಧ್ಯಕ್ಷತೆ: ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿರ್ದೇಶಕ ಬಿ.ಕಲ್ಲೇಶ್, ಸ್ಥಳ: ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಬೆಳಗ್ಗೆ 10.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ– ಅರುಂಧತಿ ರಮೇಶ್, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: "ಮಹಾ ಮೋಜಣಿ" ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ–ಡಾ.ಗಜಾನನ ಶರ್ಮ, 6.40 ಪದಸಂಸ್ಕೃತಿ: ಪ್ರಸ್ತುತಿ–ಡಾ.ಶ್ರೀಧರ ಹೆಗಡೆ ಭದ್ರನ್, 7.15 ಕರುನಾಡ ಕಲ್ಪವೃಕ್ಷ: ಪ್ರಾಯೋಜಿತ ಕಾರ್ಯಕ್ರಮ, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನೆನಪಿನಂಗಳ: ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎ.ರಾಮಣ್ಣ ಅವರೊಂದಿಗೆ ಡಾ.ಎಂ.ಎಸ್.ವಿಜಯಾ ಹರನ್ ಅವರು ನಡೆಸಿದ್ದ ಸಂವಾದ, 2. ಪ್ರಸಿದ್ಧ ಚಿತ್ರ ಕಲಾವಿದ ಪಿ.ಜಿ.ಎಸ್.ಆಚಾರ್ಯ ಅವರೊಂದಿಗೆ ಮಂಜುಳಾ ಅವರು ನಡೆಸಿದ್ದ ಸಂವಾದ, 10.00 ಲಯ ಸಂಭ್ರಮ: ತಾಳ, ಲಯ ರಸಾಸ್ವಾದ, ವಿಷಯ– ಕರ್ನಾಟಕ ಶಾಸ್ತ್ರೀಯ ಸಂಗೀತ ಕಚೇರಿಗಳಲ್ಲಿ ಮೃದಂಗದ ಪಾತ್ರವನ್ನು ತಿಳಿಸಿಕೊಡುತ್ತಾರೆ ಸಂಗೀತ ವಿದ್ವಾಂಸರಾದ ಡಾ.ಸುಕನ್ಯಾ ಪ್ರಭಾಕರ್ ಪರಿಕಲ್ಪನೆ ಹಾಗೂ ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ.

ಮಧ್ಯಾಹ್ನ: 12.30 ದೇವರನಾಮ–ಉದಯಕಿರಣ್, ಎಂ.ರಾಘವೇಂದ್ರ, 12.45 ನಮ್ಮ ಆರೋಗ್ಯ: ಕಂಜಕ್ಟಿವಿಟೀಸ್ ಅಥವಾ ಮದ್ರಾಸ್ ಐ: ಕಣ್ಣಿನ ಬೇನೆ–ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ. ಪ್ರಕಾಶ್ ಡಿ.ಎನ್. ಅವರೊಂದಿಗೆ ಮಾತುಕತೆ, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆ–ಮಧುಲಿಕಾ ಶ್ರೀನಿವಾಸ್, 3.00 ಹೆಚ್.ಎಸ್.ಯದುಗಿರಿ ಮತ್ತು ಹೆಚ್.ಎಸ್. ಮಹಾಲಕ್ಷ್ಮಿ–ಯುಗಳ ಹಾಡುಗಾರಿಕೆ. **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ–ವಿಷಯ–ಪಂಚಕರ್ಮ ಚಿಕಿತ್ಸೆ, ಭಾಗವಹಿಸುವವರು–ಡಾ.ಶಶಿರೇಖಾ, 4.45 ಹಿಂದಿ ಪಾಠ–ಕಿಶೋರ್ ಎಂ. ಕಾಕಡೆ, 6.50 ಕೃಷಿರಂಗ: ಗೆಡ್ಡೆ ಗೆಣಸು ಬೇಸಾಯ ಕುರಿತು ಸಂವಾದದಲ್ಲಿ ಭಾಗವಹಿಸುತ್ತಾರೆ. ಕೃಷಿಕ ದಂಪತಿ ಸುಪ್ರೀತ್ ಹಾಗೂ ಎಸ್.ಪಿ.ಶೋಭಾ, 9.30 ಹಳ್ಳಿ ಹಾಡು: ಪ್ರಸ್ತುತಿ–ಅಬ್ದುಲ್ ರಶೀದ್.

■ **ವ್ಯವಸ್ಥಾಪಕರು:** ಚಿತ್ರಕಲಾ ಪ್ರದರ್ಶನ, ಉದ್ಘಾಟನೆ: ಮೈಸೂರು ನಗರ ಪೊಲೀಸ್ ಉಪಆಯುಕ್ತ ಎಂ.ಮುತ್ತುರಾಜ್, ಮುಖ್ಯ ಅತಿಥಿಗಳು: ಸಾಹಿತಿ ಅಬ್ದುಲ್ ರಶೀದ್, ಚಿತ್ರನಟ ರಿತ್ವಿಕ್ ಮಠದ್, ಸ್ಥಳ: ನೆರಳು ಬೆಳಕಿನ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11 ಗಂಟೆಗೆ.

■ **ಕುಂಚಕಾವ್ಯ ಕಲ್ಚರಲ್ ಕಮಿಟಿ–2022–2023, ಚಾಮರಾಜೇಂದ್ರ ಗೌರ್ನಮೆಂಟ್ ಕಾಲೇಜ್ ಆಫ್ ವಿಶ್ಯೂವೆಲ್ ಆರ್ಟ್ಸ್:** ಕಾವಾ ವಾರ್ಷಿಕ ಪ್ರದರ್ಶನ–2023, ಸ್ಥಳ: ಕಾವಾ ಆವರಣ, ಬೆಳಗ್ಗೆ 11 ಗಂಟೆಗೆ.

■ **ಸಂಚಲನ, ಮೈಸೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** 5 ದಿನಗಳ ಸುಗಮ ಸಂಗೀತ ಕಾರ್ಯಾಗಾರದ ಸಮಾರೋಪ ಮತ್ತು ರವಿ ಮೂರೂರು ಸಾರಥ್ಯದಲ್ಲಿ ಅನಂತಾಶ್ವಥ ಗೀತ ಗಾಯನ, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6 ಗಂಟೆಗೆ.

■ **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ಡಾ.ಸಿ.ಎಚ್.ಶ್ರೀನಿವಾಸಮೂರ್ತಿ ಆಚಾರ್ಯ ಅವರಿಂದ ಯುದ್ಧಕಾಂಡ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಸಂಜೆ 6ರಿಂದ 7ರವರೆಗೆ.

■ **ಸನಾತನ ಸಭಾ, ಮೈಸೂರು:** ರಾಮಾಯಣ ಪ್ರವಚನ ಮಾಲಿಕೆ ಏಳನೇ ಸರಣಿ, ವಿದ್ವಾನ್ ಗ.ನಾ. ಭಟ್ಟ ಅವರಿಂದ ಶ್ರೀ ಮದ್ವಾಲ್ಮೀಕಿ ರಾಮಾಯಣದ ಕಿಷ್ಕಿಂಧಾಕಾಂಡ ಪ್ರವಚನ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಕೆ.ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6.30ರಿಂದ 8ರವರೆಗೆ.

ಹೆಣ್ಣಿನ ಮೇಲಿನ ದೌರ್ಜನ್ಯಕ್ಕೆ ಭಿತ್ತಿಚಿತ್ರಗಳ ಮೂಲಕ ಖಂಡನೆ



ಮೈಸೂರು, ಆ.20(ಜಿಎ)– ಕುಂಚ ಕಲಾವಿದರು ದೇಶದಲ್ಲಿ ಹೆಣ್ಣಿನ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಬಣ್ಣಗಳ ಮೂಲಕ ಭಿತ್ತಿಚಿತ್ರಗಳ ಮೂಲಕ ಅರಿವು ಮೂಡಿಸಿದರು.

ನಗರದ ಕುಕ್ಕರಹಳ್ಳಿ ಕೆರೆ ಗೇಟ್ ಮುಂಭಾಗ ಪ್ರಗತಿ ಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಸೌಜನ್ಯ ಭಿತ್ತಿಚಿತ್ರ ರಚನೆ ಶಿಬಿರವನ್ನು ಕಲಾವಿದ ಬಾದಲ್ ನಂಜುಂಡಸ್ವಾಮಿ ಜಸ್ಟಿಸ್ ಎಂದು ಬರೆಯುವ ಮೂಲಕ ಚಾಲನೆ ನೀಡಿದರು.

ಮೈಸೂರಿನ ಕಾವಾ ಕಾಲೇಜು, ರವಿವರ್ಮ ಆರ್ಟ್ಸ್ ಕಾಲೇಜು ಮತ್ತು ಕಲಾನಿಕೇತನ ಸಂಸ್ಥೆಯ ವಿದ್ಯಾರ್ಥಿಗಳು 'ಸೌಜನ್ಯಗೆ ನ್ಯಾಯ ಬೇಕು' 'ಅರೆಸ್ಟ್ ದಿ ಕ್ರಿಮಿನಲ್', 'ತೂರಬೇಡಿ ಗಾಳಿಗೆ ಹೆಣ್ತನದ ಘನತೆಯ' 'ಸ್ಟಾಪ್ ರೇಪ್', ಘೋಷ ವಾಕ್ಯಗಳಿಗೆ ಅನುಗುಣವಾಗಿ ದೇಶದಲ್ಲಿ ಹೆಣ್ಣಿನ ಮೇಲೆ ಆಗುತ್ತಿರುವ ದೌರ್ಜನ್ಯ ಪ್ರಕರಣಗಳ ತಮ್ಮ ಕುಂಚದ ಮೂಲಕ ಚಿತ್ರಿಸಿದರು.

ಈ ವೇಳೆ ಪ್ರಗತಿ ಪರ ಸಂಘಟನೆಗಳ ಒಕ್ಕೂಟದ ರಂಗಕರ್ಮಿ ಸಿ.ಬಸವಲಿಂಗಯ್ಯ, ಭೂಮಿಗೌಡ, ಜಿ.ಪಿ.ಬಸವರಾಜು, ಮೈಮ್ ರಮೇಶ್, ನಾ.ದಿವಾಕರ, ಸವಿತಾ ಪ.ಮಲ್ಲೇಶ್, ಕೃಷ್ಣಪ್ರಸಾದ್, ಕೆ.ಆರ್.ಗೋಪಾಲಕೃಷ್ಣ, ಜನಾರ್ಧನ್ (ಜನ್ನಿ), ಕಾಳೇಗೌಡ ನಾಗವಾರ, ಪ್ರೊ.ಕಾಳಚೆನ್ನೇಗೌಡ ಸೇರಿದಂತೆ ಇನ್ನಿತರ ಪ್ರಗತಿಪರರು ಸೌಜನ್ಯಗೆ ನ್ಯಾಯ ದೊರಕಬೇಕು ಎಂದು ಆಗ್ರಹಿಸಿದರು.

ಕ್ಷುಲ್ಲಕ ಕಾರಣಕ್ಕೆ ಯುವಕನ ಇರಿದು ಕೊಂದ ಸ್ನೇಹಿತರು

ಮೈಸೂರು,ಆ.20(ಎಂಟಿವೈ)– ಕ್ಷುಲ್ಲಕ ಕಾರಣಕ್ಕೆ ಯುವಕನನ್ನು ಆತನ ನಾಲ್ವರು ಸ್ನೇಹಿತರೇ ಚಾಕುವಿನಿಂದ ಇರಿದು ಕೊಂದ ಘಟನೆ ಮೈಸೂರಿನ ವಿದ್ಯಾನಗರದಲ್ಲಿ ಶನಿವಾರ ರಾತ್ರಿ ನಡೆದಿದೆ.

ಮೈಸೂರಿನ ವಿದ್ಯಾನಗರ 4ನೇ ಕ್ರಾಸ್ ನಿವಾಸಿ ಬಾಲರಾಜ್(28), ತನ್ನದೇ ಗೆಳೆಯರಿಂದ ಬರ್ಬರವಾಗಿ ಹತ್ಯೆಯಾಗಿದ್ದಾನೆ. ಅದೇ ಬಡಾವಣೆಯ ನಿವಾಸಿಗಳಾದ ತೇಜಸ್, ಸಂಜಯ್, ಕಿರಣ್, ಸಾಮ್ರಾಟ್, ಗೆಳೆಯ ಬಾಲ್‌ರಾಜ್‌ನನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಿದ್ದಾರೆ ಎಂದು ಬಾಲರಾಜ್ ಸಂಬಂಧಿಕರು ಪೊಲೀಸರಿಗೆ ದೂರು ನೀಡಿದ್ದಾರೆ. ಮೈಸೂರು ರೇಸ್‌ಕೋರ್ಸ್‌ನ ಬುಕ್ಕಿಯೊಬ್ಬರ ಬಳಿ ಕೆಲಸ ಮಾಡುತ್ತಿದ್ದ ಬಾಲರಾಜ್ ಹಾಗೂ ಹತ್ಯೆ ಮಾಡಿರುವ ನಾಲ್ವರು ಆರೋಪಿಗಳು ಚಿಕ್ಕ ವಯಸ್ಸಿಂದಲೇ ಸ್ನೇಹಿತರಾಗಿದ್ದು, ಒಂದೇ ಬೀದಿಯಲ್ಲಿ ವಾಸವಾಗಿದ್ದರು ಎನ್ನಲಾಗಿದೆ.

ಶನಿವಾರ ರಾತ್ರಿ ಕ್ಷುಲ್ಲಕ ಕಾರಣಕ್ಕೆ ಸ್ನೇಹಿತರ ನಡುವೆ ಜಗಳ ಆರಂಭವಾಗಿದೆ. ಸ್ಥಳೀಯರು ಜಗಳ ಬಿಡಿಸಿ ಸಮಾಧಾನ ಮಾಡಿ ಕಳುಹಿಸಿದ್ದಾರೆ. ಆದರೆ ಸುಮ್ಮನಾಗದ ಆರೋಪಿಗಳು ಸಂಜೆ ಬಾಲರಾಜ್ ಮನೆ ಮುಂದೆ ಬಂದು ಮತ್ತೆ ಜಗಳ ಆರಂಭಿಸಿದ್ದಾರೆ. ಈ ವೇಳೆ ಮಾತಿನ ಚಕಮಕಿ ನಡೆಯುತ್ತಿದ್ದಾಗ ಬಾಲರಾಜ್ ತಂದೆ ಜಗಳ ಬಿಡಿಸಲು ಯತ್ನಿಸಿದ್ದಾರೆ. ಈ ವೇಳೆ ಆರೋಪಿಗಳು ಚಾಕುವಿನಿಂದ ಬಾಲರಾಜ್‌ಗೆ ಇರಿದು ಪರಾರಿಯಾಗಿದ್ದು, ಬಾಲರಾಜ್ ಸ್ಥಳದಲ್ಲೇ ಜೀವ ಬಿಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ನಜರ್‌ಬಾದ್ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಆರೋಪಿಗಳಿಗಾಗಿ ಶೋಧ ಮುಂದುವರೆಸಿದ್ದಾರೆ.

ಸಂಗೊಳ್ಳಿ ರಾಯಣ್ಣ ಪ್ರಶಸ್ತಿ ಪ್ರದಾನ



ಮೈಸೂರು, ಆ.20(ಎಸ್‌ಪಿಎನ್)– ಕ್ರಾಂತಿಕಾರಿ ಸಂಗೊಳ್ಳಿ ರಾಯಣ್ಣ ಜಯಂತಿ ಅಂಗವಾಗಿ ವಿವಿಧ ಕ್ಷೇತ್ರದ 11 ಮಂದಿ ಸಾಧಕರಿಗೆ 'ಸಂಗೊಳ್ಳಿ ರಾಯಣ್ಣ' ಹೆಸರಿನ ಪ್ರಶಸ್ತಿಯನ್ನು ಸ್ವಾತಂತ್ರ್ಯೋತ್ಸವ ಉದ್ಯಾನವನದ ಸಂಗೊಳ್ಳಿ ರಾಯಣ್ಣ ಮಂಟಪದಲ್ಲಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಪ್ರದಾನ ಮಾಡಲಾಯಿತು.

ಸಂಗೊಳ್ಳಿ ರಾಯಣ್ಣ ಪ್ರಶಸ್ತಿಗೆ ಸಾಧಕರಾದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಗಳಿಸಿದ ಹಿರಿಯ ಛಾಯಾಗ್ರಾಹಕ ಅನುರಾಗ ಬಸವರಾಜ್, ಕಾರ್ಗಿಲ್ ಯುದ್ಧದಲ್ಲಿ ಮಡಿದ ಯೋಧ ಹೇಮ ಚೆಂದು ಅವರ ಪರವಾಗಿ ಅವರ ತಾಯಿಗೆ, ಯೋಧರಾದ ರಾಜು, ಸುಬೇದಾರ್ ಸುರೇಶ್, ಸಮಾಜ ಸೇವಕರಾದ ಚೇತನ್ ಕುಮಾರ್, ನೃತ್ಯ ಕಲಾವಿದರಾದ ಆಯುಷ್ಮಾನ್, ಹೆಚ್.ಎಸ್ ರಾಕೇಶ್, ಪತ್ರಕರ್ತರಾದ ಸುರೇಶ್, ರಾಜೇಶ್, ಮಹಿಳಾ ಚಿಂತಕಿ ಲತಾ ಶಾಂತರಾಜು, ಕಂಸಾಳೆ ಕಲಾವಿದ ಮಹದೇವ ಅವರನ್ನು ನಿವೃತ್ತ ಯೋಧ ದೇವೇಂದ್ರ ತೆನಗಿ ಸನ್ಮಾನಿಸಿದರು.

ಬ್ರಿಟಿಷರ ವಿರುದ್ಧ ಸೆಣಸುವಲ್ಲಿ ಸಂಗೊಳ್ಳಿ ರಾಯಣ್ಣನ ಪಾತ್ರ ಪ್ರಮುಖವಾಗಿದೆ. ಕಿತ್ತೂರು ರಾಣಿ ಚೆನ್ನಮ್ಮ ಅವರ ಬಲಗೈ ಭಂಟನಾಗಿ ನಿಷ್ಠೆಯಿಂದ ದೇಶಕ್ಕಾಗಿ ಹೋರಾಟ ಮಾಡಿ ಪ್ರಾಣತ್ಯಾಗ ಮಾಡಿದ ಮಹಾನ್ ವ್ಯಕ್ತಿ ರಾಯಣ್ಣ. ಅದರಂತೆ ನಮ್ಮ ದೇಶವನ್ನು ಶತ್ರುಗಳಿಂದ ಕಾಪಾಡುವಲ್ಲಿ ಯೋಧರ ಪಾತ್ರ ಪ್ರಮುಖವಾಗಿದೆ ಎಂದರು.

ಈ ವೇಳೆ ವಿಪ್ರ ಮುಖಂಡರ ಕೆ.ರಘುರಾಮ ವಾಜಪೇಯಿ, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್ ಬಾಲಕೃಷ್ಣ, ಪದಾಧಿಕಾರಿಗಳಾದ ಗುರು ಬಸಪ್ಪ ಪ್ಯಾಲೇಸ್ ಬಾಬು, ಗೋಪಿ, ಬಾಬು, ಕಾವೇರಮ್ಮ ಪುಷ್ಪ ರೇವತಿ, ಮದನ್, ಮಾದಪ್ಪ, ಮನೋಹರ್ ಇತರರು ಉಪಸ್ಥಿತರಿದ್ದರು.

ಕ್ರಿಪ್ಟೋ ಕರೆನ್ಸಿಗೆ ಹೂಡಿಕೆ ಮಾಡಿ ವಂಚನೆಗೊಳಗಾಗಿದ್ದ ಸಂತ್ರಸ್ತನಿಗೆ ಹಣ ಮರುಪಾವತಿ ಮಾಡಿಸಿದ ಪೊಲೀಸರು

ಮೈಸೂರು, ಆ.20(ಎಸ್‌ಪಿಎನ್)– ಕ್ರಿಪ್ಟೋ ಕರೆನ್ಸಿಯಲ್ಲಿ ಲಕ್ಷಾಂತರ ರೂ ಹೂಡಿಕೆ ಮಾಡಿ, ವಂಚನೆಗೆ ಒಳಗಾಗಿದ್ದ ವ್ಯಕ್ತಿಗೆ ಪುನಃ 18.60 ಲಕ್ಷ ಹಣವನ್ನು ಮರು ಪಾವತಿ ಮಾಡಿಸುವಲ್ಲಿ ಸಿಇಎನ್ ಕ್ರೈಂ ಪೊಲೀಸರು ಯಶಸ್ವಿಯಾಗಿದ್ದಾರೆ.

ವಂಚನೆಗೊಳಗಾಗಿದ್ದ ಮೈಸೂರಿನ ಜ್ಞಾನೇಶ್ ಅವರ ಬ್ಯಾಂಕ್ ಖಾತೆಗೆ ಸಿಇಎನ್ ಪೊಲೀಸರು ಮರು ಪಾವತಿ ಮಾಡಿಸಿದ್ದಾರೆ. ಏ.4 ರಂದು ಸಿ.ಇ.ಎನ್ ಪೊಲೀಸ್ ಠಾಣೆಗೆ ಜ್ಞಾನೇಶ್ ನೀಡಿದ್ದ ದೂರಿನ ಮೇರೆಗೆ ಪೊಲೀಸರು ತನಿಖೆ ಕೈಗೊಂಡು, ಕ್ಷಿಪ್ರ ಕಾರ್ಯಾಚರಣೆ ಮೂಲಕ ಹಣ ಮರುಪಾವತಿ ಮಾಡಿಸಿದ್ದಾರೆ.

ಕ್ರಿಪ್ಟೋ ಕರೆನ್ಸಿಯಲ್ಲಿ ಹೂಡಿಕೆ ಮಾಡಿದರೆ ಲಾಭಾಂಶ ನೀಡುವುದಾಗಿ ವಾಟ್ಸ್ ಆಪ್‌ನಲ್ಲಿ ಬಂದ ಸಂದೇಶವನ್ನು ನಂಬಿದ್ದ ಜ್ಞಾನೇಶ್, ತಕ್ಷಣವೇ ವಿವಿಧ ಖಾತೆಗಳ ಮೂಲಕ 25 ಲಕ್ಷ ಹಣವನ್ನು ಹಾಕಿ, ಮೋಸ ಹೋಗಿದ್ದರು. ಇವರ ದೂರು ಸ್ವೀಕರಿಸಿ ತ್ವರಿತಗತಿಯಲ್ಲಿ ಸಿಇಎನ್ ಪೊಲೀಸರು ತನಿಖೆ ಕೈಗೊಂಡು ಹಾಗೂ ವಿವಿಧ ಬ್ಯಾಂಕ್ ಅಧಿಕಾರಿಗಳ ಸಹಕಾರದೊಂದಿಗೆ ಒಟ್ಟು 18.60 ಲಕ್ಷ ರೂ.ಗಳನ್ನು ಜ್ಞಾನೇಶ್ ಅವರ ಖಾತೆಗೆ ಮರು ಪಾವತಿ ಮಾಡಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಈ ಪತ್ತೆ ಕಾರ್ಯದಲ್ಲಿ ಮೈಸೂರು ನಗರ ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ ಮುತ್ತುರಾಜ್ ಹಾಗೂ ದೇವರಾಜ ಉಪ–ವಿಭಾಗದ ಎಸಿಪಿ ಶಾಂತಮಲ್ಲಪ್ಪ ನೇತೃತ್ವದಲ್ಲಿ ಸಿಇಎನ್ ಕ್ರೈಂ ಠಾಣೆ ಪೊಲೀಸ್ ಇನ್ಸ್‌ಪೆಕ್ಟರ್ ಪ್ರಸನ್ನಕುಮಾರ್, ಪಿಎಸ್‌ಐ ಎಂ.ಎಲ್.ಸಿದ್ದೇಶ್, ಸಿಬ್ಬಂದಿಗಳಾದ ಸುನೀಲ್, ದಿವ್ಯ, ನಾಗರತ್ನ ಪಾಲ್ಗೊಂಡಿದ್ದರು.

ನೇಮಕ



ಮೈಸೂರು, ಆ.20– ಮೈಸೂರು ನಗರ(ಜಿಲ್ಲಾ) ಕಾಂಗ್ರೆಸ್ ಸಮಿತಿಗೆ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿಯಾಗಿ ಜೆ.ಎಂ.ಶಿವಶಂಕರ್‌ಮೂರ್ತಿ ಅವರನ್ನು ನೇಮಕ ಮಾಡಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆದೇಶಿಸಿದ್ದಾರೆ ಎಂದು ಕಾಂಗ್ರೆಸ್ ಜಿಲಾಧ್ಯಕ್ಷ ಆರ್.ಮೂರ್ತಿ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆಯಲ್ಲಿ ಆ.30ರಂದು 'ಗೃಹಲಕ್ಷ್ಮಿ'ಗೆ ಚಾಲನೆ

ಮಹತ್ವದ ಕಾರ್ಯಕ್ರಮಕ್ಕೆ ಭರದ ಸಿದ್ಧತೆ; ಪರಿಶೀಲನೆ ನಡೆಸಿದ ಹೆಬ್ಬಾಳ್ಕರ್

● ಮೈಸೂರು ಭಾಗದ ಜಿಲ್ಲೆಗಳ ಅಧಿಕಾರಿಗಳಿಂದ ಮಾಹಿತಿ ಸಂಗ್ರಹ ● ಫಲಾನುಭವಿಗಳ ಕರೆತರಲು ಪ್ರತಿ ಪಂಚಾಯ್ತಿಗೆ 3 ಬಸ್ ● ಎರಡು ಲಕ್ಷಕ್ಕೂ ಅಧಿಕ ಮಂದಿ ಪಾಲ್ಗೊಳ್ಳುವ ಸಾಧ್ಯತೆ



ಮೈಸೂರು, ಆ.20(ಎಸ್‌ಪಿಎನ್)– ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮೀ ಯೋಜನೆಗೆ ಆ.30ರಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರು ಜಿಲ್ಲೆಯಲ್ಲಿ ಚಾಲನೆ ದೊರೆಯಲಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾಹಿತಿ ನೀಡಿದರು.

ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಪಂ ಸಿಇಒ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಕಾರ್ಯಕ್ರಮದ ಪೂರ್ವ ಸಿದ್ಧತೆಗಳ ಕುರಿತು ಮಾಹಿತಿ ಪಡೆದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದರು.

ಆ ಕಾರ್ಯಕ್ರಮಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಚಾಲನೆ ನೀಡಲಿದ್ದು, ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸೇರಿದಂತೆ ಸಚಿವ ಸಂಪುಟದ ಇತರೆ ಸಚಿವರು ಹಾಗೂ ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಯ ಶಾಸಕರು ಭಾಗ ವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

4 ಜಿಲ್ಲೆಯ 13 ಲಕ್ಷ ಮಂದಿ ನೋಂದಣಿ: ರಾಜ್ಯ ಸರಕಾರದ ಐದು ಮಹತ್ವಾಕಾಂಕ್ಷಿ ಯೋಜನೆಗಳಲ್ಲೊಂದಾದ ಗೃಹಲಕ್ಷ್ಮಿ ಯೋಜನೆಗೆ ರಾಜ್ಯದ 1 ಕೋಟಿ 10ಲಕ್ಷ ಕುಟುಂಬಗಳ ಯಜಮಾನಿಯರ ಖಾತೆಗಳಿಗೆ ತಲಾ 2 ಸಾವಿರ ರೂ. ಜಮೆಯಾಗಲಿದೆ. ಇದರಲ್ಲಿ ಮೈಸೂರು ವಿಭಾಗದ 4 ಜಿಲ್ಲೆಗಳ 13,81,430 ಕುಟುಂಬಗಳು ಈ ಯೋಜನೆಗೆ ನೋಂದಣಿ ಮಾಡಿಸಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದರು.

ನೋಂದಣಿಗೆ ಸಮಯ ನಿಗದಿ ಮಾಡಿಲ್ಲ: ಮೈಸೂರು, ಚಾಮರಾಜನಗರ, ಕೊಡಗು ಹಾಗೂ ಮಂಡ್ಯ ಜಿಲ್ಲೆಗಳಿಂದ ಕನಿಷ್ಠ 2 ಲಕ್ಷಕ್ಕೂ ಅಧಿಕ ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದು, ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಲಿದೆ. ಅಲ್ಲದೆ, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದು ಗೃಹಲಕ್ಷ್ಮಿ ಯೋಜನೆಯನ್ನು ಜಾರಿಗೊಳಿಸಿದ ಸರ್ಕಾರ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಈಗಾಗಲೇ ಈ ಯೋಜನೆಗೆ ರಾಜ್ಯದಲ್ಲಿ ಶೇ.80 ರಷ್ಟು ನೋಂದಣಿ ಪ್ರಕ್ರಿಯೆ ಮುಗಿದಿದ್ದು, ನೋಂದಣಿಗೆ ಸಮಯ ನಿಗದಿ ಮಾಡಿಲ್ಲ. ನೋಂದಣಿ ನಿರಂತರವಾಗಿರುತ್ತದೆ ಎಂದರು.

8 ಜಿಲ್ಲೆಗಳಿಂದ 25 ಲಕ್ಷ ಮಂದಿ ನೋಂದಣಿ: ಮೈಸೂರು ವಿಭಾಗದಲ್ಲಿ ಮೈಸೂರು ಜಿಲ್ಲೆಯಲ್ಲಿ ಗೃಹಲಕ್ಷ್ಮಿ ಯೋಜನೆಗೆ 6,19,955 ಲಕ್ಷ, ಚಾಮರಾಜನಗರ 2,40,411 ಲಕ್ಷ, ಚಿಕ್ಕಮಗಳೂರು 2,40,558, ದಕ್ಷಿಣ 3,17,401, ಹಾಸನ 4,04,583 ಲಕ್ಷ ಮಂಡ್ಯ 4,10,967 ಹಾಗೂ ಉಡುಪಿ ಜಿಲ್ಲೆಯಲ್ಲಿ 2,05,136 ಲಕ್ಷ ಮಂದಿ ಸೇರಿದಂತೆ ಒಟ್ಟು 8 ಜಿಲ್ಲೆಗಳಿಂದ 25,42,323 ಮಂದಿ ಗೃಹಲಕ್ಷ್ಮಿ ಯೋಜನೆಗೆ ನೋಂದಣಿ ಮಾಡಿಸಿದ್ದಾರೆ. ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಗಳಿಂದ ಶೇ.85 ರಷ್ಟು ಮಂದಿ ನೋಂದಣಿ ಮಾಡಿಸಲಾಗಿದೆ ಎಂದು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಡಾ.ಹೆಚ್.ಸಿ.ಮಹಾದೇವಪ್ಪ ಮಾತನಾಡಿ, ರಾಜ್ಯದ 130 ಲಕ್ಷ ಕುಟುಂಬಗಳು ಸ್ವಾವಲಂಬಿ ಜೀವನ ನಡೆಸಲು ಇದೊಂದು ಉತ್ತಮ ಯೋಜನೆಯಾಗಿದ್ದು, ಸ್ವಾತಂತ್ರ್ಯ ನಂತರದ ಬಹುದೊಡ್ಡ ಯೋಜನೆಯಾಗಿದೆ. ಮಹಿಳಾ ಸಬಲೀಕರಣದೊಂದಿಗೆ ಮಹಿಳೆಯರ ಆತ್ಮಗೌರವ ಹೆಚ್ಚಿಸುವ ಕಾರ್ಯಕ್ರಮವಾಗಿದೆ ಎಂದರು. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಪಾಲ್ಗೊಳ್ಳಲಿದ್ದು ಅವರಿಗೆ ಸರಿಯಾದ ಊಟ, ಶೌಚಾಲಯ, ಬಸ್ ವ್ಯವಸ್ಥೆ, ಕುಡಿಯುವ ನೀರು ಸಮರ್ಪಕವಾಗಿರಲಿ ಎಂದರು.

ಮಹಾರಾಜ ಕಾಲೇಜು ಮೈದಾನಕ್ಕೆ ಭೇಟಿ: ಆ.30ರಂದು ಗೃಹಲಕ್ಷ್ಮಿ ಯೋಜನೆಗೆ ರಾಷ್ಟ್ರನಾಯಕ ಸಮ್ಮುಖದಲ್ಲಿ ಚಾಲನೆ ನೀಡುವ ಹಿನ್ನೆಲೆಯಲ್ಲಿ ಮಹಾರಾಜ ಕಾಲೇಜು ಮೈದಾನದಲ್ಲಿ ಕಾರ್ಯಕ್ರಮದ ಪೂರ್ವ ಸಿದ್ಧತೆ ಕುರಿತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಶಾಸಕರಾದ ಕೆ.ಹರೀಶ್‌ಗೌಡ, ರವಿಶಂಕರ್, ದರ್ಶನ್ ಧ್ರುವನಾರಾಯಣ್ ಸೇರಿದಂತೆ ಇತರೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರಲ್ಲದೆ, ಕಾರ್ಯಕ್ರಮಕ್ಕೆ ಬರುವ ಮಹಿಳೆಯರು ಇಳಿಯುವ ಸ್ಥಳ ಹಾಗೂ ಬಸ್ ಪಾರ್ಕಿಂಗ್ ವ್ಯವಸ್ಥೆ ಬಗ್ಗೆ ಕೂಲಂಕಷವಾಗಿ ಚರ್ಚಿಸಿದರು.

ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕಾರ್ಯದರ್ಶಿ ಪ್ರಕಾಶ್, ನಿರ್ದೇಶಕರಾದ ಅರ್ಚನ, ಜಿಲ್ಲಾಧಿಕಾರಿ ಡಾ.ರಾಜೇಂದ್ರ, ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್, ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾನಾಗ್, ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ಇದ್ದರು.

2 ಸಾವಿರ ಬಸ್‌ಗಳ ನಿಯೋಜನೆ

ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳಿಂದ ಒಂದು ಪಂಚಾಯ್ತಿಗೆ 3 ಬಸ್‌ಗಳಂತೆ ಒಟ್ಟು 2 ಸಾವಿರ ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ನಿಯೋಜಿಸಲಾಗಿದ್ದು, ಒಂದು ಬಸ್‌ಗೆ ಓರ್ವ ಮಹಿಳಾ ಪೇದೆ ಹಾಗೂ ಇಬ್ಬರು ಪುರುಷ ಅಧಿಕಾರಿಗಳನ್ನು ನಿಯೋಜಿಸಿ, ಪ್ರಯಾಣ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ನಿಗಾ ವಹಿಸುವ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ವ್ಹೀಲಿಂಗ್ ಮಾಡುವ ಪುಂಡರ ಹಾವಳಿ ಹತ್ತಿಕ್ಕಲು ವಿಶೇಷ ತಂಡ ರಚನೆ : ತಿಂಗಳಲ್ಲಿ 18 ಪ್ರಕರಣ ದಾಖಲು

ಮೈಸೂರು, ಆ.20(ಜಿಎ)–ವ್ಹೀಲಿಂಗ್ ಮಾಡುವ ಪುಂಡರಿಗೆ ಬಿಸಿ ಮುಟ್ಟಿಸಲು ಪೊಲೀಸರಿಂದ ವಿಶೇಷ ತಂಡ ರಚನೆಯಾಗಿದ್ದು, ಒಂದು ತಿಂಗಳಲ್ಲಿ 18 ಪ್ರಕರಣಗಳು ದಾಖಲಾಗಿವೆ.


ಇತ್ತೀಚೆಗೆ ಮೈಸೂರಿನ ನಗರದೊಳಗೆ ಮತ್ತು ಹೊರವಲಯದ ರಿಂಗ್ ರಸ್ತೆಯಲ್ಲಿ ವ್ಹೀಲಿಂಗ್ ಮಾಡುವ ಪುಂಡರ ಹಾವಳಿ ಹೆಚ್ಚಾಗಿತ್ತು. ಇವರಿಗೆ ಬಿಸಿ ಮುಟ್ಟಿಸಲು ಮೈಸೂರು ನಗರ (ಸಂಚಾರಿ ವಿಭಾಗ)ಡಿಸಿಪಿ ಜಾಹ್ನವಿ ನೇತೃತ್ವದಲ್ಲಿ ಮೈಸೂರು ನಗರದ ಐದು ಸಂಚಾರಿ ಪೊಲೀಸ್ ಠಾಣೆಯಲ್ಲಿ ವಿಶೇಷ ತಂಡವನ್ನು ರಚಿಸಲಾಗಿದ್ದು, ಟ್ರಾಫಿಕ್ ಪೊಲೀಸರು ಮಫ್ತಿಯಲ್ಲಿ ವ್ಹೀಲಿಂಗ್ ಮಾಡುವವರ ಮೇಲೆ ಹದ್ದಿನ ಕಣ್ಣಿಟ್ಟಿದ್ದಾರೆ.

ಈ ತಂಡವು ಮೈಸೂರಿನ ಶಾಲಾ–ಕಾಲೇಜು ಮತ್ತು ರಿಂಗ್ ರಸ್ತೆಯಲ್ಲಿ ವ್ಹೀಲಿಂಗ್ ಮಾಡಿ ಸಾರ್ವಜನಿಕರ ಪ್ರಾಣಕ್ಕೆ ಕುತ್ತು ತರುವ ದುಷ್ಕರ್ಮಿಗಳ ಮಾಹಿತಿ ಕಲೆ ಹಾಕುತ್ತಿದ್ದು, ಒಂದು ತಿಂಗಳಲ್ಲಿ 18 ಪ್ರಕರಣಗಳನ್ನು ದಾಖಲಿಸಿ, ಬೈಕ್‌ಗಳನ್ನು ಸೀಜ್ ಮಾಡಿದ್ದಾರೆ.

ಅಷ್ಟೇ ಅಲ್ಲದೇ ನಕಲಿ ನಂಬರ್ ಪ್ಲೇಟ್ ಬಳಸಿ, ವ್ಹೀಲಿಂಗ್ ಮಾಡಿರುವ ಪುಂಡರ ವಿರುದ್ಧವೂ ಕೇಸ್ ದಾಖಲಿಸಿ ಜೈಲಿಗೆ ಕಳುಹಿಸುವ ಮೂಲಕ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿದ್ದು, ಪೊಲೀಸರು ನಗರದಾದ್ಯಂತ ಮಾತ್ರವಲ್ಲದೇ ಲೈಕ್, ವೀವ್ಸ್‌ಗಾಗಿ ವ್ಹೀಲಿಂಗ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಅಪ್ಲೋಡ್ ಮಾಡುವವರ ಮೇಲಿಯೂ ನಿಗಾವಹಿಸಿದ್ದಾರೆ.

ಈ ಸಂಬಂಧ ಡಿಸಿಪಿ ಎಸ್.ಜಾಹ್ನವಿ ಮಾತನಾಡಿ, ವ್ಹೀಲಿಂಗ್ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲು ವಿಶೇಷ ತಂಡ ರಚನೆ ಮಾಡಿದ್ದೇವೆ. ಶಾಲಾ–ಕಾಲೇಜುಗಳ ಬಳಿ ಟ್ರಾಫಿಕ್ ಪೊಲೀಸರು ಮಫ್ತಿಯಲ್ಲಿ ವ್ಹೀಲಿಂಗ್ ಮಾಡುವವರ ಮೇಲೆ ಕಣ್ಣಿಟ್ಟಿದ್ದು, ಮಾಹಿತಿ ಕಲೆ ಹಾಕುತ್ತಿದ್ದಾರೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ತಂಡ ರಚನೆಯಾದ ನಂತರ ಸಾಕಷ್ಟು ಬದಲಾವಣೆ ಕಂಡಿದ್ದು, ಮುಂದಿನ ದಿನಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಕೆಲವು ಬದಲಾವಣೆ ಮತ್ತು ಹೊಸ ಪ್ರಯೋಗಗಳ ಮೂಲಕ ಸಾರ್ವಜನಿಕರಿಗೆ ತೊಂದರೆ ನೀಡುವವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು. ವ್ಹೀಲಿಂಗ್‌ನಿಂದ ಅಮಾಯಕರಿಗೆ ತೊಂದರೆ ಆಗುತ್ತಿದ್ದು, ಶಿಕ್ಷಕರು ಮತ್ತು ಪೋಷಕರು ಎಚ್ಚರಿಕೆ ವಹಿಸಬೇಕು. ಈ ರೀತಿ ವೀಲ್ಹಿಂಗ್ ಮಾಡುವವರ ಬಗ್ಗೆ ಸಾರ್ವಜನಿಕರು ಪೊಲೀಸ್ ಇಲಾಖೆಯ ಸಾಮಾಜಿಕ ಜಾಲತಾಣ ಮತ್ತು ಪೊಲೀಸ್ ಠಾಣೆಗಳಿಗೆ ಮಾಹಿತಿ ನೀಡಬಹುದು ಎಂದು ತಿಳಿಸಿದರು.



ಕೃಷ್ಣರಾಜ ಸಂಚಾರಿ ಪೊಲೀಸ್ ಠಾಣಾ ಸರಹದ್ದಿನ ರಿಂಗ್ ರೋಡ್‌ನಲ್ಲಿ ವ್ಹೀಲಿಂಗ್ ಮಾಡುತ್ತಿದ್ದ ವ್ಯಕ್ತಿಯನ್ನು ಹಿಡಿದು ಪ್ರಕರಣ ದಾಖಲಿಸಲಾಯಿತು. ಮೈಸೂರು ಸಿಟಿ ಟ್ರಾಫಿಕ್ ಪೊಲೀಸ್ ಅವರ ಅಧಿಕೃತ ಫೇಸ್ ಬುಕ್ ಪೇಜ್‌ನಲ್ಲಿ ಹಂಚಿಕೊಂಡಿದ್ದಾರೆ.

ನಿವೃತ್ತ ಯೋಧರಿಗೆ ಕಾಮಾಕ್ಷಿ ಆಸ್ಪತ್ರೆಯಲ್ಲಿ ರಿಯಾಯಿತಿ ದರದಲ್ಲಿ ಚಿಕಿತ್ಸೆ ವ್ಯವಸ್ಥೆ

ಆಸ್ಪತ್ರೆ ವ್ಯವಸ್ಥಾಪಕ ಟ್ರಸ್ಟಿ ಮಹೇಶ್ ಶೆಣೈ ಭರವಸೆ



ಮೈಸೂರು, ಆ.20(ಸಿಎನ್)–ನಿವೃತ್ತ ಯೋಧರಿಗೆ ಕಾಮಾಕ್ಷಿ ಆಸ್ಪತ್ರೆಯಲ್ಲಿ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ತಮ್ಮ ಗುರುತಿನ ಚೀಟಿ ತೋರಿಸುವ ಮೂಲಕ ರಿಯಾಯಿತಿ ದರದ ಚಿಕಿತ್ಸೆ ಪಡೆಯಬಹುದು ಎಂದು ಕಾಮಾಕ್ಷಿ ಆಸ್ಪತ್ರೆ ವ್ಯವಸ್ಥಾಪಕ ಟ್ರಸ್ಟಿ ಡಾ.ಎಂ. ಮಹೇಶ್ ಶೆಣೈ ಮಾಹಿತಿ ನೀಡಿದರು.

ನಗರದ ಅಕ್ಕಮಹಾದೇವಿ ರಸ್ತೆಯ ಸ್ಟರ್ಲಿಂಗ್ ಚಿತ್ರಮಂದಿರದ ಬಳಿಯ ಎಂಜಿಸಿಟಿ ಸಭಾ ಭವನದಲ್ಲಿ, ಮೀಡಿಯಾ ಟಿವಿ, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮತ್ತು ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಭಾನುವಾರ ಆಯೋಜಿಸಲಾಗಿದ್ದ, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ, ಮೈಸೂರು ಜಿಲ್ಲಾ ಘಟಕದ 77 ನಿವೃತ್ತ ಯೋಧರು ಹಾಗೂ ವೀರ ನಾರಿಯರಿಗೆ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೆಲವು ದಿನಗಳ ಹಿಂದಷ್ಟೇ 77ನೇ ವರ್ಷದ ಸ್ವಾತಂತ್ರ್ಯೋತ್ಸವನ್ನು ಆಚರಿಸಿದ್ದೇವೆ. ನಮ್ಮ ದೇಶ ಕಾಯುವ ಸೈನಿಕರ ತ್ಯಾಗ, ಬಲಿದಾನ ಅನಂತವಾಗಿದೆ. ಸೈನಿಕರಿಗೆ ಗೌರವ ಸಲ್ಲಿಸುವಂತಹ ಕಾರ್ಯಕ್ರಮಗಳು ಹೆಚ್ಚೆಚ್ಚು ನಡೆಯಬೇಕು. ದೇಶಕ್ಕೆ ಸೇವೆ ಸಲ್ಲಿಸಿದ ಯೋಧರನ್ನು ಅಭಿನಂದಿಸಲು ನಮಗೆ ಹೆಮ್ಮೆ ಎನಿಸುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು. ಕಾಮಾಕ್ಷಿ ಆಸ್ಪತ್ರೆ ವತಿಯಿಂದ ನಿವೃತ್ತ ಯೋಧರಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡುವ ಮೂಲಕ ಅಳಿಲು ಸೇವೆ ಮಾಡಲು ಇಚ್ಛಿಸಿದ್ದು, ಇದರ ಉಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಈ ವೇಳೆ 77ನೇ ಸ್ವಾತಂತ್ರ್ಯೋತ್ಸವ ಅಂಗವಾಗಿ 77 ಮಾಜಿ ಸೈನಿಕರು ಹಾಗೂ ವೀರ ನಾರಿಯರ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭ ನಿರ್ಮಲ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಎಂ.ಬಸವರಾಜು, ಥಾಮಿಸ್ ಕನ್ಸ್ಟ್ರಕ್ಷನ್ ರಾಘವೇಂದ್ರ, ಉದ್ಯಮಿ ಚನ್ನಪ್ಪಾಜಿ, ಮೀಡಿಯಾ ಟಿವಿ ವ್ಯವಸ್ಥಾಪಕ ನಿರ್ದೇಶಕ ನಂಜುಂಡಸ್ವಾಮಿ, ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ನಗರ ಘಟಕದ ಅಧ್ಯಕ್ಷ ನಾಗರಾಜ.ವಿ.ಭೈರಿ, ದಿವಾಕರ್ ಕೆ.ಪಿ, ಡಾ.ಸುರೇಶ್, ರವಿಗೌಡ್ರು, ಚಿಕ್ಕಣ್ಣ, ವಿಶ್ವನಾಥ್ ಶಾಸ್ತ್ರಿ, ಎಂ.ವಿ.ಶ್ರೀಧರ್, ಅರುಣ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಯೋಗಿ ಭೇಟಿಯಾದ ಮರುದಿನ ಅಖಿಲೇಶ್ ನಿವಾಸಕ್ಕೆ ರಜನಿಕಾಂತ್

ಲಕ್ನೋ: ಸೂಪರ್ ಸ್ಟಾರ್ ರಜನಿಕಾಂತ್ ಅವರು ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಅವರನ್ನು ಭೇಟಿಯಾದ ಬೆನ್ನಲ್ಲೇ ಅಲ್ಲಿನ ವಿಪಕ್ಷ ನಾಯಕ, ಲಕ್ನೋದಲ್ಲಿರುವ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರ ನಿವಾಸಕ್ಕೆ ಭಾನುವಾರ ಭೇಟಿ ನೀಡಿದರು. ನಾನು 9 ವರ್ಷಗಳ ಹಿಂದೆ ಮುಂಬೈನಲ್ಲಿ ನಡೆದ ಸಮಾರಂಭದಲ್ಲಿ ಅಖಿಲೇಶ್ ಯಾದವ್ ಅವರನ್ನು ಭೇಟಿಯಾಗಿದ್ದೆ ಮತ್ತು ಅಂದಿನಿಂದ ನಾವು ಸ್ನೇಹಿತರಾಗಿದ್ದೇವೆ. ನಾವು ಫೋನ್‌ನಲ್ಲಿ ಮಾತನಾಡುತ್ತೇವೆ. 5 ವರ್ಷಗಳ ಹಿಂದೆ ನಾನು ಶೂಟಿಂಗ್‌ಗಾಗಿ ಇಲ್ಲಿಗೆ ಬಂದಾಗ ಅವರನ್ನು ಭೇಟಿಯಾಗಲು ಸಾಧ್ಯವಾಗಲಿಲ್ಲ, ಈಗ ಅವರನ್ನು ಭೇಟಿಯಾದೆ ಎಂದು ಭೇಟಿಯ ನಂತರ ರಜನಿಕಾಂತ್ ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದಾರೆ. ಶನಿವಾರ ಸಂಜೆ ಯೋಗಿ ಆದಿತ್ಯನಾಥ್ ಅವರನ್ನು ಭೇಟಿಯಾಗಿದ್ದರು. ಸೂಪರ್ ಸ್ಟಾರ್ ರಜನಿಕಾಂತ್ ಅವರು ಯೋಗಿ ಅವರ ಪಾದ ಮುಟ್ಟಿ ನಮಸ್ಕರಿಸಿದ್ದು ಭಾರಿ ಸುದ್ದಿಯಾಗಿದ್ದು, ವಿಡಿಯೋ ವೈರಲ್ ಆಗಿದೆ. ಈ ಕುರಿತು ಪರ–ವಿರೋಧದ ಚರ್ಚೆಯೂ ತೀವ್ರವಾಗಿದೆ.

ತಮಿಳ್ನಾಡಿಗೆ ಹರಿಸುತ್ತಿರುವ ನೀರು ನಿಲ್ಲಿಸದಿದ್ದರೆ ಸಚಿವರಿಗೆ ಘೇರಾವ್

● ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಎಚ್ಚರಿಕೆ ● ಗ್ಯಾರಂಟಿ ಬದಲು ಮಹಿಳೆಯರಿಗೆ ಶೇ.50 ರಾಜಕೀಯ ಮೀಸಲಾತಿ ನೀಡಲಿ ● ಕಬ್ಬು ಬೆಳೆಗಾರರ ಬೇಡಿಕೆ ಈಡೇರಿಸದಿದ್ದರೆ ರಾಜ್ಯಾದ್ಯಂತ ಹೋರಾಟ



ಮೈಸೂರು, ಆ.20(ಎಂಟಿವೈ)– ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಿಂದ ತಮಿಳುನಾಡಿಗೆ ನೀರು ಬಿಡುತ್ತಿರುವುದನ್ನು ನಿಲ್ಲಿಸದಿದ್ದರೆ ಸಚಿವರಿಗೆ ಕಂಡ ಕಂಡಲ್ಲಿ ಘೇರಾವ್ ಹಾಕುವ ಚಳುವಳಿ ಆರಂಭಿಸುವುದಾಗಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಎಚ್ಚರಿಕೆ ನೀಡಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಸರಿಯಾಗಿ ಮಳೆ ಆಗಿಲ್ಲ. ಜಲಾಶಯಗಳು ಭರ್ತಿಯಾಗಿಲ್ಲ. ಸ್ಥಳೀಯವಾಗಿ ಕೃಷಿ ಚಟುವಟಿಕೆಗೆ ನೀರಿನ ಕೊರತೆ ಉಂಟಾಗುವ ಸಾಧ್ಯತೆ ಇದೆ. ಪರಿಸ್ಥಿತಿ ಹೀಗಿದ್ದರೂ ಕಬಿನಿ, ಕಾವೇರಿಯಿಂದ ತಮಿಳುನಾಡಿಗೆ ನೀರು ಹರಿಸಲಾಗುತ್ತಿದೆ. ಕೂಡಲೇ ನೀರು ನಿಲ್ಲಿಸದಿದ್ದರೆ, ಸಚಿವರುಗಳಿಗೆ ಘೇರಾವ್ ಹಾಕಿ, ಪ್ರತಿಭಟಿಸಲಾಗುವುದು. ನೀರಾವರಿ ಸಚಿವ ಡಿ.ಕೆ.ಶಿವಕುಮಾರ್ ಕಾವೇರಿ ಭಾಗದ ರೈತರ ಮರಣಶಾಸನ ಬರೆಯಲು ಮುಂದಾಗಿದ್ದಾರೆ. ಅಚ್ಚುಕಟ್ಟು ಭಾಗದ ರೈತರ ಬಗ್ಗೆ ಕಣ್ಣೀರು ಸುರಿಸಿ ತಮಿಳುನಾಡಿಗೆ ನೀರು ಬಿಡುತ್ತಿದ್ದಾರೆ. ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಸರ್ವಪಕ್ಷಗಳ ಮುಖಂಡರು ಹಾಗೂ ರೈತ ಮುಖಂಡರ ಸಭೆ ಕರೆದು, ಚರ್ಚಿಸಿ ರಾಜ್ಯದ ರೈತರ ಹಿತ ಕಾಪಾಡಲು ಮುಂದಾಗಬೇಕು ಎಂದರು.

ಶೇ.50ರಷ್ಟು ಮೀಸಲಾತಿ ನೀಡಲಿ: ಗ್ಯಾರಂಟಿ ಯೋಜನೆಗಳಾದ ಉಚಿತ ಬಸ್, ಗೃಹಲಕ್ಷ್ಮಿ ಯೋಜನೆಗಳ ಮೂಲಕ ಸರ್ಕಾರ ಮಹಿಳೆಯರ ಮೂಗಿಗೆ ತುಪ್ಪ ಸವರುವ ಕೆಲಸ ಮಾಡುತ್ತಿದೆ. ಈ ಯೋಜನೆ ಬದಲು ಸಂಸತ್ ಹಾಗೂ ಶಾಸನ ಸಭೆಯಲ್ಲಿ ಶೇ.50ರಷ್ಟು ಮೀಸಲಾತಿ ಕಲ್ಪಿಸಬೇಕು. ಮಹಿಳಾ ಮೀಸಲಾತಿ ಕುರಿತಂತೆ ಕಾಂಗ್ರೆಸ್ ವರಿಷ್ಠರಾದ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಹೋರಾಟ ನಡೆಸಬೇಕು ಎಂದು ಸಲಹೆ ನೀಡಿದರು.

ಬೇಡಿಕೆ ಈಡೇರಿಕೆಗೆ ಹೋರಾಟ: ಕಬ್ಬು ಬೆಳೆಗಾರರ ಸಮಸ್ಯೆಯನ್ನು ಬಗೆಹರಿಸದಿದ್ದರೆ, ರೈತರು ರಾಜ್ಯಾದ್ಯಂತ ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ. ಸಕ್ಕರೆ, ಕಾನೂನು, ಸಚಿವರು ಒಳಗೊಂಡಂತೆ ರೈತ ಮುಖಂಡರನ್ನು ಆಹ್ವಾನಿಸಿ ಸಭೆ ನಡೆಸಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ ಅವರು, ಭರವಸೆಯಂತೆ ಆ.30ರಂದು ಸಕ್ಕರೆ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ಕರೆದಿರುವುದಾಗಿ ಕಬ್ಬು ಅಭಿವೃದ್ಧಿ ಆಯುಕ್ತರು ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ. ಅಂದು ಸಮಸ್ಯೆ ಬಗೆಹರಿಯದಿದ್ದರೆ ಕಬ್ಬು ಬೆಳೆಯುವ ರೈತರು ರಾಜ್ಯಾದ್ಯಂತ ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ

ರೈತರು ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ಹೊತ್ತಿನಲ್ಲಿ ಸಮರ್ಪಕ ವಿದ್ಯುತ್, ರೈತರ ಬೆಳೆಗಳಿಗೆ ನ್ಯಾಯಯುತ ಬೆಲೆ ನಿಗದಿ ಮಾಡುವವರೆಗೆ ಆಧಾರ್ ಲಿಂಕ್ ಮಾಡಲು ವಿರೋಧ ವ್ಯಕ್ತಪಡಿಸಲಾಗಿದೆ. ಯಾವುದೇ ಕಾರಣಕ್ಕೂ ರೈತರು ಆಧಾರ್ ಜೋಡಣೆಗೆ ವಿರೋಧಿಸಬೇಕು ಕರ ನಿರಾಕರಣೆ ಮೂಲಕ ಗ್ರಾಮ ಘಟಕಗಳಿಂದ ಚಳುವಳಿ ಆರಂಭಿಸಬೇಕು ಎಂದರು.

ಕೇಂದ್ರ ಸರ್ಕಾರ ವಿಶ್ವ ವ್ಯಾಪಾರ ಒಪ್ಪಂದದಿಂದ ಹಿಂದೆ ಸರಿಯದಿದ್ದರೆ, ದೇಶದ ರೈತರ ಸ್ಥಿತಿ ಅಧೋಗತಿಗೆ ಹೋಗುತ್ತದೆ. ಈಗಾಗಲೇ ಕೊಬ್ಬರಿ ಬೆಲೆ ಕುಸಿತವಾಗಿರುವುದು ಆಮದು ತೆರಿಗೆಯನ್ನು ಶೇ.40 ರಷ್ಟು ಇಳಿಕೆ ಮಾಡಿದ ಪರಿಣಾಮದಿಂದ. ಕೊಬ್ಬರಿ ಬೆಳೆದ ರೈತ ಈಗ ಬೀದಿಗಿಳಿಯಬೇಕಾಗಿದೆ. ಈ ಬಗ್ಗೆ ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಸಂಘಟನೆ ದೇಶಾದ್ಯಂತ ಸದ್ಯದಲ್ಲಿಯೇ ಹೋರಾಟಕ್ಕೆ ಕರೆ ನೀಡಲು ತೀರ್ಮಾನಿಸಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳಾದ ಅತ್ತಳ್ಳಿ ದೇವರಾಜ್, ಪಿ.ಸೋಮಶೇಖರ್, ಬರಡನಪುರ ನಾಗರಾಜ್, ಕೆರೆಹುಂಡಿ ರಾಜಣ್ಣ, ಕುರುಬೂರು ಪ್ರದೀಪ್, ಚಿಕ್ಕಳ್ಳಿ ಮಂಜಣ್ಣ ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ ಜಿಮ್ ಟ್ರೈನರ್ ಹತ್ತ ಹೋಗಿ : ಹುಡುಗಿಗೆ ಇಂಪ್ರೆಸ್ ಆಗೋ ತರ ನಾನು ಆಗಬೇಕಾದರೆ, ಯಾವ ಮೆಷಿನ್ ಯೂಸ್ ಮಾಡ್ಬೇಕು...?

ಜಿಮ್ ಟ್ರೈನರ್ : ಹೊರಗಡೆ ಎಟಿಎಂ ಮೆಷಿನ್ ಇದೆ, ಅದನ್ನೇ ಯೂಸ್ ಮಾಡು...!

ಮೈಸೂರು ಮಿತ್ರ

ಸೋಮವಾರ, 21 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಬರೆದವನಿಗೆ ಅಳಿಸಲಾಗದ, ಬರೆಸಿಕೊಂಡವನಿಗೆ ಓದಲಾಗದ ಬರಹವೇ 'ಹಣೆಬರಹ'...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಗ್ಗು ಗದ್ದೆಗೆ ಮೂರು ಬೆಳೆ, ಎತ್ತರ ಗದ್ದೆಗೆ ಒಂದೇ ಬೆಳೆ

ನಿಮ್ಮ ಪತ್ರಗಳು

ಸ್ತ್ರೀ ವ್ಯಕ್ತಿತ್ವಹರಣ ಪದ ಬಳಕೆ ನಿಷಿದ್ಧ ಸ್ವಾಗತಾರ್ಹ

ಮಾನ್ಯರೆ,

ಭಾರತ ದೇಶದಲ್ಲಿ ಸ್ತ್ರೀಯರಿಗೆ ವಿಶೇಷ ಸ್ಥಾನವಿದೆ, ಸಂಸ್ಕೃತ ಶ್ಲೋಕದ ಪ್ರಕಾರ "ಕಾರ್ಯೇಷು ದಾಸಿ, ಕರನೇಷು ಮಂತ್ರಿ;ಭೋಜೇಷು ಮಾತಾ, ಶಯನೇಷು ರಂಭ;ರೂಪೇಷು ಲಕ್ಷ್ಮಿ, ಕ್ಷಮಾಯೇಷು ಧರಿತ್ರೀ;ಸತ್ಕರ್ಮ ನಾರಿ, ಕುಲಧರ್ಮ ಪತ್ನಿ "ಇದರ ಅರ್ಥ" ಸೇವಕನಂತೆ ಕೆಲಸ ಮಾಡುತ್ತಾಳೆ, ಮಂತ್ರಿಯಂತೆ ಸಲಹೆ ನೀಡುತ್ತಾಳೆ, ತಾಯಿಯಂತೆ ಪೋಷಿಸುತ್ತಾಳೆ, ಅಪ್ಸರೆಯಂತೆ ಪ್ರೀತಿ ಮಾಡುತ್ತಾಳೆ, ಲಕ್ಷ್ಮಿಯಂತೆ ಸುಂದರಿ ಮತ್ತು ಭೂಮಿಯಂತೆ ಕ್ಷಮಿಸುತ್ತಾಳೆ".

ಒಬ್ಬ ಪುರುಷನ ಜೀವನದಲ್ಲಿ ಹೆಣ್ಣು ತಾಯಿ, ಮಗಳು, ಸಹೋದರಿ, ಹೆಂಡತಿಯಾಗಿ ಜೀವನದ ಅವಿಭಾಜ್ಯ ಅಂಗವಾಗಿದ್ದಾಳೆ. ಹೆಣ್ಣು ಮಗುವಿನ ಜನನದ ಸಮಯದಲ್ಲಿ 206 ಮೂಳೆಗಳನ್ನು ಮುರಿಯುವಷ್ಟು ನೋವು ಅನುಭವಿಸಿ ಮಗುಗೆ ಜನ್ಮ ನೀಡುತ್ತಾಳೆ. ಇಂತಹ ಶ್ರೇಷ್ಠ ವ್ಯಕ್ತಿತ್ವದ ಹೆಣ್ಣನ್ನು ವೇಶ್ಯೆ, ಹಾದರಗಿತ್ತಿ, ಕೀಪ್, ಪ್ಯಾಗೆಟ್, ಮಿಸ್ಟ್ರಸ್, ಬಾಸ್ಟರ್ಡ್ ಮುಂತಾದ ವ್ಯಕ್ತಿತ್ವಕ್ಕೆ ಧಕ್ಕೆಯಾಗುವಂತಹ ಪದಗಳನ್ನು ಜನಸಾಮಾನ್ಯರ ಜೊತೆಗೆ ನ್ಯಾಯಾಲಯಗಳ ಆದೇಶಗಳು ಮತ್ತು ತೀರ್ಪುಗಳಲ್ಲಿ ಬಳಸದಂತೆ ನಿರ್ಬಂಧ ಹೇರಿರುವ ಸುಪ್ರೀಂಕೋರ್ಟ್‌ನ ಅದೇಶ ಸ್ವಾಗತಾರ್ಹ ಕ್ರಮವಾಗಿದೆ.

ಹೆಣ್ಣಿನ ಉಡುಗೆ ತೊಡುಗೆ, ಚಾರಿತ್ರ್ಯ, ಜೀವನ ಶೈಲಿ ಆಧರಿಸಿ ಮೇಲಿನ ಪದಗಳನ್ನು ಬಳಸದಂತೆ ಮತ್ತು ಈ ಪದಗಳಿಗೆ ಪರ್ಯಾಯವಾಗಿ ಉದಾಹರಣೆಗೆ: ವೇಶ್ಯೆ–ಲೈಂಗಿಕ ಕಾರ್ಯಕರ್ತೆ, ಹಾದರಗಿತ್ತಿ–ಮಹಿಳೆ, ಹೌಸ್ ವೈಫ್–ಹೌಸ ಮೇಕರ್, ಕೀಪ್–ವಿವಾಹೇತರ ಸಂಬಂಧಿ, ಪ್ಯಾಗೆಟ್–ಲೈಂಗಿಕ ಆಸಕ್ತಿಯ ಪದ, ಮಿಸ್ಟ್ರಸ್–ವಿವಾಹೇತರ ಸಂಬಂಧಿ, ಬಾಸ್ಟರ್ಡ್–ಪೋಷಕರು ಮದುವೆಯಾಗಿಲ್ಲ ಎಂಬ ಪದಗಳನ್ನು ಬಳಸುವ ಆದೇಶ ನೀಡಿರುವ ಸುಪ್ರೀಂಕೋರ್ಟ್‌ನ ಆದೇಶ ಜೀವನ ನಿರ್ವಹಣೆಗಾಗಿ ವೇಶ್ಯಾ ವೃತ್ತಿ ಹಾಗೂ ಇನ್ನೂ ಮುಂತಾದ ಅನೈತಿಕ ಚಟುವಟಿಕೆಗಳಲ್ಲಿ ತೊಡಗಿರುವ ಮಹಿಳೆಯರನ್ನು ಸಹ ಗೌರವದಿಂದ ಕಾಣುವಂತಹ ವಾತಾವರಣ ಸಮಾಜದಲ್ಲಿ ನಿರ್ಮಾಣವಾಗಲು ಸಹಕಾರಿಯಾಗುತ್ತದೆ.

ಸುಪ್ರೀಂಕೋರ್ಟ್‌ನ ಈ ಹೊಸ ಆದೇಶದಿಂದಾಗಿ ಲಿಂಗ ಅಸಮಾನತೆಯನ್ನು ಸಮಾಜದಲ್ಲಿ ಹೋಗಲಾಡಿಸಬಹುದಾಗಿದೆ. ಸುಪ್ರೀಂಕೋರ್ಟ್ ಈ ಆದೇಶ ಸಮಾಜದಲ್ಲಿ ಮಹಿಳೆಯರ ಘನತೆ ಗೌರವಗಳನ್ನು ಎತ್ತಿ ಹಿಡಿಯುವಂತಾಗಲಿ ಎಂದೂ ಆಶಿಸೋಣ ಮತ್ತು ದೇಶದ ಎಲ್ಲಾ ಮಹಿಳೆಯರ ಪರವಾಗಿ ಸುಪ್ರೀಂಕೋರ್ಟ್‌ಗೆ ಧನ್ಯವಾದಗಳು.

– ರಾಸುಮ ಭಟ್, ಚಿಕ್ಕಮಗಳೂರು.

ಹಿಂದುಳಿದ ಜಿಲ್ಲೆಯಲ್ಲಿ, ಹಿಂದುಳಿಯಿತೇ ಸರ್ಕಾರಿ ಶಾಲೆಗಳು!

ಮಾನ್ಯರೆ,

ರಾಜ್ಯದಲ್ಲಿರುವ ಜಿಲ್ಲೆಗಳ ಪೈಕಿ ಚಾಮರಾಜನಗರ ಜಿಲ್ಲೆಗೆ ಈಗಾಗಲೇ "ಹಿಂದುಳಿದ ಜಿಲ್ಲೆ" ಎಂಬ ಬಿರುದೊಂದಿಗೆ ಹೆಸರುವಾಸಿಯಾಗಿದ್ದು, ಅದರಂತೆ ಈ ಜಿಲ್ಲೆಯಲ್ಲಿ ಸರ್ಕಾರಿ ಶಾಲೆಗಳು ಶಿಕ್ಷಣದಲ್ಲಿ ಹಿಂದುಳಿಯಿತೆ...? ಇತ್ತ ಜಿಲ್ಲೆಯಲ್ಲಿ ಸರಿಯಾದ ಮಳೆ–ಬೆಳೆಗಳಿಲ್ಲದೆ ಈ ಭಾಗದ ಜನರು ಸಾವಿರಾರು ಸಂಖ್ಯೆಯಲ್ಲಿ ಪ್ರತಿದಿನ ಮೈಸೂರು –ಬೆಂಗಳೂರಿನಂತಹ ನಗರಗಳಿಗೆ ವಲಸೆ ಬಂದು ದುಡಿಯುತ್ತಾರೆ. ಇಂತಹ ಸಾರ್ವಜನಿಕರು ತಮ್ಮ ಮಕ್ಕಳಿಗೆ ಶಿಕ್ಷಣ ನೀಡುವುದರಲ್ಲಿ ಕೊರತೆ ಇಲ್ಲದಂತೆ ಸರ್ಕಾರಿ ಶಾಲೆಗಳಿಗೆ ಸೇರಿಸುತ್ತಾರೆ. ಇಂತಹದರಲ್ಲಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ, ಮೂಲ ಸೌಕರ್ಯಗಳಿಲ್ಲದೆ ಮತ್ತು ಶೂನ್ಯ ದಾಖಲಾತಿಯ ಕಾರಣ ನೀಡಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕು–06, ಚಾಮರಾಜನಗರ ತಾಲೂಕು–05, ಕೊಳ್ಳೇಗಾಲ ಮತ್ತು ಯಳಂದೂರು ತಾಲೂಕಿನಲ್ಲಿ ತಲಾ ಒಂದೊಂದು ಸರ್ಕಾರಿ ಶಾಲೆ ಸೇರಿ ಒಟ್ಟು ಹದಿಮೂರು ಸರ್ಕಾರಿ ಶಾಲೆಗಳಿಗೆ ಬೀಗ ಜಡಿದು ಬಂದ್ ಮಾಡಿರುವ ಘಟನೆಯಿಂದ ಜಿಲ್ಲೆಯಲ್ಲಿ ಸರ್ಕಾರಿ ಶಾಲಾ ಕಾಲೇಜಿನ ವಿದ್ಯಾರ್ಥಿಗಳ ಪೋಷಕರಿಗೆ, ಬಂದ್ ಮಾಡಿರುವ ಶಾಲೆಗಳ ಗ್ರಾಮದ ಜನರಿಗೆ ತೊಂದರೆಯಾಗಿದೆ. ಇನ್ನು ಮುಂದೆ ಈ ಶಾಲೆಯ ಮಕ್ಕಳು ಶಿಕ್ಷಣಕ್ಕೆ ಬೇರೆ ಗ್ರಾಮಗಳಿಗೆ ತೆರಳಲು ಈಗಾಗಲೇ ಕೆಲವು ಸಮಯಗಳಲ್ಲಿ ಬಸ್ಸಿನ ಸೌಲಭ್ಯಗಳು ಸರಿಯಿಲ್ಲ ಮತ್ತು ರಸ್ತೆಗಳು ಹಾಳಾಗಿರುವುದರಿಂದ, ಮತ್ತೆ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಎದುರಾಗಿದೆ. ಇನ್ನೂ ಮುಂದಾದರೂ ಈ ಭಾಗದಲ್ಲಿರುವ ಸರ್ಕಾರಿ ಶಿಕ್ಷಣ ಕ್ಷೇತ್ರಗಳನ್ನು ಅಭಿವೃದ್ಧಿ ಪಡಿಸಲು ಈ ಜಿಲ್ಲೆಯ ಜನಪ್ರತಿನಿಧಿಗಳಾದ ಸಂಸದರು, ಶಾಸಕರು, ಅಧಿಕಾರಿಗಳು ಮತ್ತು ಶಿಕ್ಷಣ ಕ್ಷೇತ್ರದ ಉನ್ನತ ಅಧಿಕಾರಿಗಳು ಕ್ರಮ ಕೈಗೊಂಡು ಈ ಜಿಲ್ಲೆಯ ಶಿಕ್ಷಣ ಕ್ಷೇತ್ರದ ವಲಯದ ಕೊರತೆಗಳನ್ನು ನೀಗಿಸಲು ಮುಂದಾಗಬೇಕು.

– ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಗದ್ದಿಗೆ ರಸ್ತೆಯಿಂದ ರೈಲ್ವೇ ನಿಲ್ದಾಣ, ಬಸ್ ನಿಲ್ದಾಣಕ್ಕೆ ಬಸ್ ವ್ಯವಸ್ಥೆಯಾಗಲಿ

ಮಾನ್ಯರೆ,

ನಾನು 2011ರಲ್ಲಿ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದು ಪ್ರಸ್ತುತ ಇಲ್ಲಿಯೇ ಉದ್ಯೋಗದಲ್ಲಿದ್ದೇನೆ. ನಾನು ಗಂಗೋತ್ರಿಯಲ್ಲಿದ್ದಾಗ ಬಸ್ ಸಂ. 129, 130 ಮತ್ತು 135 ಬಸ್‌ಗಳು ಗಂಗೋತ್ರಿಯ ಕ್ಯಾಂಪಸ್‌ನಿಂದ ಬಿ.ಎಂ.ಹೆಚ್ ಹಾದಿಯಲ್ಲಿ ರೈಲ್ವೇ ನಿಲ್ದಾಣಕ್ಕೆ ಮತ್ತು ಬಸ್ ನಿಲ್ದಾಣಕ್ಕೆ ತಲುಪಲು ಸಹಕಾರಿಯಾಗಿದ್ದವು. ಆದರೆ ಈಗ ಕ್ಯಾಂಪಸ್‌ನ ಭದ್ರತೆಯ ದೃಷ್ಟಿಯಿಂದ ಅಲ್ಲಿಗೆ ಬಸ್ ಹೋಗುವುದನ್ನು ರದ್ದುಗೊಳಿಸಿರಬಹುದು. ಅಲ್ಲಿಗೆ ಬಸ್ ಹೋಗಲಾರದು ಎಂಬ ಕಾರಣಕ್ಕೆ ಆ ಬಸ್ಸನ್ನು ರದ್ದುಗೊಳಿಸಿರುವುದು ಸೂಕ್ತವಾದ ನಿರ್ಧಾರವಲ್ಲ. ಆ ಬಸ್ಸನ್ನು ಸಿಟಿ ಬಸ್ ನಿಲ್ದಾಣದಿಂದ 'ಸರಸ್ವತಿಪುರಂ' ಮೂಲಕ 'ಸ್ಪೀಚ್ ಅಂಡ್ ಹಿಯರಿಂಗ್' ಸಂಸ್ಥೆಯ ನಿಲ್ದಾಣದಲ್ಲಿ ತಿರುವನ್ನು ಪಡೆದು ಅಲ್ಲಿಂದ 'ಬಿ.ಎಂ.ಹೆಚ್' ಮೂಲಕ 'ರೈಲ್ವೇ ನಿಲ್ದಾಣ'ಕ್ಕೆ ಮತ್ತು ಅಶೋಕ ರಸ್ತೆಯಲ್ಲಿರುವ 'ಅಂಚೆ ಕಚೇರಿ'ಯ ನಿಲ್ದಾಣಕ್ಕೆ ತಲುಪಲು ವ್ಯವಸ್ಥೆಯಾದರೂ ಬಸ್ ನಿಲ್ದಾಣಕ್ಕೆ ಸುಲಭವಾಗಿ ತಲುಪಬಹುದಾಗಿದೆ. ಗದ್ದಿಗೆಯಿಂದ ಬೋಗಾದಿಯವರೆಗೆ ವಾಸವಿರುವ ಸಾರ್ವಜನಿಕರು ಈ ಬಸ್ ವ್ಯವಸ್ಥೆಯನ್ನು ಪಡೆಯಲು ಕನಿಷ್ಠ ಅವಕಾಶವಾಗುತ್ತದೆ. ರಾಮಸ್ವಾಮಿ ವೃತ್ತದಲ್ಲಿ ಬಿಟ್ಟರೆ, ಬೋಗಾದಿ ಮತ್ತು ಗದ್ದಿಗೆ ರಸ್ತೆಯಲ್ಲೆಲ್ಲೂ ರೈಲ್ವೇ ನಿಲ್ದಾಣ ಮತ್ತು ಬಸ್ ನಿಲ್ದಾಣಗಳನ್ನು ತಲುಪಲು ಬಸ್ ವ್ಯವಸ್ಥೆಯೇ ಇಲ್ಲದಂತಾಗಿದೆ. ಆದ್ದರಿಂದ, ಸಂಬಂಧಪಟ್ಟ ಅಧಿಕಾರಿ ವೃಂದವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ಈ ಮೂಲಕ ಕೋರುತ್ತೇನೆ.

– ಡಾ. ದಿದ್ದಿಗಿ ವಂಶಿಕೃಷ್ಣ, ಮೈಸೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

Engage ಆದ್ರೆ Young age ಥರ ಇರಬಹುದು...!

> "ಈ ಆಧುನಿಕ ಜಗತ್ತಿನಲ್ಲಿ ಮನುಷ್ಯ ಅಗತ್ಯ ಕೆಲಸಗಳಿಗೆ ದೇಹ ದಂಡಿಸುವುದು ಕಡಿಮೆಯಾಗುತ್ತಿದೆ. ಮನೆ ಮಕ್ಕಳು, ಅಪ್ಪ-ಅಮ್ಮ ಸಣ್ಣಪುಟ್ಟ ಕೆಲಸ ಹೇಳಿದರೂ ಉಪೇಕ್ಷಿಸಿ, ಅನಗತ್ಯವಾಗಿ ಜಿಮ್‌ಗಳಲ್ಲಿ ಬೆವರು ಸುರಿಸುತ್ತಿರುತ್ತಾರೆ. ಸಣ್ಣ ಸಣ್ಣ ಕೆಲಸಗಳಿಗೆ ಕಾರು, ಬೈಕ್‌ಗಳನ್ನು ಬಳಸುವುದು ಸಹಜವಾಗಿದೆ. ಪ್ರತಿಷ್ಠೆಯ ಕಾರಣಕ್ಕೆ, ಮನೆಯ ಹತ್ತಿರವಿರುವ ಪಾರ್ಕ್‌ಗೆ ವಾಕ್ ಮಾಡಲು ಬರುವ ಜನ ಬೈಕ್/ಸ್ಕೂಟರ್‌ಗಳಲ್ಲಿ ಬರುವುದು ಅರ್ಥಹೀನ ಎನ್ನಿಸುತ್ತದೆ. ಅನೇಕ ಯುವಕರು ಇಂದು ತಮ್ಮ ಅಮೂಲ್ಯ ಸಮಯ ಹಾಗೂ ಶಕ್ತಿಯನ್ನು ಮೊಬೈಲ್ ಫೋನ್ ನೋಡುವ ದುರಭ್ಯಾಸದಲ್ಲಿಯೇ ಕಳೆದುಬಿಡುತ್ತಿದ್ದಾರೆ. ದೈಹಿಕ ಚಟುವಟಿಕೆ/ ಮಾನಸಿಕ ಚಟುವಟಿಕೆ ಇರುವ ಕ್ರೀಡೆಗಳಿಂದ ದೂರ ಉಳಿದು ಮೊಬೈಲ್/ಕಂಪ್ಯೂಟರ್ ವಿಡೀಯೋ ಗೇಮ್‌ಗಳ ಚಟಕ್ಕೆ ಬಲಿಯಾಗಿ, ಚಿಕ್ಕ ವಯಸ್ಸಿಗೆ ಧೂಮಪಾನ, ಮದ್ಯಪಾನದಂತಹ ದುರಭ್ಯಾಸಗಳ ದಾಸರಾಗಿ ಅಕಾಲ ವೃದ್ಧಾಪ್ಯಕ್ಕೆ ಈಡಾಗುತ್ತಿದ್ದಾರೆ. ಪರಿಶ್ರಮದಿಂದ ದುಡಿದು ದೇಶಕ್ಕೆ ಆಸ್ತಿಯಾಗಬೇಕಿದ್ದ ಯುವಕರು ಕೆಲಸಕ್ಕೆ ಬಾರದ್ದನ್ನು ಮಾಡುತ್ತಾ, ದೇಶಕ್ಕೆ ಹೊರೆಯಾಗುತ್ತಿದ್ದಾರೆ.



ಮನುಷ್ಯನ ಬದುಕು ಬಲು ವಿಶಿಷ್ಟವಾದುದು. ಬುದ್ಧಿವಂತನಾದಂತೆ, ವಿದ್ಯಾವಂತನಾದಂತೆ ಮೈ ಮುರಿದು ದುಡಿಯುವ ಬದಲು ಕುಳಿತು ತಿನ್ನುವ ಮನೋಭಾವ ಹೆಚ್ಚು. ದೈಹಿಕವಾಗಿ ಶ್ರಮ ವಹಿಸುವವರಿಗಿಂತ ಮಾನಸಿಕ ಶ್ರಮಕ್ಕೆ ಇಂದು ಬೆಲೆ ಹೆಚ್ಚು, ಅವರಿಗೆ ಸಂಪಾದನೆಯೂ ಹೆಚ್ಚು. ಬೆವರು ಸುರಿಸಿ ಜಮೀನಿನಲ್ಲಿ ಮೈಮುರಿದು ದುಡಿಯುವವರಿಗಿಂತ ಎ.ಸಿ. ಕೊಠಡಿಯಲ್ಲಿ ಬೆವರೇ ಬರದಂತೆ ದುಡಿಯುವ ಮಂದಿ ದಿಗ್ಭ್ರಮೆ ಆಗುವಷ್ಟು ಸಂಪಾದನೆ ಮಾಡುತ್ತಿರುತ್ತಾರೆ. ಎಲ್ಲದಕ್ಕೂ ಒಂದು ನಿವೃತ್ತಿ ವಯಸ್ಸು ಎಂಬುದಿರುತ್ತದೆ. ಆದರೆ ಕೆಲವು ವೃತ್ತಿಗಳಿಗೆ ನಿವೃತ್ತಿ ಎಂಬುದೇ ಇರದು. ಭೂಮಿಯಿಂದ ನಿರ್ಗಮಿಸುವವರೆಗೂ ದುಡಿಯುವ ಅಗತ್ಯ ಇದ್ದೇ ಇರುತ್ತದೆ. ಆದರೆ ಎಷ್ಟೋ ಮಂದಿ ಕೆಲಸದಿಂದ ನಿವೃತ್ತಿ ಆದ ಬಳಿಕ ಒನ್ ಡೇ ಮ್ಯಾಚ್‌ನಂತೆ ತಮ್ಮ ಆಟ ಮುಗಿಸಿ ನಡೆದುಬಿಡುತ್ತಾರೆ. ಆದರೆ ಕೆಲವರು ಮಾತ್ರ ಟೆಸ್ಟ್ ಮ್ಯಾಚ್‌ನಂತೆ ದ್ವಿತೀಯ ಇನ್ನಿಂಗ್ಸ್‌ನಲ್ಲೂ ಚೆನ್ನಾಗಿಯೇ ಆಡುತ್ತಾರೆ. ಅಂದರೆ ಕೆಲವರು ನಿವೃತ್ತಿಯಾದ ಬಳಿಕ ಬದುಕಿನಿಂದಲೇ ಬಹುಬೇಗ ನಿರ್ಗಮಿಸಿದರೆ ಮತ್ತೆ ಕೆಲವರು ನಿವೃತ್ತಿಯಾದ ಬಳಿಕ ಅನೇಕ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು 80 ವರ್ಷ ವಯಸ್ಸಾದರೂ ಚಿರಯುವಕರಂತೆ ಆರೋಗ್ಯ, ಚೈತನ್ಯ ಹೊಂದಿರುತ್ತಾರೆ. ಹೀಗಂದ ಮಾತ್ರಕ್ಕೆ ಇಳಿವಯಸ್ಸಿನಲ್ಲಿ ಹಣ ಸಂಪಾದಿಸಲು ದುಡಿಯಬೇಕು ಎಂದಲ್ಲ. ವಯಸ್ಸಿಗೆ ತಕ್ಕುದಾದ ಸೇವೆ/ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಆರೋಗ್ಯ ಸ್ಥಿರತೆ ಜೊತೆಗೆ ಜೀವನ ಪ್ರೀತಿ ಕಡಿಮೆಯಾಗುವುದಿಲ್ಲ ಎಂದಷ್ಟೆ. ಬದುಕಿರುವ ಕೊನೆಯ ದಿನದವರೆಗೂ ಜೀವಂತವಾಗಿದ್ದರೆ ಸಾಲದು ಬದುಕಿನಲ್ಲಿ ಜೀವಂತಿಕೆ ಇರಬೇಕು, ಅದೇ ಸಹಜ ಜೀವನ.

ಅಮೇರಿಕಾದ ತತ್ವಜ್ಞಾನಿ ಹಾಗೂ ಹೆಸರಾಂತ ಲೇಖಕರೂ ಆದ **ಬೆಂಜಮಿನ್ ಫ್ರಾಂಕ್ಲಿನ್** ಅಮೂಲ್ಯವಾದ ಮಾತೊಂದನ್ನು ಹೇಳಿದ್ದಾರೆ. 'ಕೆಲವರು 25ನೇ ವಯಸ್ಸಿಗೆ ನಿಧನ ಹೊಂದುತ್ತಾರೆ, ಆದರೆ ಅವರನ್ನು 75 ವರ್ಷದವರೆಗೂ ಮಣ್ಣು ಮಾಡಿರುವುದಿಲ್ಲ' ಎಂದು. ಇದರ ಅರ್ಥ ಇಷ್ಟೇ, ಎಷ್ಟೋ ಜನರು ಕಿರಿಯ ವಯಸ್ಸಿಗೆ ಬದುಕಿನಲ್ಲಿ ಆಸಕ್ತಿ ಕಳೆದುಕೊಂಡು ಪ್ರಾಣಿಗಳಿಗಿಂತಲೂ ಕನಿಷ್ಠ ಜೀವನ ನಡೆಸುತ್ತಿರುತ್ತಾರೆ. ಅಂದರೆ ಚಟುವಟಿಕೆಗಳಿಲ್ಲದ ಜೀವನ ನೀರಸ ಎನಿಸುತ್ತದೆ. ಎಲ್ಲದರ ಮೇಲೆ ನಿರಾಸಕ್ತಿ ಉಂಟಾಗಿ ಜೀವನವೇ ಜಿಗುಪ್ಸೆ ಎನಿಸಿಬಿಡುತ್ತದೆ. ಅವರು ಜೀವನದ ಕುರಿತು ಋಣಾತ್ಮಕವಾದ ಮಾತುಗಳನ್ನಾಡುತ್ತಿರುತ್ತಾರೆ. ಅಂತಹವರ ದೇಹ ಉಸಿರಾಡುತ್ತಿರುತ್ತದೆ ಅಷ್ಟೆ. ಆದರೆ ಅವರ ಬದುಕು ನಿರ್ಜೀವವಾಗಿರುತ್ತದೆ. ಅಂಥವರನ್ನು ಕಂಡು ಇಂತಹ ಮಾತುಗಳನ್ನು ಲೇಖಕರು ಹೇಳಿದ್ದಾರೆ ಎನ್ನಬಹುದು.

'ನಡೆಯುತ್ತಲೇ ಇದ್ದರೆ ಬದುಕು, ನಿಂತೇ ಇದ್ದರೆ ಶಿಕ್ಷೆ, ಕುಳಿತೇ ಇದ್ದರೆ ರೋಗ, ಮಲಗೇ ಇದ್ದರೆ ಸಾವು' ಎಂಬ ಕನ್ನಡದ ನಾಣ್ಣುಡಿ ಒಂದಿದೆ. ಒಂದೇ ಮಾತಿನಲ್ಲಿ ಮನುಷ್ಯ ಎಷ್ಟು ಕ್ರಿಯಾಶೀಲನಾಗಿರಬೇಕು ಎಂಬುದನ್ನು ಸರಳವಾಗಿ, ಮನೋಜ್ಞವಾಗಿ ಹೇಳಲಾಗಿದೆ. ಯಾವುದೇ ಪ್ರಾಣಿಪಕ್ಷಿಯು ಚಟುವಟಿಕೆ ರಹಿತವಾಗಿ ಇರುವುದಿಲ್ಲ. ಅವುಗಳು ಒಂದಿಲ್ಲೊಂದು ಕೆಲಸದಲ್ಲಿ ಮಗ್ನವಾಗಿರುತ್ತವೆ. ಆ ಕಾರಣಕ್ಕಾಗಿಯೇ ಅವುಗಳ ಬದುಕು ಸರಳ ಹಾಗೂ ಸ್ವಚ್ಛಂದವಾಗಿರುತ್ತದೆ. ಆದರೆ ಮನುಷ್ಯರ ಬದುಕಿನಲ್ಲಿ ಭಿನ್ನವಾದ ಅನಿಸಿಕೆಗಳಿವೆ. ಕೆಲವರಿಗೆ ಕೆಲಸದ ನಡುವೆ ವಿಶ್ರಾಂತಿ ದೊರೆತರೆ ಮತ್ತೆ ಕೆಲವರಿಗೆ ವಿಶ್ರಾಂತಿಯೇ ಕೆಲಸವಾಗಿರುತ್ತದೆ. ಇದರಿಂದಲೇ ಅನೇಕ ಅನಿರೀಕ್ಷಿತ ಅನಾರೋಗ್ಯವನ್ನು ಅನುಭವಿಸುತ್ತಾರೆ. ಸಹಜ ಬದುಕಿನಿಂದ ದೂರಾಗಿ, ಕೃತಕ ಬದುಕನ್ನು ರೂಢಿಸಿಕೊಂಡಿರುವ ಕಾರಣ ಇಂದು ಆಸ್ಪತ್ರೆಗಳು ಹತ್ತಿರ ಇವೆ, ಆರೋಗ್ಯ ದೂರಾಗಿದೆ.

ಇಂದಿನ ಯುವ ಸಮೂಹದ ವೃತ್ತಿ ಹಾಗೂ ಪ್ರವೃತ್ತಿಗಳು ನಿಜಕ್ಕೂ ಸೋಜಿಗವೆನಿಸುತ್ತದೆ. ಕೆಲವರು ವರ್ಷಕ್ಕೊಮ್ಮೆ ಹಿಮಾಲಯಕ್ಕೆ ಟ್ರೆಕ್ಕಿಂಗ್ ಹೋಗುವ ಸಾಹಸ ಮಾಡಿದರೆ ಮತ್ತೆ ಕೆಲವು ಯುವಕರು ಮೈಸೂರಿನಲ್ಲಿದ್ದರೂ ಚಾಮುಂಡಿಬೆಟ್ಟದ ಮೆಟ್ಟಿಲನ್ನು ಏರುವ ಸಾಹಸವನ್ನೂ ಮಾಡಿರುವುದಿಲ್ಲ. ವಯಸ್ಸು ಎಂಬುದು ಒಂದು ಸಂಖ್ಯೆ ಅಷ್ಟೇ. ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ವಿಡೀಯೋ ತುಣುಕುಗಳು ಬಿತ್ತರವಾಗುತ್ತಿವೆ. ಅವುಗಳಲ್ಲಿ ಅನೇಕ ವೈರುಧ್ಯಗಳನ್ನು ಕಾಣಬಹುದು. ಯಾವುದೋ ಶುಭ ಸಮಾರಂಭದ ಊಟದ ಹಾಲ್‌ನಲ್ಲಿ ಮೊಮ್ಮಗ ವಿಡಿಯೋ ಗೇಮ್ ಆಡುವುದರಲ್ಲಿ ಮಗ್ನನಾಗಿದ್ದರೆ, ಆತನ ಅಜ್ಜಿ ಎಲೆಯಿಂದ ಅನ್ನವನ್ನು ತುತ್ತು ಮಾಡಿ ಉಣಿಸುತ್ತಿರುತ್ತಾಳೆ. ಅನ್ನವನ್ನು ಬ್ರಹ್ಮ ಎಂದು ಭಾವಿಸಿ ಶ್ರದ್ಧಾ ಭಕ್ತಿಯಿಂದ ಸ್ವೀಕರಿಸಬೇಕು ಎಂದು ಬುದ್ಧಿ ಹೇಳಬೇಕಾದ ಅಜ್ಜಿ, ಮೊಮ್ಮಗನ ಮೇಲಿನ ಮಮಕಾರದಿಂದ ಅವನ ಹುಚ್ಚಾಟಗಳಿಗೆ ಪ್ರೋತ್ಸಾಹ ನೀಡುತ್ತಿದ್ದುದು ಅತಿರೇಕ ಎನ್ನಿಸುತ್ತದೆ. ಆದರೆ ಅದಕ್ಕೆ ತದ್ವಿರುದ್ಧವಾಗಿ 80 ವರ್ಷದ ಅಜ್ಜಿಯೊಬ್ಬರು ಸೈಕಲ್ ಸವಾರಿ ಮಾಡುತ್ತಾ ಖುಷಿಯಾಗಿ ಹೋಗುತ್ತಿರುವ ವಿಡೀಯೋ ನೋಡಿ ಆಶ್ಚರ್ಯವಾಯಿತು. ಆಗ ಅನಿಸಿದ್ದು, 'ಎಂಗೇಜ್ ಆಗಿದ್ದರೆ ಯಂಗ್ ಏಜ್' ಥರ ಇರಬಹುದು ಎಂದು. ವಯಸ್ಸು ಎನ್ನುವುದು ದೇಹಸ್ಥಿತಿ ಎನ್ನುವುದಕ್ಕಿಂತ ಅದು ಮನಸ್ಥಿತಿ ಎನ್ನಬಹುದು. ಮನುಷ್ಯ ಮನಸ್ಸು ಮಾಡಿದರೆ ಅಸಾಧ್ಯ ಎಂಬುದನ್ನು ಸಾಧಿಸಬಲ್ಲ ಅಲ್ಲವೇ?

ಎಷ್ಟೋ ಜನ ಬುದ್ಧಿವಂತರು, ಕೌಶಲ್ಯವುಳ್ಳವರು, ಜ್ಞಾನವುಳ್ಳವರು ನಿವೃತ್ತರಾದ ಮೇಲೆ ಎಲ್ಲವೂ ಮುಗಿಯಿತು ಎಂದು ತಿಳಿದು, ತಮ್ಮ ಜ್ಞಾನ ಕೌಶಲ್ಯಗಳನ್ನು ವ್ಯರ್ಥ ಮಾಡುತ್ತಾರೆ. ಆದರೆ ಕೆಲವು ಜನ ಮಾತ್ರ ತಮ್ಮ ಜ್ಞಾನವನ್ನು ಮತ್ತೊಬ್ಬರಿಗೆ ತಿಳಿಸುವ ಹಂಬಲ ಹಾಗೂ ತಮ್ಮ ಕೌಶಲ್ಯವನ್ನು ಮುಂದಿನ ಪೀಳಿಗೆಗೆ ಕಲಿಸಬೇಕು ಎಂಬ ಉತ್ಸಾಹ ಹೊಂದಿರುತ್ತಾರೆ. ಸೇವೆ ಮಾಡುವುದರ ಜೊತೆಗೆ ತಮ್ಮ ಜೀವನೋತ್ಸಾಹವನ್ನು ಸಹ ಕಾಪಾಡಿಕೊಂಡಿರುತ್ತಾರೆ. ಬದುಕಿನಲ್ಲಿ ಅನೇಕ ಕೊರತೆಗಳಿರಬಹುದು, ಆದರೆ ಜೀವನಪ್ರೀತಿಗೆ ಕೊರತೆ ಆದ ದಿನವೇ ಮನುಷ್ಯ ಬೇರೆ ಕಡೆ ನರಕ ಕಾಣಬೇಕಿಲ್ಲ, ಅವನ ಬದುಕೇ ನರಕ ಎನಿಸಿಬಿಡುತ್ತದೆ. ಅನೇಕರು ಇಲ್ಲದ ಸಮಸ್ಯೆಗಳನ್ನು ಊಹಿಸಿಕೊಂಡು ಇರುವ ಸಂತೋಷವನ್ನು ಮಿಸ್ ಮಾಡಿಕೊಳ್ಳುತ್ತಾರೆ, ಆದರೆ ಜಾಣರು **'ಸಮಸ್ಯೆಗಳು ಮನುಷ್ಯನಿಗೆ ಬರದೇ ಮರಕ್ಕೆ ಬರುತ್ತವೆಯೇ?'** ಎಂದು ತಿಳಿದು, ಸಮಸ್ಯೆಗಳ ಜೊತೆಗೆ ಬದುಕುವ ಮನೋಭಾವ ಬೆಳೆಸಿಕೊಂಡು ತಮ್ಮ ಜೀವನವನ್ನು ಉಲ್ಲಾಸಮಯವಾಗಿ ರೂಪಿಸಿಕೊಂಡಿರುತ್ತಾರೆ.

ವೃದ್ಧಾಶ್ರಮವೊಂದಕ್ಕೆ 90 ವರ್ಷ ವಯಸ್ಸಿನ ವಯೋವೃದ್ಧರು 61 ವರ್ಷ ವಯಸ್ಸಿನ ತಮ್ಮ ಮಗನೊಂದಿಗೆ ಬರುತ್ತಾರೆ. ಅಲ್ಲಿನ ಮ್ಯಾನೇಜರ್ ವೃದ್ಧಾಶ್ರಮಕ್ಕೆ ತಮ್ಮ ತಂದೆಯನ್ನು ಸೇರಿಸಲು ಮಗ ಬಂದಿರುವುದಾಗಿ ಭಾವಿಸಿ, 90 ವರ್ಷದ ಅಜ್ಜನ ವಿವರಗಳನ್ನು ಪಡೆಯಲು ಪ್ರಾರಂಭಿಸುತ್ತಾರೆ. ಎಲ್ಲಾ ಮಾಹಿತಿ ನೀಡಿದ ನಂತರ ಆ ಅಜ್ಜ ಒಂದು ಆಶ್ಚರ್ಯಕರವಾದ ಸಂಗತಿಯೊಂದನ್ನು ಹೇಳಿ ಮ್ಯಾನೇಜರ್ ಹುಬ್ಬೇರಿಸುವಂತೆ ಮಾಡುತ್ತಾರೆ. ಅದೇನೆಂದರೆ ಆ ಅಜ್ಜ 61 ವರ್ಷದ ಮಗನನ್ನು ವೃದ್ಧಾಶ್ರಮಕ್ಕೆ ಸೇರಿಸಲು ಬಂದಿರುವುದಾಗಿ ಹೇಳುತ್ತಾರೆ. ಕಾರಣ ಕೇಳಿ ಮ್ಯಾನೇಜರ್ ಹೌಹಾರುತ್ತಾರೆ. 90 ವರ್ಷದ ಅಜ್ಜ ಸದಾ ಚಟುವಟಿಕೆಯಿಂದ ಇದ್ದು, ಪ್ರತಿದಿನ ನಗರದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡುವ, ಚಟುವಟಿಕೆ ಆಧಾರಿತ ಕಾರ್ಯಗಳಲ್ಲಿ ಭಾಗವಹಿಸುವ ಹವ್ಯಾಸ ಹೊಂದಿರುತ್ತಾರೆ. ತಿಂಗಳಿಗೊಮ್ಮೆ ಕಿರು ಪ್ರವಾಸವನ್ನು ಮಾಡುತ್ತಿರುತ್ತಾರೆ. ಮನೆಯ ಕೈತೋಟವನ್ನು ಸುಂದರಗೊಳಿಸಿರುತ್ತಾರೆ. ಬಿಡುವಿನ ವೇಳೆಯಲ್ಲಿ ಟಿ.ವಿ.ಯಲ್ಲಿ ಕ್ರಿಕೆಟ್ ಮ್ಯಾಚ್ ನೋಡುತ್ತಾ ಎಂಜಾಯ್ ಮಾಡುತ್ತಿರುತ್ತಾರೆ. ತಮಗಿಷ್ಟವಾದ ತಿಂಡಿ ತಿನಿಸುಗಳನ್ನು ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿ ತರಿಸಿಕೊಳ್ಳುತ್ತಿರುತ್ತಾರೆ. ಆದರೆ ಕೆಲಸದಿಂದ ನಿವೃತ್ತಿಯಾಗಿ ಒಂದು ವರ್ಷ ಅಪ್ಪನ ಚಟುವಟಿಕೆಗಳನ್ನು ನೋಡಿದ ಮಗನಿಗೆ ಅಪ್ಪನ ಬದುಕು ಅಸಹಜ ಎನಿಸುತ್ತದೆ. ಈ ವಯಸ್ಸಿನಲ್ಲಿ ಹೊರಗೆ ಹೋಗುವುದು ಕ್ಷೇಮವಲ್ಲ, ಪ್ರವಾಸದಲ್ಲಿ ಬಿದ್ದು ನೋವು ಮಾಡಿಕೊಂಡರೆ, ಏನೇನೋ ಆಹಾರ ತಿಂದು ಆರೋಗ್ಯ ಹಾಳಾದರೆ ಎಂದು ಎಲ್ಲದಕ್ಕೂ ಅಪ್ಪನಿಗೆ ಈ ವಯಸ್ಸಿನಲ್ಲಿ ಇದು ಬೇಕಾ? ಎಂದು ಕಿರಿಕಿರಿ ಮಾಡುತ್ತಿರುತ್ತಾರೆ. ತನ್ನ ಸಂತೋಷದ ಜೀವನಕ್ಕೆ ಮಗ ಅಡ್ಡಿ ಪಡಿಸುತ್ತಿದ್ದಾನೆ ಎಂದು ಬೇಸತ್ತ ಅಪ್ಪ, ಮಗನನ್ನು ವೃದ್ಧಾಶ್ರಮಕ್ಕೆ ಸೇರಿಸುವ ತೀರ್ಮಾನಕ್ಕೆ ಬಂದಿರುತ್ತಾರೆ. ಇದು ತಮಾಷೆಯಾಗಿ ಕಂಡರೂ ಕೆಲವು ಹಿರಿಯ ನಾಗರಿಕರು ಆ ಅಜ್ಜನಂತೆ ಆನಂದದಿಂದ ಜೀವನವನ್ನು ಸಾಗಿಸುತ್ತಿರುವುದನ್ನು ಕಾಣಬಹುದು.

ಈ ಆಧುನಿಕ ಜಗತ್ತಿನಲ್ಲಿ ಮನುಷ್ಯ ಅಗತ್ಯ ಕೆಲಸಗಳಿಗೆ ದೇಹ ದಂಡಿಸುವುದು ಕಡಿಮೆಯಾಗುತ್ತಿದೆ. ಮನೆ ಮಕ್ಕಳು, ಅಪ್ಪ– ಅಮ್ಮ ಸಣ್ಣಪುಟ್ಟ ಕೆಲಸ ಹೇಳಿದರೂ ಉಪೇಕ್ಷಿಸಿ, ಅನಗತ್ಯವಾಗಿ ಜಿಮ್‌ಗಳಲ್ಲಿ ಬೆವರು ಸುರಿಸುತ್ತಿರುತ್ತಾರೆ. ಸಣ್ಣ ಸಣ್ಣ ಕೆಲಸಗಳಿಗೆ ಕಾರು, ಬೈಕ್‌ಗಳನ್ನು ಬಳಸುವುದು ಸಹಜವಾಗಿದೆ. ಪ್ರತಿಷ್ಠೆಯ ಕಾರಣಕ್ಕೆ, ತೋರಿಕೆಯ ಜೀವನಕ್ಕೆ ಮನಸೋತು ಎಷ್ಟೋ ಜನ ಮನೆಯ ಹತ್ತಿರ ಕಾರ್ಯಕ್ರಮ ವಿದ್ದರೂ ಅಲ್ಲಿಗೂ ಕಾರ್‌ನಲ್ಲಿ ಬರುವ ಪರಿಪಾಠವಿದೆ. ಮನೆಯ ಹತ್ತಿರವಿರುವ ಪಾರ್ಕ್‌ಗೆ ವಾಕ್ ಮಾಡಲು ಬರುವ ಜನ ಬೈಕ್/ಸ್ಕೂಟರ್‌ಗಳಲ್ಲಿ ಬರುವುದು ಅರ್ಥಹೀನ ಎನ್ನಿಸುತ್ತದೆ. ಅನೇಕ ಯುವಕರು ಇಂದು ತಮ್ಮ ಅಮೂಲ್ಯ ಸಮಯ ಹಾಗೂ ಶಕ್ತಿಯನ್ನು ಮೊಬೈಲ್ ಫೋನ್ ನೋಡುವ ದುರಭ್ಯಾಸದಲ್ಲಿಯೇ ಕಳೆದುಬಿಡುತ್ತಿದ್ದಾರೆ. ದೈಹಿಕ, ಮಾನಸಿಕ ಚಟುವಟಿಕೆ ಇರುವ ಕ್ರೀಡೆಗಳಿಂದ ದೂರ ಉಳಿದು ಮೊಬೈಲ್/ ಕಂಪ್ಯೂಟರ್ ವಿಡೀಯೋ ಗೇಮ್‌ಗಳ ಚಟಕ್ಕೆ ಬಲಿಯಾಗಿ, ಚಿಕ್ಕ ವಯಸ್ಸಿಗೆ ಧೂಮಪಾನ, ಮದ್ಯಪಾನದಂತಹ ದುರಭ್ಯಾಸಗಳ ದಾಸರಾಗಿ ಅಕಾಲ ವೃದ್ಧಾಪ್ಯಕ್ಕೆ ಈಡಾಗುತ್ತಿದ್ದಾರೆ. ಪರಿಶ್ರಮದಿಂದ ದುಡಿದು ದೇಶಕ್ಕೆ ಆಸ್ತಿಯಾಗಬೇಕಿದ್ದ ಯುವಕರು ಕೆಲಸಕ್ಕೆ ಬಾರದ್ದನ್ನು ಮಾಡುತ್ತಾ, ದೇಶಕ್ಕೆ ಹೊರೆಯಾಗುತ್ತಿದ್ದಾರೆ.

ಮನುಷ್ಯನ ದೇಹ ಆರೋಗ್ಯವಿದ್ದಷ್ಟು ಬದುಕು ಸುಮಧುರ ಹಾಗೂ ಸುಂದರವಾಗಿರುತ್ತದೆ. ದೇಹವೇ ಮನುಷ್ಯನ ನಿಜವಾದ ವಿಳಾಸ. ಆದ್ದರಿಂದ ಬಹಳ ಜತನದಿಂದ ಅದನ್ನು ಕಾಪಾಡಿಕೊಳ್ಳಬೇಕು. ಚಟುವಟಿಕೆ ಇಲ್ಲದೆ ಮೂಲೆ ಸೇರಿದ ದಿನವೇ ಮನುಷ್ಯನ ಹೆಸರು ವೋಟರ್ ಲಿಸ್ಟ್‌ನಲ್ಲಿ ಇದ್ದರೂ, ಜನಮಾನಸದ ಲಿಸ್ಟ್‌ನಲ್ಲಿ ಅಳಿಸಿಹೋಗಿರುತ್ತದೆ. ಎಷ್ಟೋ ಜನ ಸೆಲೆಬ್ರಿಟಿಗಳು ಚಟುವಟಿಕೆ ಇಲ್ಲದೆ ಮನೆ ಸೇರಿದರೆ, ಅವರು ನಿಧನರಾದಾಗ ಇವರು ಇನ್ನೂ ಬದುಕಿದ್ದರೇ? ಎಂದು ಕೆಲವರು ಕೇಳುವುದುಂಟು. ಆದ್ದರಿಂದ ಬದುಕು ಅರ್ಥಪೂರ್ಣವಾಗಿಸಲು ಎಲ್ಲರೂ ಯಾವುದಾದರು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಒಳಿತು. ಇಳಿವಯಸ್ಸಿನಲ್ಲೂ ಯುವಕರ ಮನಸ್ಥಿತಿ ಹೊಂದಿರುವ ಅನೇಕ ಜನರನ್ನು ಮಾದರಿಯಾಗಿಸಿಕೊಳ್ಳಬೇಕು. ನಮ್ಮ ಬದುಕು ನಮ್ಮದು, ಅದನ್ನು ಬೇರೆಯವರ ಎಣಿಕೆಯಂತೆ, ಆಣತಿಯಂತೆ ಇರಲು ಬಿಡಬಾರದು. ಏನಂತೀರಿ?

ಪದ ತಾಂಬೂಲ :
ದುಡಿಯದೇ ತಿನ್ನುವ ಬಸವನಿಗಿಂತ ದುಡಿದು ತಿನ್ನುವ ಎತ್ತು ಬಹುಕಾಲ ಬದುಕುತ್ತದೆ


ಮದದ ಕಾರಣ ವಿಕ್ರಮ, ಪ್ರೆಗ್ನೆನ್ಸಿ ನಿಮಿತ್ತ ಚೈತ್ರ ದಸರಾಗೆ ಮಿಸ್

ಎಂ.ಟಿ.ಯೋಗೇಶ್ ಕುಮಾರ್


ಮೈಸೂರು,ಆ.20– ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಗಜಪಡೆಯಲ್ಲಿ ಮದದ ಕಾರಣ ಸತತ ಮೂರನೇ ಬಾರಿಗೆ ವಿಕ್ರಮ, ಗರ್ಭಿಣಿಯಾಗಿರುವ ಸೂಪರ್ ಅಮ್ಮ ಚೈತ್ರ ಈ ಬಾರಿ ಜಂಜೂಸವಾರಿಯಿಂದ ದೂರವುಳಿಯುವಂತಾಗಿದೆ.

ಹೆಣ್ಣಾನೆಗಳ ಪ್ರೆಗ್ನೆನ್ಸಿ ಪರೀಕ್ಷೆ ಕಡ್ಡಾಯಗೊಳಿಸಿದ ಹಿನ್ನೆಲೆಯಲ್ಲಿ ಬಂಡೀಪುರದ ರಾಂಪುರ ಕ್ಯಾಂಪ್‌ನಲ್ಲಿನ ಸೌಮ್ಯ ಸ್ವಭಾವದ ಕುಮ್ಕಿ ಆನೆ ಚೈತ್ರ(50) ಗರ್ಭಿಣಿ ಎಂಬುದು ದೃಢಪಟ್ಟಿದೆ. ಕಳೆದ ಎರಡು ವರ್ಷ ಅರಮನೆ ಆವರಣಕ್ಕೆ ಬಂದರೂ ಮದ ನಿಯಂತ್ರಣಕ್ಕೆ ಬಾರದೇ ಜಂಬೂಸವಾರಿ ಮೆರವಣಿಗೆಯಿಂದ ಅವಕಾಶ ವಂಚಿತನಾಗಿ ಅರಮನೆ ಆವರಣದಲ್ಲೇ ಬೀಡುಬಿಟ್ಟಿದ್ದ ಹಾರಂಗಿ ಕ್ಯಾಂಪ್‌ನ ವಿಕ್ರಮ(59)ನಿಗೆ ಈ ಬಾರಿಯೂ ಮದದ ಅಂಶ ಕಂಡು ಬಂದ ಹಿನ್ನೆಲೆಯಲ್ಲಿ ಗಜಪಡೆಗೆ ಆಯ್ಕೆ ಮಾಡಿಲ್ಲ. ಅಲ್ಲದೆ, ದುಬಾರೆ ಕ್ಯಾಂಪ್‌ನಲ್ಲಿನ ಕುಮ್ಕಿ ಆನೆ ಕಾವೇರಿ(46)ಯೂ ಮೇಲ್ನೋಟಕ್ಕೆ ಗರ್ಭಿಣಿಯಂತೆ ಕಂಡು ಬಂದಿದ್ದ ಹಿನ್ನೆಲೆಯಲ್ಲಿ ಮೊದಲ ತಂಡದಲ್ಲಿ ಸ್ಥಾನ ಗಿಟ್ಟಿಸಿಕೊಳ್ಳುವಲ್ಲಿ ವಿಫಲವಾಗಿತ್ತು. ಆದರೆ, ಪ್ರೆಗ್ನೆನ್ಸಿ ಟೆಸ್ಟ್‌ನಲ್ಲಿ ಕಾವೇರಿ ಗರ್ಭಿಣಿ ಎಂಬುದು ದೃಢಪಟ್ಟ ಹಿನ್ನೆಲೆಯಲ್ಲಿ ಎರಡನೇ ತಂಡದಲ್ಲಿ ಕರೆತರುವ ನಿರೀಕ್ಷೆಯಿದೆ.

ಚೈತ್ರ ಗರ್ಭಿಣಿ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ರಾಂಪುರ ಕ್ಯಾಂಪ್‌ನಲ್ಲಿರುವ ಚೈತ್ರ, ಕುಮ್ಕಿ ಆನೆಯಾಗಿ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡು ಎಲ್ಲರ ಗಮನ ಸೆಳೆದಿತ್ತು. ಕ್ಯಾಂಪ್‌ನಲ್ಲಿನ ಗಂಗೆ ಆನೆಗೆ ಜನಿಸಿದ ಚೈತ್ರ ಇದುವರೆಗೂ 10 ಬಾರಿ ಜಂಬೂಸವಾರಿಯಲ್ಲಿ ಪಾಲ್ಗೊಂಡಿರುವ ಅನುಭವ ಹೊಂದಿದೆ. ಅಲ್ಲದೆ, ಕ್ಯಾಂಪ್‌ನಲ್ಲಿ ಇದುವರೆಗೂ 13 ಮರಿಗಳಿಗೆ ಜನ್ಮ ನೀಡಿ 'ಸೂಪರ್ ಅಮ್ಮ' ಎಂದು ಕರೆಸಿಕೊಳ್ಳುತ್ತಿತ್ತು. ಇದೀಗ 14ನೇ ಮರಿಗೆ ಜನ್ಮ ನೀಡುವ ತವಕದಲ್ಲಿರುವ ಚೈತ್ರಳಿಗೆ ದಸರಾ ಗಜಪಡೆಯಿಂದ ವಿನಾಯಿತಿ ನೀಡಲಾಗಿದೆ. ಕಳೆದ ಬಾರಿ ರಾಂಪುರ ಕ್ಯಾಂಪ್‌ನ ಲಕ್ಷ್ಮಿ ಜಂಬೂಸವಾರಿಗೆ 15 ದಿನ ಮುನ್ನವೇ ಅರಮನೆ ಆವರಣದಲ್ಲೇ ಗಂಡು(ದತ್ತಾತ್ರೇಯ) ಮರಿಗೆ ಜನ್ಮ ನೀಡಿತ್ತು. ಇದಕ್ಕೆ ಗರ್ಭಿಣಿ ಆನೆ ಕರೆತರಲಾಗಿದೆ ಎಂಬ ಆಕ್ಷೇಪವೂ ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲಿ ಪ್ರೆಗ್ನೆನ್ಸಿ ಟೆಸ್ಟ್ ಮಾಡಿಸಿದ್ದರಿಂದ ಚೈತ್ರ ಗರ್ಭವತಿಯಾಗಿರುವುದು ದೃಢಪಟ್ಟಿದ್ದರಿಂದ ಗಜಪಡೆಯಲ್ಲಿ ಆಯ್ಕೆ ಮಾಡಲಾಗಿಲ್ಲ.



ವಿಕ್ರಮ



ಚೈತ್ರ

ಮದವೇರಿದ ವಿಕ್ರಮ: ದಸರಾ ಮಹೋತ್ಸವದಲ್ಲಿ 19 ಬಾರಿ ಪಾಲ್ಗೊಂಡಿರುವ ವಿಕ್ರಮ(59), ಈ ಬಾರಿಯೂ ಜಂಬೂಸವಾರಿಯಿಂದ ವಂಚಿತವಾಗಿದೆ. 2021 ಹಾಗೂ 2022ರಲ್ಲಿ ಮೈಸೂರಿಗೆ ಕರೆತರಲಾಗಿದ್ದ ವಿಕ್ರಮನಿಗೆ ಮದ ಕಾಣಿಸಿಕೊಂಡು, ಅರಮನೆ ಆವರಣದಲ್ಲೇ ಕಟ್ಟಿ ಹಾಕಲಾಗಿತ್ತು. ಇದೀಗ ಹಾರಂಗಿ ಕ್ಯಾಂಪ್‌ನಲ್ಲಿರುವ ವಿಕ್ರಮನಿಗೆ ಮದದ ಅಂಶ ಕಂಡು ಬಂದ ಹಿನ್ನೆಲೆಯಲ್ಲಿ ಗಜಪಡೆಗೆ ಆಯ್ಕೆ ಮಾಡಿಲ್ಲ. ಮುಂದಿನ ವರ್ಷ ದಸರೆ ವೇಳೆ ಸಹಜ ಸ್ಥಿತಿಯಲ್ಲಿದ್ದರೆ ಮೆರವಣಿಗೆಯ ಮುಂಚೂಣಿಯಲ್ಲಿ ನಿಶಾನೆ ಗೌರವ ನೀಡಲಾಗುತ್ತದೆ.

ಕಾವೇರಿ ಡೌಟು: ದುಬಾರೆ ಕ್ಯಾಂಪ್‌ನಲ್ಲಿರುವ ಕಾವೇರಿ ಈ ಬಾರಿ ದಸರಾಗೆ ಬರುವುದು ಅನುಮಾನ. 45 ವರ್ಷದ ಕಾವೇರಿ 2009ರ ಫೆಬ್ರವರಿಯಲ್ಲಿ ಸೋಮವಾರಪೇಟೆಯ ಆಡಿನಾಡೂರು ಅರಣ್ಯ ಪ್ರದೇಶದಲ್ಲಿ ಸೆರೆ ಹಿಡಿಯಲಾಗಿತ್ತು. ಕಳೆದ 10 ವರ್ಷದಿಂದ ದಸರಾ ಮಹೋತ್ಸವದಲ್ಲಿ ಭಾಗವಹಿಸಿದ್ದ ಅನುಭವ ಹೊಂದಿತ್ತು. ಅಂಬಾರಿ ಆನೆಗೆ ಕುಮ್ಕಿ ಆನೆಯಾಗಿ ಸಾಗಿತ್ತು. ಆದರೆ ಕಾಲು ಹಾಗೂ ಹೊಟ್ಟೆನೋವಿನ ಸಮಸ್ಯೆಯಿಂದ ಕಾವೇರಿ ಬಳಲುತ್ತಿರುವುದರಿಂದ ಈ ಬಾರಿ ದಸರೆಗೆ ಬರುವುದು ಡೌಟು ಎನಿಸಿದೆ.

ಹಿರಿಯರಿಗೆ ಜವಾಬ್ದಾರಿ: ಅಂಬಾರಿ ಹೊತ್ತ ಅಭಿಮನ್ಯು ಪಕ್ಕ ಜಂಬೂಸವಾರಿಯಲ್ಲಿ ಹೆಜ್ಜೆ ಹಾಕಬೇಕಾಗಿದ್ದ ಚೈತ್ರ ಹಾಗೂ ಕಾವೇರಿ ಈ ಬಾರಿ ದಸರೆಯಲ್ಲಿ ಭಾಗವಹಿಸುವುದು ಅನುಮಾನವಾಗಿರುವುದರಿಂದ ಅವುಗಳ ಜವಾಬ್ದಾರಿಯನ್ನು ಹಿರಿಯ ಹೆಣ್ಣಾನೆಗಳಿಗೆ ವಹಿಸಲು ನಿರ್ಧರಿಸಲಾಗಿದೆ. ಈ ಹಿಂದೆ ಹಲವು ಬಾರಿ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿರುವ ಅನುಭವವಿರುವ ದುಬಾರೆ ಶಿಬಿರದ 64 ವರ್ಷದ ವಿಜಯ ಹಾಗೂ ಭೀಮನಕಟ್ಟೆ ಶಿಬಿರದ 67 ವರ್ಷದ ವರಲಕ್ಷ್ಮಿ ಈ ಬಾರಿ ಕುಮ್ಕಿ ಆನೆಗಳಾಗಿ ಸಾಗಲಿವೆ.

ಇನ್ನೆರಡು ಆನೆ: ವಿಜಯ ಹಾಗೂ ವರಲಕ್ಷ್ಮಿಯೊಂದಿಗೆ ಇನ್ನೆರಡು ಹೆಣ್ಣಾನೆ ಕರೆತರಲು ಉದ್ದೇಶಿಸಲಾಗಿದ್ದು, ಬಂಡೀಪುರದ ರಾಂಪುರ ಕ್ಯಾಂಪ್‌ನಲ್ಲಿರುವ ಹಿರಣ್ಯಾ(35) ಹಾಗೂ ಹರವೆ ಕ್ಯಾಂಪ್‌ನಲ್ಲಿನ ಲಕ್ಷ್ಮೀ(52) ಕರೆತರಲು ನಿರ್ಧರಿಸಲಾಗಿದೆ.

ಸೆ.1ರಂದು ಗಜಪಡೆಯ ಮೊದಲ ತಂಡದಲ್ಲಿ ಅಂಬಾರಿ ಆನೆ ಅಭಿಮನ್ಯು ನೇತೃತ್ವದಲ್ಲಿ ಎರಡು ಹೆಣ್ಣಾನೆ ಸೇರಿದಂತೆ 9 ಆನೆಗಳು ಮೈಸೂರಿಗೆ ಆಗಮಿಸಲಿವೆ. ಆ.28 ಅಥವಾ ಸೆ.1ರಂದು ಎರಡನೇ ತಂಡದ 5 ಆನೆಗಳ ಪಟ್ಟಿಯನ್ನು ಬಿಡುಗಡೆ ಮಾಡಲು ಅರಣ್ಯ ಇಲಾಖೆ ನಿರ್ಧರಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಹೃದಯಾಘಾತದ ಅನಾಹುತ ತಡೆಗೆ ಪುನೀತ್ ಹೆಸರಲ್ಲಿ ಯೋಜನೆ ಜಾರಿ

ಸಾರ್ವಜನಿಕ ಸ್ಥಳದಲ್ಲಿ ತುರ್ತು ಚಿಕಿತ್ಸೆ

ಸಚಿವ ದಿನೇಶ್ ಗುಂಡೂರಾವ್ ಮಾಹಿತಿ



ಬೆಂಗಳೂರು: ರಾಜ್ಯದಲ್ಲಿ ಹಠಾತ್ ಹೃದಯಾಘಾತ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಅನಾಹುತ ತಡೆಗೆ ಸೂಕ್ತ ಚಿಕಿತ್ಸೆ ಒದಗಿಸಲು ಕರ್ನಾಟಕ ರತ್ನ ಪುನೀತ್‌ರಾಜ್ ಕುಮಾರ್ ಹೆಸರಿನಲ್ಲಿ ಯೋಜನೆಯೊಂದನ್ನು ಜಾರಿ ಮಾಡಲು ಸರ್ಕಾರ ಮುಂದಾಗಿದೆ.

ಬೆಂಗಳೂರಿನ ಗಾಂಧಿನಗರ ಕ್ಷೇತ್ರ ವ್ಯಾಪ್ತಿಯ ಮಾಗಡಿ ರಸ್ತೆಯಲ್ಲಿಂದು ಬೃಹತ್ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು, ಇತ್ತೀಚಿನ ದಿನಗಳಲ್ಲಿ ಚಿಕ್ಕವಯಸ್ಸಿನವರೇ ಹೃದಯಾಘಾತಕ್ಕೆ ಬಲಿಯಾಗುತ್ತಿದ್ದು, ಇಂತಹ ಪ್ರಕರಣಗಳನ್ನು ಸೂಕ್ತವಾಗಿ ನಿರ್ವಹಿಸಿ ಚಿಕಿತ್ಸೆ ನೀಡಲು ಪುನೀತ್ ರಾಜ್ ಕುಮಾರ್ ಹೆಸರಿನಲ್ಲಿ ಯೋಜನೆಯನ್ನು ಜಾರಿ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಜೆಟ್‌ನಲ್ಲಿ ಈ ಯೋಜನೆಯನ್ನು ಘೋಷಣೆ ಮಾಡಿದ್ದು, ಅದರಂತೆ ಪುನೀತ್ ರಾಜ್‌ಕುಮಾರ್ ಹೆಸರಿನಲ್ಲಿ ಹೃದಯಾಘಾತಕ್ಕೆ ತಡೆ ಹಾಕುವ ಯೋಜನೆಯನ್ನು ಜಾರಿ ಮಾಡಲಾಗುತ್ತಿದೆ. ಹಠಾತ್ ಹೃದಯಾಘಾತಗಳನ್ನು ತಡೆಯಲು ಆಟೋಮೆಟೇಡ್ ಎಕ್ಸ್‌ಟ್ರನಲ್ ಡಿಫಿಬ್ರಿಲೇಟರ್‌ಗಳನ್ನು ಆಸ್ಪತ್ರೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಕೆ ಮಾಡಲಾಗುವುದು ಎಂದರು.

ಮೊದಲ ಹಂತದಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆಯನ್ನು ಈ ಯೋಜನೆಗೆ ಆಯ್ಕೆ ಮಾಡಿದ್ದೇವೆ. ಜಯದೇವ ಆಸ್ಪತ್ರೆಯಡಿ ಕೆಲ ಜಿಲ್ಲೆ ಹಾಗೂ ತಾಲೂಕುಗಳ ಆಸ್ಪತ್ರೆಗಳನ್ನು ತರಲಾಗುವುದು. ಈ ವ್ಯಾಪ್ತಿಯ ಆಸ್ಪತ್ರೆಗಳಲ್ಲಿ ಏನಾದರೂ ಹೃದಯಾಘಾತ ಅಥವಾ ಹೃದಯ ಸಂಬಂಧಿ ತುರ್ತು ಸಮಸ್ಯೆಗಳು ರೋಗಿಗಳಿಗೆ ಕಂಡು ಬಂದರೆ ತಕ್ಷಣ ವೈದ್ಯರು ವಿಡಿಯೋ ಕಾನ್ಫರೆನ್ಸ್ ಮೂಲಕ ರೋಗಿಯನ್ನು ಉಳಿಸಲು ನೀಡಬೇಕಾದ ಪ್ರಾಥಮಿಕ ಚಿಕಿತ್ಸೆ ಬಗ್ಗೆ ಸ್ಥಳೀಯ ವೈದ್ಯರಿಗೆ ಸಲಹೆ ನೀಡುತ್ತಾರೆ. ಇದರ ಜತೆಗೆ ಆಟೋಮೆಟೇಡ್ ಎಕ್ಸ್‌ಟ್ರನಲ್ ಡಿಫಿಬ್ರಿಲೇಟರ್‌ಗಳನ್ನು ಜಿಲ್ಲಾ ಹಾಗೂ ತಾಲೂಕು ಆಸ್ಪತ್ರೆ, ಸಾರ್ವಜನಿಕ ಸ್ಥಳಗಳಾದ ಬಸ್, ರೈಲು ಹಾಗೂ ವಿಮಾನ ನಿಲ್ದಾಣಗಳಲ್ಲಿ ಅಳವಡಿಸಲಾಗುವುದು ಎಂದರು.

ಈ ಯಂತ್ರ ಮಾರಣಾಂತಿಕ ಹೃದಯಾಘಾತದ ತೀವ್ರತೆ ಅಳೆಯುತ್ತದೆ. ಹಾಗೆಯೇ ಸ್ವಯಂ ಚಾಲಿತವಾಗಿ ತುರ್ತು ಚಿಕಿತ್ಸೆ ನೀಡುತ್ತದೆ. ಕೆಲವು ಸಂದರ್ಭದಲ್ಲಿ ಈ ಎ ಇಡಿ ಯಂತ್ರ ಎಲೆಕ್ಟ್ರಿಕ್ ಶಾಕ್ ಡಿಫಿಬ್ರಿಲೇಷನ್ ನೀಡಲು ಸಹಾಯ ಮಾಡುತ್ತದೆ. ಪ್ರಾಥಮಿಕ ಚಿಕಿತ್ಸೆ ನಂತರ ರೋಗಿಯನ್ನು ಆಸ್ಪತ್ರೆಗೆ ಸ್ಥಳಾಂತರಿಸಿ ಚಿಕಿತ್ಸೆ ಕೊಡಿಸಲು ಅನುಕೂಲವಾಗುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಈ ಯಂತ್ರ ಅಳವಡಿಕೆಯ ಮೂಲಕ ಹಠಾತ್ ಹೃದಯಾಘಾತ ರೋಗಿಗಳಿಗೆ ಸ್ಥಳದಲ್ಲೇ ತುರ್ತು ಚಿಕಿತ್ಸೆ ನೀಡಲು ಅನುಕೂಲವಾಗುತ್ತದೆ. ಹೃದಯಾಘಾತ ರೋಗಿಗಳಿಗೆ ಗೋಲ್ಡನ್ ಟೈಮ್‌ನಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲು ಇದರಿಂದ ಸಾಧ್ಯವಾಗುತ್ತದೆ. ಈ ಯಂತ್ರ ಅಳವಡಿಕೆಯ ಬಗ್ಗೆ ಇನ್ನೆರಡು ವಾರಗಳಲ್ಲಿ ಟೆಂಡರ್ ಕರೆಯಲಾಗುವುದು.

ಶೀಘ್ರ ಚುನಾವಣೆ; ಶೀಘ್ರ ನಿಗಮ ಮಂಡಳಿ ನೇಮಕ

ಬೆಂಗಳೂರು: ಹಿಂದಿನ ಸರ್ಕಾರಕ್ಕೆ ಅಧಿಕಾರ ವಿಕೇಂದ್ರಿಕರಣದಲ್ಲಿ ನಂಬಿಕೆ ಇಲ್ಲದ ಕಾರಣಕ್ಕೆ ಚುನಾವಣೆಗಳನ್ನೇ ನಡೆಸಿರಲಿಲ್ಲ. ನಾವೀಗ ಎಲ್ಲ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಆದಷ್ಟು ಬೇಗ ನಡೆಸುತ್ತೇವೆ. ಬಿಬಿಎಂಪಿ ಚುನಾವಣೆ ನಮ್ಮ ಮೊದಲ ಆದ್ಯತೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಪಕ್ಷದ ಕಚೇರಿಯಲ್ಲಿ ಮಾತನಾಡಿದ ಅವರು ರಾಹುಲ್ ಗಾಂಧಿ ಅವರು ಪಕ್ಷಕ್ಕೆ ಬಲ ನೀಡುವಂತಹ ನಾಯಕರಿಗೆ ನಿಗಮ ಮಂಡಳಿ ಸೇರಿದಂತೆ ಇತರೇ ಅಧಿಕಾರಗಳನ್ನು ಕೊಡಿ ಎಂದು ಸಲಹೆ ನೀಡಿದ್ದಾರೆ. ಅದರಂತೆ ಶೀಘ್ರದಲ್ಲೇ ಎಲ್ಲರ ಜತೆ ಚರ್ಚೆ ಮಾಡಿ, ನಿಯಮಾವಳಿ ರೂಪಿಸಿ ಪಕ್ಷದ ಎಲ್ಲಾ ಘಟಕಗಳ ಸದಸ್ಯರಿಗೆ ಸಮಾನವಾದ ಅವಕಾಶ ನೀಡಲಾಗುವುದು ಎಂದರು.

ರಾಜ್ಯಕ್ಕೆ ಡಿ.ದೇವರಾಜ ಅರಸು ಕೊಡುಗೆ ಅಪಾರ

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ



ಮಂಡ್ಯ, ಆ.20– ರಾಜ್ಯದ ಮುಖ್ಯಮಂತ್ರಿಯಾಗಿ ಅನೇಕ ಜನಪರ ಯೋಜನೆಗಳನ್ನು ಜಾರಿಗೊಳಿಸಿದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ರಾಜ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಭಾನುವಾರ ಜಿಲ್ಲಾಡಳಿತ, ಜಿಪಂ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ ಡಿ.ದೇವರಾಜ ಅರಸು ಅವರ 108ನೇ ಜನ್ಮ ದಿನಾಚರಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡಿ, ಕನ್ನಡ ಭಾಷೆಯಲ್ಲಿ ಆಡಳಿತ ನಡೆಸಲು ನಿರ್ಧರಿಸಿದ ಅರಸು ಅವರು ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕವಾಗಿ ರಾಜ್ಯಕ್ಕೆ ತಮ್ಮದೇ ಆದ ವಿಶೇಷ ಕೊಡುಗೆ ನೀಡಿದ್ದಾರೆ ಎಂದರು.

ಜೀತ ಪದ್ಧತಿ ಹೋಗಲಾಡಿಸಲು ಕಠಿಣ ಕ್ರಮ ತೆಗೆದುಕೊಂಡರು. ನಿರುದ್ಯೋಗ ಪದವೀಧರರ ಭತ್ಯೆ, ಹಿಂದುಳಿದ ಮಕ್ಕಳಿಗೆ ಹಾಸ್ಟೆಲ್ ವ್ಯವಸ್ಥೆ, ಕೆಲಸಕ್ಕೆ ಕನಿಷ್ಠ ಕೂಲಿ ನೀಡಲು ನಿರ್ಧಾರ ಮಾಡಿ ಅನುಷ್ಠಾನಗೊಳಿಸಿದರು. ಡಿ.ದೇವರಾಜ ಅರಸು ಅಂದರೆ ರಾಜ್ಯದ ಎಲ್ಲಾ ಜನರಿಗೂ ಗೌರವ ಇದೆ. ಮುಖ್ಯಮಂತ್ರಿಗಳಾಗಿ ಕಾರ್ಯ ನಿರ್ವಹಿಸುತ್ತಿರುವ ಸಿದ್ದರಾಮಯ್ಯ ಅವರ ಒಳ್ಳೆಯ ಕೆಲಸಗಳು ಕೂಡ ದೇವರಾಜ ಅರಸು ಅವರ ಸೇವೆಯನ್ನೇ ಹೋಲುತ್ತದೆ ಎಂದು ಹೇಳಿದರು.

ಐದು ಗ್ಯಾರಂಟಿಯನ್ನು ಕೊಟ್ಟ ನಂತರ ರಾಜ್ಯ ಸರ್ಕಾರಕ್ಕೆ ಅಭಿನಂದನೆ ಮಳೆ ಸುರಿದಿದೆ. ಇದನ್ನು ಅನೇಕ ರಾಜ್ಯದ ಸಿಎಂಗಳು ಸಹ ಮೆಚ್ಚಿದ್ದಾರೆ. ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಯೋಜನೆಗಳು ದೇವರಾಜ ಅರಸು ಅವರನ್ನು ನೆನಪಿಸುತ್ತೇವೆ ಎಂದರು.

ಶಾಸಕ ಗಣಿಗ ರವಿಕುಮಾರ್ ಮಾತನಾಡಿ, 12ನೇ ಶತಮಾನದಲ್ಲಿ ತುಳಿತಕ್ಕೊಳಗಾದ ಹಾಗೂ ದಮನಿತರ ಧ್ವನಿಯಾಗಿದ್ದವರು ಬಸವಣ್ಣನವರು. ನಂತರ 80ರ ದಶಕದಲ್ಲಿ ಡಿ.ದೇವರಾಜ ಅರಸು ರಾಜಕೀಯವಾಗಿ ಅಧಿಕಾರ ಹಿಡಿದು ಸಮಾಜದ ಧ್ವನಿಯಾಗಿದ್ದರು ಎಂದು ಅವರ ಸೇವಾ ಕಾರ್ಯವನ್ನು ಶ್ಲಾಘಿಸಿದರು.

ಡಿ.ದೇವರಾಜ ಅರಸು ಅವರ ಹಾದಿಯಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ನಡೆಯುತ್ತಿದ್ದಾರೆ. ಅವರಿಗೆ ಸಮಾಜದ ಎಲ್ಲಾ ನಾಗರಿಕರ ಆಶೀರ್ವಾದವಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಜಿಪಂ ಸಿಇಒ ಶೇಖ್ ತನ್ವೀರ್ ಆಸಿಫ್, ಉಪವಿಭಾಗಾಧಿಕಾರಿ ಶಿವಮೂರ್ತಿ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಶ್ರೀನಿವಾಸ್ ಸೇರಿದಂತೆ ಮುಖಂಡರು ಹಾಗೂ ಗಣ್ಯರು ಇದ್ದರು.

ಹಲ್ಲೆಗೆರೆ ಮೂರ್ತಿ ಭೂತಾಯಿ ಟ್ರಸ್ಟ್‌ಗೆ 10 ಲಕ್ಷ ಅನುದಾನ

ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ



ಮಂಡ್ಯ, ಆ.20– ಅಮೆರಿಕ ಅಧ್ಯಕ್ಷರ ವೈದ್ಯಕೀಯ ಸಲಹೆಗಾರ ಡಾ.ವಿವೇಕ್ ಮೂರ್ತಿ ಅವರ ತಂದೆ, ಅನಿವಾಸಿ ಭಾರತೀಯ ಡಾ.ಲಕ್ಷ್ಮಿ ನರಸಿಂಹ ಮೂರ್ತಿ ಹಲ್ಲೆಗೆರೆ ಅವರ ಭೂತಾಯಿ ಟ್ರಸ್ಟ್‌ಗೆ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ 10 ಲಕ್ಷ ರೂ. ಅನುದಾನ ನೀಡುತ್ತೇನೆ ಎಂದು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ತಿಳಿಸಿದರು.

ನಗರದ ಕರ್ನಾಟಕ ಸಂಘ, ಶ್ರೀವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್ ಮತ್ತು ನಾಗರಿಕ ವೇದಿಕೆ ವತಿಯಿಂದ ಮಂಡ್ಯದ ಪಿಇಎಸ್ ಕಾಲೇಜಿನ ಸ್ವಾಮಿ ವಿವೇಕಾನಂದ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದ ನಾಗರಿಕ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭೂತಾಯಿ ಟ್ರಸ್ಟ್ ಮೂಲಕ ಡಾ.ಲಕ್ಷ್ಮಿ ನರಸಿಂಹಮೂರ್ತಿ ಹಲ್ಲೆಗೆರೆ ಅವರು ತಮ್ಮ ಪಿತ್ರಾರ್ಜಿತ ಆಸ್ತಿ 12 ಎಕರೆಯಲ್ಲಿ 80 ಕೋಟಿ ರೂ. ವೆಚ್ಚದಲ್ಲಿ ಮಂಡ್ಯದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಯೋಗ ಮತ್ತು ಧ್ಯಾನ ಕೇಂದ್ರ ನಿರ್ಮಾಣಕ್ಕೆ ಮುಂದಾಗಿರುವುದು ಶ್ಲಾಘನೀಯ. ಈ ಯೋಜನೆಗೆ ಡಿಸೆಂಬರ್‌ನಲ್ಲಿ ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ದಂಪತಿ ಹಾಗೂ ಟಿಬೆಟಿಯನ್ ಧರ್ಮಗುರು ದಲೈಲಾಮಾ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಇದಕ್ಕೆ ಮಂಡ್ಯ ಜಿಲ್ಲಾಡಳಿತ ಹಾಗೂ ರಾಜ್ಯ ಸರ್ಕಾರದಿಂದ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು ಎಂದ ಅವರು, ಇಂತಹ ಒಂದು ಅಂತಾರಾಷ್ಟ್ರೀಯ ಮಟ್ಟದ ಕೇಂದ್ರ ನಮ್ಮ ಜಿಲ್ಲೆಯಲ್ಲಿ ಆಗುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ ಎಂದರು.

ವಿಶ್ವದ ಅಗ್ರಗಣ್ಯ ರಾಷ್ಟ್ರ ಅಮೆರಿಕ ಅಧ್ಯಕ್ಷರ ವೈದ್ಯಕೀಯ ಸಲಹೆಗಾರರಾಗಿ ಇವರ ಪುತ್ರ ಡಾ.ವಿವೇಕ್ ಮೂರ್ತಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಂತಹ ಮಟ್ಟಕ್ಕೆ ಇವರ ಪುತ್ರ ಹೋಗಬೇಕೆಂದರೆ ಅವರಿಗೆ ಉತ್ತಮ ಜ್ಞಾನ, ಶಿಕ್ಷಣ, ಚಿಂತನೆ, ಸಂಸ್ಕಾರವನ್ನು ಕೊಡಬೇಕಾಗುತ್ತದೆ. ಇಂತಹ ಒಂದು ಕೆಲಸವನ್ನು ಡಾ.ಎಲ್.ಎನ್. ಮೂರ್ತಿಯವರು ಮಾಡಿದ್ದಾರೆ. ಹೀಗಾಗಿ ತಮ್ಮ ಕಣ್ಣ ಮುಂದೆಯೇ ಪುತ್ರ ಅಮೆರಿಕದ ವೈಟ್‌ಹೌಸ್‌ನಲ್ಲಿ ಕಾರ್ಯನಿರ್ವಹಿಸುವುದನ್ನು ನೋಡುತ್ತಿದ್ದಾರೆ. ಇದು ತಂದೆ–ತಾಯಿಯರ ಪುಣ್ಯದ ಫಲವೇ ಸರಿ ಎಂದರು.

ಇದೇ ವೇಳೆ ಡಾ.ಲಕ್ಷ್ಮಿ ನರಸಿಂಹ ಮೂರ್ತಿ ಹಲ್ಲೆಗೆರೆ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಶಾಸಕ ಗಣಿಗ ರವಿಕುಮಾರ್, ಮಾಜಿ ಶಾಸಕರಾದ ಎಂ.ಶ್ರೀನಿವಾಸ್, ಕೆ.ಟಿ.ಶ್ರೀಕಂಠೇಗೌಡ, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ, ಅಭಿನವ ಭಾರತಿ ಸಮೂಹ ಸಂಸ್ಥೆ ಮುಖ್ಯಸ್ಥ ಶಿವಮೂರ್ತಿ ಸೇರಿದಂತೆ ಇತರರಿದ್ದರು.

ಎಲ್ಲಾ ಭಾಗ್ಯಕ್ಕಿಂತ ಆರೋಗ್ಯ ಭಾಗ್ಯ ಶ್ರೇಷ್ಠ: ಹೆಚ್.ಟಿ.ಮಂಜು



ಕೆಆರ್.ಪೇಟೆ, ಆ.20– ಎಲ್ಲಾ ಭಾಗ್ಯಕ್ಕಿಂತ ಆರೋಗ್ಯ ಭಾಗ್ಯ ಶ್ರೇಷ್ಠ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ತಾಲೂಕಿನ ಕಿಕ್ಕೇರಿ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಕರ್ನಾಟಕ ಮಾನವ ಹಕ್ಕುಗಳ ಜನಸೇವಾ ಸಮಿತಿಯು ವೀರಯೋಧ ಜನಾರ್ಧನ್‌ಗೌಡ ಸ್ಮರಣಾರ್ಥ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಸ್ತುತ ಆರೋಗ್ಯ ಕಾಪಾಡಿಕೊಳ್ಳುವುದು ಮುಖ್ಯವಾಗಿದೆ. ಹೀಗಾಗಿ ಪ್ರತಿಯೊಬ್ಬರೂ ಆಗಾಗ್ಗೆ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದು ಸಲಹೆ ನೀಡಿದರು.

ಯೋಧ ಜನಾರ್ಧನ್‌ಗೌಡರ ಭಾವಚಿತ್ರ ಅನಾವರಣಗೊಳಿಸಿ ಪುಷ್ಪನಮನ ಸಲ್ಲಿಸಿ ಮಾತನಾಡಿದ ಆರ್‌ಟಿಓ ಅಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ್, ವೀರಯೋಧ ಜನಾರ್ಧನ್ ಗೌಡ ಅವರನ್ನು ಕಳೆದುಕೊಂಡಿರುವುದು ದುಃಖದ ವಿಚಾರ. ಅವರು ಮತ್ತೊಮ್ಮೆ ನಮ್ಮ ತಾಲೂಕಿನಲ್ಲೇ ಜನಿಸಲಿ ಎಂದು ಪ್ರಾರ್ಥಿಸಿದ ಅವರು, ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕು ಎಂದು ಮನವಿ ಮಾಡಿದರು.

ಆನೆಗೊಳ ಸುಬ್ರಹ್ಮಣ್ಯ ಸೇವಾ ಟ್ರಸ್ಟ್ ಅಧ್ಯಕ್ಷ ಬಿ.ಎಂ.ಕಿರಣ್, ಕರ್ನಾಟಕ ಸಹಕಾರ ಮಾರಾಟ ಮಹಾ ಮಂಡಳ ನಿರ್ದೇಶಕ ಸಿ.ಎನ್.ಪುಟ್ಟಸ್ವಾಮಿಗೌಡ, ನಿವೃತ್ತ ಯೋಧರಾದ ಆರ್.ಸುಕುಮಾರ್, ರಘುಚಾರಿ, ಜಯರಾಮ್ ಅವರನ್ನು ಸನ್ಮಾನಿಸಿ ಮಾತನಾಡಿದರು.

ಶಾಲಾ ಮಕ್ಕಳಿಂದ ದೇಶ ಭಕ್ತಿಗೀತೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ 500ಕ್ಕೂ ಹೆಚ್ಚು ಮಂದಿ ಆರೋಗ್ಯ ತಪಾಸಣೆಗೆ ಒಳಗಾದರು. ಸುಮಾರು 50ಕ್ಕೂ ಹೆಚ್ಚು ಮಂದಿ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು.

ಈ ವೇಳೆ ಕೆಪಿಎಸ್ ಶಾಲೆ ಅಧ್ಯಕ್ಷ ಕೃಷ್ಣೇಗೌಡ, ಮುಖ್ಯ ಶಿಕ್ಷಕ ಎಂ.ಎಸ್. ಬಸವರಾಜು, ಸುಬ್ರಹ್ಮಣ್ಯ, ಕಿಕ್ಕೇರಿ ಹೋಬಳಿ ಜೆಡಿಎಸ್ ಅಧ್ಯಕ್ಷ ಕಾಯಿ ಮಂಜೇಗೌಡ, ಗ್ರಾಪಂ ಸದಸ್ಯ ಎಸ್.ಕೆ. ಬಾಲಕೃಷ್ಣ, ಕೋಳಿ ವೆಂಕಟೇಶ್, ವೀರಯೋಧ ಜನಾರ್ಧನ್ ಗೌಡ (ಜಾನು) ಪತ್ನಿ ರಂಜಿತಾ, ತಂದೆ ಪ್ರಕಾಶ್, ತಾಯಿ ಭಾರತಿ, ಕರ್ನಾಟಕ ಮಾನವ ಹಕ್ಕುಗಳ ಜನಸೇವಾ ಸಮಿತಿ ಜಿಲ್ಲಾಧ್ಯಕ್ಷ ಪೃಥ್ವಿರಾಜ್, ಪದಾಧಿಕಾರಿಗಳಾದ ರಾಜೇಶ್, ಹರೀಶ್, ಬಸವರಾಜು, ಮಂಜು, ರಾಕೇಶ್, ಅಕ್ಷಯ್, ಪಾಪಣ್ಣಿ, ಚಂದ್ರು ಸೇರಿದಂತೆ ಇನ್ನಿತರರಿದ್ದರು.

ಜಾನಪದ ಸಾಹಿತ್ಯ ಉಳಿವಿಗೆ ಶ್ರಮಿಸಿದ ಡಾ.ಜೀಶಂಪ

ನಿವೃತ್ತ ಪೊಲೀಸ್ ಅಧಿಕಾರಿ ಜಯಮಾರುತಿ ಬಣ್ಣನೆ



ಮಂಡ್ಯ, ಆ.20– ರಾಜ್ಯದಲ್ಲಿ ಜಾನಪದ ಸಾಹಿತ್ಯ ಉಳಿವಿಗೆ ಶ್ರಮಿಸಿದವರು ಜಾನಪದ ತಜ್ಞ ಡಾ.ಜೀ.ಶಂ.ಪರಮಶಿವಯ್ಯ. ಪ್ರಾಚೀನ ಕಾಲದ ಜಾನಪದ ಕಲೆ ಆಧುನಿಕ ಯುಗದಲ್ಲಿ ಪ್ರಸ್ತುತವಾಗಿದೆ ಎಂದರೆ ಅದನ್ನು ಉಳಿಸಿದ ಕೀರ್ತಿ ಡಾ.ಜೀಶಂಪ ಅವರಿಗೆ ಸಲ್ಲಬೇಕು ಎಂದು ನಿವೃತ್ತ ಪೊಲೀಸ್ ಅಧಿಕಾರಿ ಜಯಮಾರುತಿ ಬಣ್ಣಿಸಿದರು.

ಭಾನುವಾರ ನಗರದ ಗಾಂಧಿ ಭವನದಲ್ಲಿ ಡಾ.ಜೀಶಂಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಯುವಸೇನೆ ಇವರ ಸಂಯುಕ್ತಾಶ್ರಯದಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ 31ನೇ ರಾಜ್ಯ ಮಟ್ಟದ ಕವಿಕಾವ್ಯ ಮೇಳ ಅಮೃತ ಅಭಿನಂದನೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಜಾನಪದ ಕ್ಷೇತ್ರದಲ್ಲಿ ಡಾ.ಜೀ.ಶಂ. ಪರಮಶಿವಯ್ಯ ಅವರ ಹೆಸರಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಡಾ.ಜೀಶಂಪ ವೇದಿಕೆ ನಿರಂತರ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಶ್ಲಾಘನೀಯ. ಜಾನಪದ ಬೆಳವಣಿಗೆಗೆ ನಿರಂತರ ಸೇವೆ ಮಾಡಿದ ಜೀಶಂಪ ಅವರು ಜಾನಪದ ವಸ್ತು ಸಂಗ್ರಹವನ್ನು ಸ್ಥಾಪಿಸಿ ಜಾನಪದ ಉಳಿಸುವ ಕಾರ್ಯ ಮಾಡಿದ್ದರು ಎಂದು ಸ್ಮರಿಸಿದರು.

ಸಾಹಿತಿಗಳು ಕಷ್ಟದ ಜೀವನ ನಡೆಸಿದವರು. ಅವರ ಸಾಹಿತ್ಯದಿಂದ ಸಮಾಜ ಉದ್ಧಾರವಾಗಿದೆ. ಆದರೆ ಅವರ ಮನೆ ಅಭಿವೃದ್ಧಿ ಆಗಿಲ್ಲ. ನೈಜ ಸಾಹಿತಿಗಳು ದುಸ್ತರ ಜೀವನ ನಡೆಸಿ ಕನ್ನಡ ಸಾಹಿತ್ಯ ಶ್ರೀಮಂತಗೊಳಿಸಿದ್ದಾರೆ ಎಂದು ಬಣ್ಣಿಸಿದರು.

ಪ್ರಸ್ತುತ ರಾಜಧಾನಿ ಬೆಂಗಳೂರಿನಲ್ಲಿ ಕನ್ನಡವನ್ನು ಹುಡುಕಬೇಕಿದೆ. ಹಿಂದಿ, ತಮಿಳು, ಇಂಗ್ಲಿಷ್‌ಮಯವಾಗಿರುವ ಬೆಂಗಳೂರಿನಲ್ಲಿ ಶೇ.30ರಷ್ಟು ಮಂದಿ ಮಾತ್ರ ಕನ್ನಡ ಮಾತನಾಡುವವರಿದ್ದಾರೆ. ಪೊಲೀಸ್ ಅಧಿಕಾರಿಯಾಗಿ ರಾಜ್ಯದ ವಿವಿಧ ಕಡೆ ಕೆಲಸ ಮಾಡಿರುವ ನನಗೆ ಅತಿ ಹೆಚ್ಚು ಕನ್ನಡ ಮಾತನಾಡುವ ಜನರಿರುವುದು ಮಂಡ್ಯ ಜಿಲ್ಲೆಯಲ್ಲಿ. ನಮ್ಮ ಜಿಲ್ಲೆಯಲ್ಲಿ ಹೆಚ್ಚು ಕನ್ನಡ ಮಾತನಾಡುವವರಿರುವುದು ನನಗೆ ಹೆಮ್ಮೆಯ ಸಂಗತಿ ಎಂದರು.

ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ಹೆಚ್.ಎಸ್.ಮುದ್ದೇಗೌಡ ಮಾತನಾಡಿ, ಪ್ರತಿಯೊಬ್ಬರೂ ಸಾಹಿತ್ಯ ಓದಬೇಕು. ಕನ್ನಡ ಭಾಷೆ ಬಗ್ಗೆ ಹೆಚ್ಚಿನ ಗೌರವವಿಟ್ಟು, ನಮ್ಮ ಭಾಷೆ ಶ್ರೀಮಂತಗೊಳಿಸಬೇಕು. ಪ್ರಸ್ತುತ ಸಾಹಿತ್ಯಕ್ಕೂ ಹಿಂದಿನ ಸಾಹಿತ್ಯಕ್ಕೂ ಬಹಳ ವ್ಯತ್ಯಾಸವಿದೆ. ಹಿಂದೆ ಅನೇಕ ಸಾಹಿತಿಗಳು ಮೌಲ್ಯಯುತ ಸಾಹಿತ್ಯವನ್ನು ರಚಿಸುತ್ತಿದ್ದರು. ಆದರೆ ಇಂದಿನ ಕವಿಗಳ ಸಾಹಿತ್ಯ ರಚನೆ ಮೌಲ್ಯಗಳಿಂದ ಕೂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮಾಜಿ ಸದಸ್ಯ ಈ.ಸಿ.ನಿಂಗರಾಜ್‌ಗೌಡ ಮಾತನಾಡಿದರು. ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಹಲವು ಸಾಧಕರನ್ನು ಅಭಿನಂದಿಸಲಾಯಿತು. ಇದಕ್ಕೂ ಮುನ್ನ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಕಾರ್ಯಕ್ರಮದಲ್ಲಿ ಭಾಗಿಯಾಗಿ ಶುಭ ಕೋರಿದರು.

ವೇದಿಕೆಯಲ್ಲಿ ಸಮ್ಮೇಳನಾಧ್ಯಕ್ಷ ಪುರುಷೋತ್ತಮ್, ಖ್ಯಾತ ವೈದ್ಯರಾದ ಡಾ.ಚಂದ್ರಶೇಖರ್, ಡಾ.ಮಾದೇಶ್, ತಾಪಂ ಮಾಜಿ ಸದಸ್ಯ ಸಂತೋಷ್ ಕುಮಾರ್, ತಾಲೂಕು ಕಸಾಪ ಮಾಜಿ ಅಧ್ಯಕ್ಷ ಚಲುವೇಗೌಡ, ಡಾ.ಜೀಶಂಪ ಸಾಹಿತ್ಯ ವೇದಿಕೆಯ ಎಸ್.ಕೃಷ್ಣ ಸ್ವರ್ಣಸಂದ್ರ, ಮಂಗಲ ಶಿವಣ್ಣ, ಲೋಕೇಶ್ ಚಂದಗಾಲು ಉಪಸ್ಥಿತರಿದ್ದರು.

ಅರಸು ಅವರ 50 ವರ್ಷದ ಬೆಂಜ್ ಕಾರ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರೌಂಡ್ಸ್!



ಬೆಂಗಳೂರು: ರಾಜ್ಯ ಕಂಡ ಅಪರೂಪದ ರಾಜಕಾರಣಿಗಳಲ್ಲಿ ಒಬ್ಬರಾದ ದಿ. ದೇವರಾಜ ಅರಸು ಜನ್ಮ ದಿನದಂದು ಅವರ ಆದರ್ಶಗಳ ಜೊತೆಗೇ ನೆನಪಾಗುವುದು ಅವರು ಬಳಸುತ್ತಿದ್ದ ಬೆಂಜ್ ಕಾರು. ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರಿಂದ ಉಡುಗೊರೆಯಾಗಿ ಪಡೆದಿದ್ದ ಈ ಕಾರಿಗೆ ಇದೀಗ 50 ವರ್ಷಗಳು ತುಂಬಿದ್ದು, ಅರಸು ಅವರ ಕಾರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸೌಧ ರೌಂಡ್ ಹಾಕುವ ಮೂಲಕ ಸಂಭ್ರಮಿಸಿದರು.

ಅರಸು ಜನ್ಮ ದಿನಾಚರಣೆ: ಇಂದು ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ 108ನೇ ಜನ್ಮ ದಿನಾಚರಣೆ ಅಂಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ಪಶ್ಚಿಮ ದ್ವಾರದಲ್ಲಿ ಅರಸು ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಅರಸು ಅವರ ಆದರ್ಶ ಹಾಗೂ ನಾಡಿಗೆ ನೀಡಿದ ಕೊಡುಗೆಗಳನ್ನು ಸಿಎಂ ಸ್ಮರಿಸಿದರು.

ಕಾರ್ಯಕ್ರಮದ ಅಂಗವಾಗಿ ಅರಸು ಬಳಸುತ್ತಿದ್ದ ಎಂಇಒ 777 ನೋಂದಣಿ ಸಂಖ್ಯೆಯ ಮರ್ಸಿಡಿಸ್ ಬೆಂಜ್ ಕಾರನ್ನು ಕೂಡ ವಿಧಾನಸೌಧದ ಬಳಿ ತರಲಾಗಿತ್ತು. ಆ ಕಾರಿನಲ್ಲಿಯೇ ಸಿಎಂ ಸಿದ್ದರಾಮಯ್ಯ ವಿಧಾನಸೌಧ ಸುತ್ತಿದರು. ಈ ಹಿಂದೆಯೂ 2013–2018 ರವರೆಗೂ ಮುಖ್ಯಮಂತ್ರಿ ಆಗಿದ್ದ ಸಿದ್ದರಾಮಯ್ಯ ಆಗಲೂ ಕೂಡ ಅರಸು ಜನ್ಮದಿನದಂದು ಇದೇ ಕಾರಿನಲ್ಲಿ ವಿಧಾನಸೌಧ ಸುತ್ತಿ ಸಂಭ್ರಮಿಸಿದ್ದರು. ಆದರೆ ಈ ಬಾರಿಯ ಅರಸು ಕಾರು ಸವಾರಿ ವಿಶೇಷವಾಗಿತ್ತು, ಈ ಕಾರಿಗೆ 50 ವರ್ಷವಾಗಿದೆ. ಈ ಸಂದರ್ಭದಲ್ಲಿ ಅರಸು ಕಾರಿನಲ್ಲಿ ಪ್ರಯಾಣಿಸಿದ್ದಕ್ಕೆ ಸಿಎಂ ಹರ್ಷ ವ್ಯಕ್ತಪಡಿಸಿದರು.

ಅರಸುಗೆ ಇಂದಿರಾ ಗಾಂಧಿ ಗಿಫ್ಟ್: 1972ರ ಚುನಾವಣೆಯಲ್ಲಿ ನಡೆದಿದ್ದ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ದೇವರಾಜ ಅರಸು ಅವರು ಅಭೂತಪೂರ್ವ ಗೆಲುವು ಸಾಧಿಸಿದ್ದರು. ಇದರಿಂದಾಗಿ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಸಂತಸಗೊಂಡು ವಿದೇಶದಿಂದ ಮರ್ಸಿಡಿಸ್ ಬೆಂಜ್ ಕಾರು ತರಿಸಿ ಸರ್ಕಾರಕ್ಕೆ ಕೊಡುಗೆಯಾಗಿ ನೀಡಿದ್ದರು. ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಪ್ರತಿನಿತ್ಯ ಈ ಕಾರನ್ನೇ ಬಳಸುತ್ತಿದ್ದರು.

ಅರಸು ನಂತರ ಬಂದ ಮುಖ್ಯಮಂತ್ರಿಗಳು ಹೊಸದಾಗಿ ಖರೀದಿಸಿದ ಸರ್ಕಾರಿ ಕಾರನ್ನು ಬಳಸಲು ಶುರು ಮಾಡಿದರು. ಹಾಗಾಗಿ ಮರ್ಸಿಡಿಸ್ ಬೆಂಜ್ ಕಾರನ್ನು ಹರಾಜು ಹಾಕಲಾಯಿತು. ಹರಾಜು ಪ್ರಕ್ರಿಯೆಯಲ್ಲಿ ಅರಸು ಅವರ ಆಪ್ತ ಜಿ.ಎಂ. ಬಾಬು ಈ ಕಾರು ಖರೀದಿಸಿದ್ದು, ಇಲ್ಲಿಯವರೆಗೂ ಬಹಳ ಅಚ್ಚುಕಟ್ಟಾಗಿ ಕಾಪಾಡಿಕೊಂಡು ಬಂದಿದ್ದಾರೆ. ಇಂದಿಗೂ ಕೂಡ ಈ ಕಾರು ಫುಲ್ ಕಂಡೀಷನ್‌ನಲ್ಲಿದೆ. ಪ್ರತಿ ವರ್ಷ ಅರಸು ಜನ್ಮದಿನದಂದು ವಿಧಾನಸೌಧದ ದೇವರಾಜ ಅರಸು ಪ್ರತಿಮೆ ಮುಂದೆ ಕಾರನ್ನು ಪ್ರದರ್ಶಿಸಲಾಗುತ್ತಿದೆ. ಅದರಂತೆ ಈ ವರ್ಷವೂ ಪ್ರದರ್ಶನಕ್ಕೆ ಇಡಲಾಗಿದ್ದು, ಸಿಎಂ ಸಿದ್ದರಾಮಯ್ಯ ಮಾತ್ರ ಎಂದಿನಂತೆ ಕಾರಿನಲ್ಲಿ ಒಂದು ರೌಂಡ್ ಹಾಕಿದರು.

ಸದ್ಭಾವನಾ ದಿನ ಪ್ರತಿಜ್ಞಾವಿಧಿ ಬೋಧನೆ: ಸದ್ಭಾವನಾ ದಿನದ ಅಂಗವಾಗಿ ಇಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿಜ್ಞಾವಿಧಿ ಬೋಧಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಸಚೇತಕ ಅಶೋಕ್ ಪಟ್ಟಣ್ಣವರ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾಶರ್ಮ, ಡಿಪಿಎಆರ್ ಕಾರ್ಯದರ್ಶಿ ಶ್ರೀಕರ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ನೆರೆದಿದ್ದ ಎಲ್ಲರೂ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಸರ್ಜರಿ: ಮೊಯ್ಲಿ, ಬಿಕೆ ಹರಿಪ್ರಸಾದ್‌ಗೆ ಖಾಯಂ ಆಹ್ವಾನಿತ ಸದಸ್ಯ ಸ್ಥಾನ



ವೀರಪ್ಪ ಮೊಯ್ಲಿ



ಬಿ.ಕೆ. ಹರಿಪ್ರಸಾದ್



ಶಶಿ ತರೂರ್



ಆನಂದ್‌ಶರ್ಮಾ

ನವದೆಹಲಿ: ಮುಂಬರುವ ಪಂಚರಾಜ್ಯಗಳ ವಿಧಾನಸಭೆ, ಲೋಕಸಭೆ ಚುನಾವಣೆಗೆ ಭರ್ಜರಿ ತಾಲೀಮು ನಡೆಸುತ್ತಿರುವ ಕಾಂಗ್ರೆಸ್, ಪಕ್ಷದ ಅತ್ಯುನ್ನತ ನೀತಿ ನಿರ್ಧಾರಗಳ ಸಮಿತಿಯಾದ ಕಾರ್ಯಕಾರಿ ಸಮಿತಿಗೆ (ಸಿಡಬ್ಲ್ಯೂಸಿ) ಭರ್ಜರಿ ಸರ್ಜರಿ ಮಾಡಿದೆ. ರಾಜ್ಯದವರಾದ, ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ, ಎಂಎಲ್‌ಸಿ ಬಿ.ಕೆ. ಹರಿಪ್ರಸಾದ್ ಅವರಿಗೆ ಸ್ಥಾನ ನೀಡಲಾಗಿದೆ.

ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನು (ಸಿಡಬ್ಲ್ಯೂಸಿ) ಪುನರ್ ರಚಿಸಿ ಆದೇಶಿದ್ದಾರೆ. 2024 ರ ಲೋಕಸಭೆ ಚುನಾವಣೆಗೆ ಪಕ್ಷ ಸಜ್ಜಾಗುತ್ತಿರುವ ಕಾರಣ ರಣತಂತ್ರದ ಭಾಗವಾಗಿ 39 ಸದಸ್ಯರ ತಂಡವನ್ನು ಪ್ರಕಟಿಸಲಾಗಿದೆ.

ಶಶಿ ತರೂರ್, ಆನಂದ್ ಶರ್ಮಾಗೆ ಸ್ಥಾನ: ಇತ್ತ ರಾಷ್ಟ್ರೀಯವಾಗಿ ಗಮನ ಸೆಳೆದಿರುವ ಪಕ್ಷದ ಸಂಸದ ಶಶಿ ತರೂರ್ ಮತ್ತು ಆನಂದ್ ಶರ್ಮಾ ಅವರನ್ನು ಹೊಸ ಸಿಡಬ್ಲ್ಯೂಸಿಯಲ್ಲಿ ಸೇರಿಸಿಕೊಳ್ಳಲಾಗಿದೆ. ಕರ್ನಾಟಕದವರಾದ ಮಾಜಿ ಸಿಎಂ ವೀರಪ್ಪ ಮೊಯ್ಲಿ, ಬಿಕೆ ಹರಿಪ್ರಸಾದ್ ಮತ್ತು ಮನೀಶ್ ತಿವಾರಿ ಅವರಿಗೆ ಖಾಯಂ ಆಹ್ವಾನಿತ ಸದಸ್ಯ ಸ್ಥಾನ ನೀಡಲಾಗಿದೆ. ಇದರ ಜೊತೆಗೆ ಸಮಿತಿಯಲ್ಲಿ ಮಲ್ಲಿಕಾರ್ಜುನ್ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಪ್ರಿಯಾಂಕಾ ಗಾಂಧಿ, ರಣದೀಪ್ ಸುರ್ಜೇವಾಲ, ಎಐಸಿಸಿ ಕಾರ್ಯದರ್ಶಿ ವೇಣುಗೋಪಾಲ್, ಕೇಂದ್ರದ ಮಾಜಿ ಸಚಿವ ಪಿ.ಚಿದಂಬರಂ, ದಿಗ್ವಿಜಯ್ ಸಿಂಗ್, ಜೈರಾಮ್ ರಮೇಶ್, ಪಂಜಾಬ್‌ನ ಮಾಜಿ ಸಿಎಂ ಚರಣ್‌ಜಿತ್ ಸಿಂಗ್ ಚನ್ನಿ, ರಾಜಸ್ಥಾನದ ಮಾಜಿ ಉಪ ಮುಖ್ಯಮಂತ್ರಿ ಸಚಿನ್ ಪೈಲಟ್ ಸೇರಿದಂತೆ 39 ಸದಸ್ಯರುಳ್ಳ ಸಮಿತಿಯನ್ನು ರಚಿಸಲಾಗಿದೆ.

ಮುಂದಿನ ವರ್ಷ ನಡೆಯಲಿರುವ ಲೋಕಸಭೆ ಚುನಾವಣೆಗೆ ಪಕ್ಷವನ್ನು ಸಿದ್ಧಪಡಿಸಲು ಹೊಸ ಸಿಡಬ್ಲ್ಯೂಸಿ ಸಮಿತಿಯನ್ನು ರಚಿಸಲು ಮಲ್ಲಿಕಾರ್ಜುನ್ ಖರ್ಗೆ ಅವರಿಗೆ ಸಂಪೂರ್ಣ ಅಧಿಕಾರ ನೀಡಲಾಗಿತ್ತು. ಎಐಸಿಸಿ ಅಧ್ಯಕ್ಷರೇ ಅಂತಿಮ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಕಾಂಗ್ರೆಸ್ ಹಿರಿಯ ನಾಯಕ ಜೈರಾಮ್ ರಮೇಶ್ ತಿಳಿಸಿದ್ದಾರೆ.

ಕಾಂಗ್ರೆಸ್‌ನಲ್ಲಿ ಖರ್ಗೆ ಕಾಲ: ಮಲ್ಲಿಕಾರ್ಜುನ್ ಖರ್ಗೆ ಅವರು ಪಕ್ಷದ ಅಧ್ಯಕ್ಷರಾದ ಬಳಿಕ ಈಚೆಗೆ ನಡೆದ ಹಿಮಾಚಲ ಪ್ರದೇಶ ಮತ್ತು ಕರ್ನಾಟಕ ವಿಧಾನಸಭೆ ಚುನಾವಣೆಗಳಲ್ಲಿ ಪಕ್ಷ ಭರ್ಜರಿ ಗೆಲುವು ಸಾಧಿಸಿದೆ. ಇದೇ ಯಶಸ್ಸನ್ನು ಮುಂದಿನ ಪಂಚರಾಜ್ಯ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಮುಂದುವರಿಸಲು ಹೈಕಮಾಂಡ್ ನಿರ್ಧರಿಸಿದೆ. ಖರ್ಗೆ ಅವರಿಗೆ ಪೂರ್ಣ ಅಧಿಕಾರ ನೀಡಲಾಗಿದೆ. ಶೀಘ್ರದಲ್ಲೇ ನಡೆಯುವ ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢ ವಿಧಾನಸಭೆ ಚುನಾವಣೆಗೆ ಪಕ್ಷವು ತಂತಾರಿ ನಡೆಸುತ್ತಿದ್ದು, ಹೊಸ ಸಿಡಬ್ಲ್ಯೂಸಿಯ ಮೇಲೆ ಎಲ್ಲರ ಕಣ್ಣುಗಳು ನೆಟ್ಟಿದ್ದವು.

ಐರ್ಲೆಂಡ್ ವಿರುದ್ಧ ಟಿ20 ಸರಣಿ ಗೆದ್ದ ಟೀಂ ಇಂಡಿಯಾ



ಡಬ್ಲಿನ್, ಆ.20– ಋತುರಾಜ್ ಗಾಯಕ್ವಾಡ್ ಅವರ ಅರ್ಧಶತಕ, ರಿಂಕ್ ಸಿಂಗ್ ಅವರ ಬಿರುಸಿನ ಬ್ಯಾಟಿಂಗ್ ನೆರವಿನಿಂದ ಭಾರತ ಐರ್ಲೆಂಡ್ ವಿರುದ್ಧ 33 ರನ್‌ಗಳ ಅಮೋಘ ಜಯ ಸಾಧಿಸಿದೆ. ಆ ಮೂಲಕ 3 ಪಂದ್ಯಗಳ ಟಿ20 ಸರಣಿಯನ್ನು ಇನ್ನೂ ಒಂದು ಪಂದ್ಯ ಬಾಕಿ ಇರುವಾಗಲೇ 2–0 ಅಂತರದಲ್ಲಿ ತನ್ನದಾಗಿಸಿಕೊಂಡಿದೆ.

ಇಲ್ಲಿನ ದಿ ವಿಲೇಜ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 185 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಯುವ ಓಪನರ್ ಯಶಸ್ವಿ ಜೈಸ್ವಾಲ್ ಆಕ್ರಮಣಕಾರಿ ಆಟವಾಡಲು ಹೋಗಿ 18 ರನ್ ಗಳಿಸಿದ್ದ ವೇಳೆ ದೊಡ್ಡ ಹೊಡೆತಕ್ಕೆ ಕೈಹಾಕಿ ವಿಕೆಟ್ ಒಪ್ಪಿಸಿದರು. ನಂತರ ಬಂದ ತಿಲಕ್ ವರ್ಮಾ 1 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ 3ನೇ ವಿಕೆಟ್‌ಗೆ ಜೊತೆಯಾದ ಋತುರಾಜ್ ಗಾಯಕ್ವಾಡ್ ಹಾಗೂ ಸಂಜು ಸ್ಯಾಮ್ಸನ್ 71 ರನ್‌ಗಳ ಜೊತೆಯಾಟವಾಡಿ ತಂಡದ ಬೃಹತ್ ಮೊತ್ತಕ್ಕೆ ಅಡಿಪಾಯ ಹಾಕಿಕೊಟ್ಟರು. ಆದರೆ ಸಂಜು 26 ಎಸೆತಗಳಲ್ಲಿ 40 ರನ್ ಸಿಡಿಸಿ ಔಟಾದರು, ಮತ್ತೊಂದೆಡೆ ಋತುರಾಜ್ ಗಾಯಕ್ವಾಡ್ ಅರ್ಧಶತಕಸಿಡಿಸಿ ಸಂಭ್ರಮಿಸಿದರು. ಆದರೆ 43 ಎಸೆತಗಳಲ್ಲಿ 6 ಫೋರ್ ಮತ್ತು 1 ಸಿಕ್ಸರ್ ಒಳಗೊಂಡ 58 ರನ್ ಬಾರಿಸಿ ಪೆವಿಲಿಯನ್ ಸೇರಿದರು. ನಂತರ ಬಂದ ರಿಂಕು ಸಿಂಗ್ 38, ಶಿವಂದುಬೆ 22 ರನ್ ಗಳಿಸಿ ತಂಡದ ಮೊತ್ತವನ್ನು 180ರ ಗಡಿ ದಾಟಿಸಿದರು. ಐರ್ಲೆಂಡ್ ಪರ ಬ್ಯಾರಿ ಮೆಕಾರ್ತಿ ಎರಡು, ಮಾರ್ಕ್ ಅಡೇರ್, ಕ್ರೇಗ್ ಯಂಗ್, ಬೆಂಜಮಿನ್ ವೈಟ್ ತಲಾ ಒಂದೊಂದು ವಿಕೆಟ್ ಪಡೆದರು.

186 ರನ್‌ಗಳ ಕಠಿಣ ಗುರಿ ಬೆನ್ನತ್ತಿದ ಐರ್ಲೆಂಡ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 152 ರನ್ ಗಳಿಸಲಷ್ಟೇ ಶಕ್ತವಾಗಿ ಸೋಲು ಅನುಭವಿಸಿತು. ತಂಡದ ಪರ ಆಂಡ್ರ್ಯೂ ಬಾಲ್ಬಿರ್ನಿ 72, ಹ್ಯಾರಿ ಟೆಕ್ಟರ್ 7, ಕರ್ಟಿಸ್ ಕ್ಯಾಂಫರ್ 18, ಜಾರ್ಜ್ ಡಾಕ್ರೆಲ್ 13, ಮಾರ್ಕ್ ಅಡೇರ್ 23 ರನ್ ಗಳಿಸಿದರು. ಭಾರತದ ಪರ ನಾಯಕ ಜಸ್‌ಪ್ರೀತ್ ಬುಮ್ರಾ, ಪ್ರಸಿದ್ಧ ಕೃಷ್ಣ ಹಾಗೂ ರವಿ ಬಿಷ್ಣೋಯಿ ತಲಾ 2, ಅರ್ಷದೀಪ್ ಸಿಂಗ್ ಒಂದು ವಿಕೆಟ್ ಸಂಪಾದಿಸಿದರು. ರಿಂಕು ಸಿಂಗ್ ಪಂದ್ಯಶ್ರೇಷ್ಠ ಗೌರವ ಪಡೆದರು.

ಮೈಸೂರು ವಾರಿಯರ್ಸ್, ಗುಲ್ಬರ್ಗಾ ಮಿಸ್ಟಿಕ್ಸ್‌ಗೆ ಭರ್ಜರಿ ಜಯ



ಬೆಂಗಳೂರು, ಆ.20– ಕೆಎಸ್‌ಸಿಎ ಮಹಾರಾಜ ಟ್ರೋಫಿ ಟಿ20 ಪಂದ್ಯಾವಳಿಯಲ್ಲಿ ಭಾನುವಾರ ನಡೆದ ಪಂದ್ಯಗಳಲ್ಲಿ ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಮೈಸೂರು ವಾರಿಯರ್ಸ್, ಮಂಗಳೂರು ಡ್ರಾಗನ್ಸ್ ವಿರುದ್ಧ ಗುಲ್ಬರ್ಗಾ ಮಿಸ್ಟಿಕ್ಸ್ ಭರ್ಜರಿ ಜಯ ಸಾಧಿಸಿದೆ.

ಮೈಸೂರು ವಾರಿಯರ್ಸ್‌ಗೆ ಜಯ: ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಅಮೋಘ ಪ್ರದರ್ಶನ ನೀಡಿದ ಮೈಸೂರು ವಾರಿಯರ್ಸ್ ಹುಬ್ಬಳ್ಳಿ ಟೈಗರ್ಸ್ ವಿರುದ್ಧ 6 ವಿಕೆಟ್‌ಗಳ ಜಯ ಸಾಧಿಸಿದೆ. ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಹುಬ್ಬಳ್ಳಿ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 185ರನ್ ದಾಖಲಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಲುವ್ನಿತ್ ಸಿಸೋಡಿಯಾ 62 ಎಸೆತಗಳಲ್ಲಿ ತಲಾ 7 ಸಿಕ್ಸರ್, ಬೌಂಡರಿ ಒಳಗೊಂಡ 105 ರನ್ ಗಳಿಸಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಉಳಿದಂತೆ ಮನೀಶ್ ಪಾಂಡೆ 33, ಪ್ರವೀಣ್ ದುಬೆ 16, ನಾಗ ಭರತ್ 12 ರನ್ ಗಳಿಸಿದರು. ಮೈಸೂರು ಪರ ಸಿ.ಎ.ಕಾರ್ತಿಕ್ 4, ಶಶಿಕುಮಾರ್, ಮನೋಜ್ ಭಾಂಡಗೆ ತಲಾ ಒಂದೊಂದು ವಿಕೆಟ್ ಉರುಳಿಸಿದರು.

186 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಮೈಸೂರು ವಾರಿಯರ್ಸ್ 4 ವಿಕೆಟ್ ನಷ್ಟಕ್ಕೆ 18.5 ಓವರ್‌ಗಳಲ್ಲಿ 188 ರನ್ ಗಳಿಸುವ ಮೂಲಕ ಗೆಲುವಿನ ನಗೆ ಬೀರಿತು. ತಂಡದ ಪರ ರವಿಕುಮಾರ್ ಸಮರ್ಥ 73, ಕೋದಂಡ ಅಜಿತ್ ಕಾರ್ತಿಕ್ 29, ಕರುಣ್ ನಾಯರ್ 41, ಶೋಯೆಬ್ ಮ್ಯಾನೇಜರ್ 21, ಶಿವಕುಮಾರ್ ರಕ್ಷಿತ್ 22 ರನ್ ಗಳಿಸಿದರು. ಹುಬ್ಬಳ್ಳಿ ಪರ ಪ್ರವೀಣ್ ದುಬೆ 3 ವಿಕೆಟ್ ಕಬಳಿಸಿದರು. ಮೈಸೂರು ವಾರಿಯರ್ಸ್‌ನ ರವಿಕುಮಾರ್ ಸಮರ್ಥ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಗುಲ್ಬರ್ಗಾ ಮಿಸ್ಟಿಕ್ಸ್‌ಗೆ ಗೆಲುವು: ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಂಜೆ ನಡೆದ ಪಂದ್ಯದಲ್ಲಿ ಮಂಗಳೂರು ಡ್ರಾಗನ್ಸ್ ವಿರುದ್ಧ ಗುಲ್ಬರ್ಗಾ ಮಿಸ್ಟಿಕ್ಸ್ 5 ವಿಕೆಟ್‌ಗಳ ಗೆಲುವು ಸಾಧಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮಂಗಳೂರು ಡ್ರಾಗನ್ಸ್ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 120 ರನ್‌ಗಳ ಸಾಧಾರಣ ಮೊತ್ತ ಪೇರಿಸಿತು. ತಂಡದ ಪರ ಕೃತಿಕ್ ಕೃಷ್ಣ 14, ನವೀನ್ ಎಂ.ಜಿ. 19, ಗೌರವ್ ಧೀಮಾನ್ 27, ಆದಿತ್ಯಾ ಗೋಯಲ್ 22 ರನ್ ಗಳಿಸಿದರು. ಗುಲ್ಬರ್ಗಾ ಪರ ಅಭಿಲಾಷ್ ಶೆಟ್ಟಿ, ವಿಜಯ್ ಕುಮಾರವ ವೈಶಾಕ್,ಅಮಿತ್ ವರ್ಮಾ ತಲಾ 2, ಶರಣ್ ಗೌಡ, ಮ್ಯಾಕೀಲ್ ನೊರೊನಾ ತಲಾ ಒಂದೊಂದು ವಿಕೆಟ್ ಪಡೆದರು.

121 ರನ್‌ಗಳ ಸಾಧಾರಣ ಗುರಿ ಬೆನ್ನತ್ತಿದ ಗುಲ್ಬರ್ಗಾ 17.1 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ ಗೆಲುವಿನ ದಡ ಸೇರಿತು. ತಂಡದ ಪರ ಸ್ಮರಣ್ ಆರ್ 62, ಶ್ರೀನಿವಾಸ್ ಶರತ್ 20, ಮ್ಯಾಕ್ನೀಲ್ ಹ್ಯಾಡ್ಲಿ ನೊರೊನ್ಹಾ 16 ರನ್ ಗಳಿಸಿದರು. ಮಂಗಳೂರು ಪರ ಸಂಕಲ್ಪ ಶೆಟ್ಟಣ್ಣನವರ್, ಆದಿತ್ಯಾ ಗೋಯಲ್, ಕೃಷ್ಣಪ್ಪ ಗೌತಮ್, ಅನಿರುದ್ಧ ಜೋಷಿ ಹಾಗೂ ಗೌರವ್ ಧೀಮಾನ್ ತಲಾ ಒಂದೊಂದು ವಿಕೆಟ್ ಪಡೆದರು. ವಿಜಯ್ ಕುಮಾರ್ ವೈಶಾಕ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಎಸ್.ಟಿ. ಸೋಮಶೇಖರ್ ಅಸಮಾಧಾನ ತಣಿಸಲು ಬಿಜೆಪಿಯಿಂದ ಇಬ್ಬರು ಮುಖಂಡರ ಉಚ್ಚಾಟನೆ

ಬೆಂಗಳೂರು: ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬೆಂಗಳೂರಿನ ಯಶವಂತಪುರ ಕ್ಷೇತ್ರದಲ್ಲಿ ಬಿಜೆಪಿಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ಆರೋಪ ಕೇಳಿಬಂದಿತ್ತು. ಪಕ್ಷದ ಅಧಿಕೃತ ಅಭ್ಯರ್ಥಿಯಾಗಿದ್ದರೂ ನನ್ನನ್ನು ಸೋಲಿಸಲು ಪಕ್ಷದ ಒಳಗಿನವರೇ ಚುನಾವಣೆಯಲ್ಲಿ ಕೆಲಸ ಮಾಡಿದ್ದಾರೆ ಎಂದು ಎಸ್. ಟಿ. ಸೋಮಶೇಖರ್ ಆರೋಪಿಸಿದ್ದರು.

ಅಲ್ಲದೇ ಈ ಸಂಬಂಧ ಪಕ್ಷದ ರಾಜ್ಯದ ಘಟಕಕ್ಕೂ ದೂರು ನೀಡಿದ್ದರು. ಆದರೆ, ಇಲ್ಲಿಯವರೆಗೂ ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಅವರು ಕಾಂಗ್ರೆಸ್ ಸೇರಲು ಸಿದ್ಧತೆ ನಡೆಸುತ್ತಿದ್ದಾರೆ ಎನ್ನಲಾಗುತಿತ್ತು. ಈ ವಿಷಯ ತಿಳಿಯುತ್ತಿದ್ದಂತೆಯೇ ಅಲರ್ಟ್ ಆದ ರಾಜ್ಯ ಬಿಜೆಪಿ ನಾಯಕರು ಸೋಮಶೇಖರ್ ಅವರ ಅಸಮಾಧಾನ ತಣಿಸುವ ನಿಟ್ಟಿನಲ್ಲಿ ಯಶವಂತಪುರ ಬಿಜೆಪಿ ಮಂಡಳ ಮಾಜಿ ಅಧ್ಯಕ್ಷ ಮಾರೇಗೌಡ ಹಾಗೂ ಉಪಾಧ್ಯಕ್ಷ ಧನಂಜಯ್ ಅವರನ್ನು ಪಕ್ಷದಿಂದ 6 ವರ್ಷಗಳ ಕಾಲ ಉಚ್ಚಾಟಿಸಲಾಗಿದೆ.

ಪಕ್ಷ ವಿರೋಧಿ ಚಟುವಟಿಕೆ ಹಿನ್ನೆಲೆಯಲ್ಲಿ ಅವರಿಬ್ಬರನ್ನು 6 ವರ್ಷಗಳ ಕಾಲ ಪಕ್ಷದಿಂದ ಉಚ್ಚಾಟಿಸಿ ಬೆಂಗಳೂರು ಉತ್ತರ ಘಟಕದ ಅಧ್ಯಕ್ಷ ಬಿ. ನಾರಾಯಣ ಆದೇಶ ಹೊರಡಿಸಿದ್ದಾರೆ. ಇತ್ತೀಚಿಗೆ ಮಾರೇಗೌಡ ಎಸ್.ಟಿ. ಸೋಮಶೇಖರ್ ಭಾವಚಿತ್ರವಿರುವ ಪಕ್ಷದ ಬ್ಯಾನರ್ ಹಾಕಿಕೊಂಡು ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡಿದ್ದರು. ಇದಕ್ಕೆ ಎಸ್. ಟಿ. ಸೋಮಶೇಖರ್ ಬಹಿರಂಗವಾಗಿ ವಿರೋಧ ವ್ಯಕ್ತಪಡಿಸಿದ್ದರು. ಅಲ್ಲದೇ, ಅವರ ವಿರುದ್ಧ ಕ್ರಮ ಕೈಗೊಳ್ಳದ ಬಿಜೆಪಿ ನಾಯಕರ ವಿರುದ್ಧವೂ ಕಿಡಿಕಾರಿದ್ದರು.

ಮೈಸೂರು ಮಿತ್ರ ಸೋಮವಾರ 21 ಆಗಸ್ಟ್ 2023

16 ತಿಂಗಳಲ್ಲಿ ಮೈಸೂರು–ಕುಶಾಲನಗರ ಚತುಷ್ಪಥ ಕಾಮಗಾರಿ ಪೂರ್ಣ



ನಂಜರಾಯಪಟ್ಟಣ ಗೋದಾಮು, ಮಳಿಗೆ, ಕೃಷಿ ಭವನ ಲೋಕಾರ್ಪಣೆ ಸಮಾರಂಭದಲ್ಲಿ ಸಂಸದ ಪ್ರತಾಪ್‌ಸಿಂಹ ವಿಶ್ವಾಸ



ಕುಶಾಲನಗರ, ಆ.20– ಮೈಸೂರು–ಕುಶಾಲನಗರ ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಮುಂದಿನ ಹದಿನೈದು ಅಥವಾ ಹದಿನಾರು ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಸಂಸದ ಪ್ರತಾಪ್ ಸಿಂಹ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ತಾಲೂಕಿನ ನಂಜರಾಯಪಟ್ಟಣ ವಿವಿಧೋದ್ದೇಶ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ನಬಾರ್ಡ್ 3.70 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ ನೂತನ ಬಹುಸೇವಾ ಕೇಂದ್ರದ ಗೋದಾಮು, ಮಳಿಗೆಗಳು, ನೂತನ ಸಹಕಾರ ಭವನವನ್ನು ಭಾನುವಾರ ಲೋಕಾರ್ಪಣೆಗೊಳಿಸಿದ ನಂತರ ನೂತನ ಸಭಾಂಗಣದಲ್ಲಿ ನಡೆದ ವೇದಿಕೆ ಕಾರ್ಯ ಕ್ರಮದಲ್ಲಿ ಅವರು ಮಾತನಾಡಿದರು.

ಮೈಸೂರು– ಕುಶಾಲನಗರ ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯನ್ನು ಮುಂದಿನ ಹದಿನೈದು ಅಥವಾ ಹದಿನಾರು ತಿಂಗಳಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಹೆದ್ದಾರಿಯ ಸರ್ವೆ ಕಾರ್ಯ ಮುಗಿದು ಹದ್ದುಬಸ್ತು ಕೂಡ ಆಗಿದೆ. ಭೂ ಸ್ವಾಧೀನ ಪ್ರಕ್ರಿಯೆ ಆರಂಭ ಮಾಡಲಾಗಿದೆ. ರಸ್ತೆ ನಿರ್ಮಾಣ ಕ್ಕಾಗಿ ಭೂಮಿ ಕಳೆದುಕೊಳ್ಳುವ ರೈತರಿಗೆ ನ್ಯಾಯ ಯುತ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಮೈಸೂರಿನಿಂದ ಕುಶಾಲನಗರದ ರಾಣಿಗೇಟ್‌ವರೆಗೆ 1954 ಕೋಟಿ ರೂ. ವೆಚ್ಚದ ರೈಲ್ವೆ ಯೋಜನೆಯ ಡಿಪಿಆರ್ ಅನ್ನು ಸೆಪ್ಟೆಂಬರ್‌ನಲ್ಲಿ ಸಲ್ಲಿಸಲಾಗುತ್ತದೆ.ರಾಜ್ಯ ಸರ್ಕಾರ ಭೂಮಿ ಒದಗಿಸಿದರೆ ಈ ಯೋಜನೆ ಕೂಡ ಬೇಗ ಅನುಷ್ಠಾನಕ್ಕೆ ತರಲಾಗುತ್ತದೆ ಎಂದರು.

ನಬಾರ್ಡ್‌ನಿಂದ ಶೇ.4 ಬಡ್ಡಿದರದಲ್ಲಿ ಸಾಲ ಪಡೆದು ಉತ್ತಮವಾದ ಬೃಹತ್ ಕಟ್ಟಡ,ಕಚೇರಿ, ವಾಣಿಜ್ಯ ಮಳಿಗೆಗಳನ್ನು ನಿರ್ಮಾಣ ಮಾಡಿರುವುದು ಶ್ಲಾಘನೀಯ ಕಾರ್ಯ. ವಾಣಿಜ್ಯ ಮಳಿಗೆಗಳಿಂದ ಆದಾಯ ಕೂಡ ಬರುತ್ತದೆ. ಇದು ಸಂಘದ ಬಲವರ್ಧನೆ ಸಹಕಾರಿಯಾಗುತ್ತದೆ. ಸಂಘದ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರ ಕಾರ್ಯ ಸಾಧನೆ ಇತರೆ ಸಂಘಗಳಿಗೆ ಮಾದರಿಯಾಗಿದೆ ಎಂದರು.

ನಬಾರ್ಡ್‌ನಿಂದ ರಸ್ತೆ, ಸೇತುವೆ ಹಾಗೂ ಪಶು ಆಸ್ಪತ್ರೆ ನಿರ್ಮಾಣ ಮಾಡಬಹುದು. ಆದ್ದರಿಂದ ಸಹಕಾರ ಸಂಘಗಳು ನಬಾರ್ಡ್ ಸಾಲ ಯೋಜನೆಯನ್ನು ಸದುಪಯೋಗ ಪಡಿಸಿಕೊಂಡು ಅಭಿವೃದ್ಧಿ ಹೊಂದಬೇಕು ಎಂದರು.

ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ ಮಡಿಕೇರಿ ಅಧ್ಯಕ್ಷ ಕೊಡಂದೇರ ಪಿ.ಬಾಂಡ್ ಗಣಪತಿ ನೂತನ ಕಚೇರಿ ಉದ್ಘಾಟಿಸಿ ಮಾತನಾಡಿ, ರೈತರು ಬ್ಯಾಂಕ್‌ನಿಂದ ಪಡೆದ ಸಾಲವನ್ನು ಸಕಾಲದಲ್ಲಿ ಹಿಂದಿರಿಗಿಸುವ ಮೂಲಕ, ಬ್ಯಾಂಕ್ ಜೊತೆಗೆ ತಾವೂ ಬೆಳೆಯಬೇಕು ಎಂದರು.

ಸಾಲ ಬಾಕಿ ಉಳಿಸಿಕೊಂಡರೆ ಬ್ಯಾಂಕ್ ನಷ್ಟದ ಸುಳಿಗೆ ಸಿಲುಕಿ, ರೈತರಿಗೆ ಸಿಗುವ ಹಲವು ಸೌಲಭ್ಯಗಳು ಸಹ ಕೈತಪ್ಪಲಿವೆ. ಡಿಸಿಸಿ ಬ್ಯಾಂಕ್ ರೈತರ ಬೆನ್ನೆಲುಬಾಗಿ ಕೆಲಸ ಮಾಡುತ್ತಿದ್ದು, ರೈತರ ಬದುಕು ಹಸನಾಗಿಸುವುದೇ ಇದರ ಸ್ಥಾಪನೆಯ ಉದ್ದೇಶವಾಗಿದೆ ಎಂದರು.

ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಬ್ಯಾಂಕ್ ಅಧ್ಯಕ್ಷ ಅಪ್ಪಚೆಟ್ಟೋಳಂಡ ಮನುಮುತ್ತಪ್ಪ ಲಿಫ್ಟ್ ಉದ್ಘಾಟಿಸಿ ಮಾತನಾಡಿ, ರೈತರ ಆರ್ಥಿಕ ಸುಧಾರಣೆಗೆ ಪ್ರಾಥಮಿಕ ಸಹಕಾರ ಸಂಘಗಳ ಪಾತ್ರ ಮಹತ್ವದ್ದಾಗಿದೆ. ಸಂಘಗಳನ್ನು ಬಹು ಸೇವಾ ಚಟುವಟಿಕೆಗಳ ಕೇಂದ್ರವನ್ನಾಗಿ ಪರಿವರ್ತಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ರಾಜ್ಯ ಸರ್ಕಾರ ಸಹ ಒಪ್ಪಿದೆ. ರೈತರಿಗೆ ಬೇಕಾದ ಎಲ್ಲಾ ಸೇವೆಗಳನ್ನು ಒಂದೇ ಕಡೆ ಒದಗಿಸುವುದು ಇದರ ಉದ್ದೇಶ ಎಂದರು. ಸಂಘದಲ್ಲಿ ಬೆಳೆ ಸಾಲದ ಜೊತೆಗೆ ಇನ್ನಿತರ ಸಾಲ ಕೂಡ ಸಿಗಲಿದ್ದು, ಸದುಪಯೋಗ ಪಡಿಸಿಕೊಳ್ಳಬೇಕು. ಸಂಘಗಳ ಕಂಪ್ಯೂಟರೀಕರಣ ಆಗಬೇಕು. ಇದರಿಂದ ಹಣ ದುರುಪಯೋಗಕ್ಕೆ ಕಡಿವಾಣ ಬೀಳಲಿದೆ. ದಾಖಲೆಗಳ ಸಂಗ್ರಹವೂ ಸುಲಭವಾಗಲಿದೆ ಎಂದು ಹೇಳಿದರು.

ಡಿ.ದೇವರಾಜ ಅರಸು ಬಡವರು, ಹಿಂದುಳಿದ ವರ್ಗಗಳ ಆಶಾಕಿರಣ



ಮಡಿಕೇರಿ, ಆ.20– ಉಳುವವನೇ ಭೂಮಿಯ ಒಡೆಯ, ಶಾಲಾ–ಕಾಲೇಜು ಆರಂಭ, ವಿದ್ಯಾರ್ಥಿ ನಿಲಯಗಳ ಸ್ಥಾಪನೆ, ಜೀತಪದ್ಧತಿ ನಿರ್ಮೂಲನೆ ಹೀಗೆ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಮೂಲಕ ಬಡವರಿಗೆ ಡಿ.ದೇವರಾಜ ಅರಸು ಅವರು ಹತ್ತಿರವಾಗಿದ್ದರು ಎಂದು ಶಾಸಕ ಡಾ.ಮಂಥರ್‌ಗೌಡ ಸ್ಮರಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ನಗರದ ಗಾಂಧಿ ಭವನದಲ್ಲಿ ಭಾನುವಾರ ನಡೆದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 108ನೇ ಜನ್ಮ ದಿನಾಚರಣೆಯ ಸಭಾ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಜ್ಯದಲ್ಲಿ ಎರಡು ಅವಧಿಗೆ ಮುಖ್ಯಮಂತ್ರಿಯಾಗಿ ಹಿಂದುಳಿದ ವರ್ಗಗಳು ಹಾಗೂ ಇತರೆ ಸಣ್ಣ ಸಣ್ಣ ಸಮಾಜಗಳನ್ನು ಗುರ್ತಿಸಿ ಮೇಲೆತ್ತಲು ಶ್ರಮಿಸಿದ ಕೀರ್ತಿ ಡಿ.ದೇವರಾಜ ಅರಸು ಅವರಿಗೆ ಸಲ್ಲುತ್ತದೆ ಎಂದರು.

ಡಿ.ದೇವರಾಜ ಅರಸು ಅವರು ಬಡವರ ಬಗ್ಗೆ ಸದಾ ಸಾಮಾಜಿಕ ಕಳಕಳಿ ಹೊಂದಿದ್ದರು, ರಾಜ್ಯದಲ್ಲಿ ಉತ್ತಮ ಆಡಳಿತ ನೀಡಿದರು. ದೇವರಾಜ ಅರಸು ಅವರಂತೆ ಪ್ರಸ್ತುತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಡವರ ಧ್ವನಿಯಾಗಿ, ಹಿಂದುಳಿದ ವರ್ಗದವರ ಕಣ್ಮಣಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಮಂತರ್ ಗೌಡ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್ ಮಾತನಾಡಿ, 70 ರ ದಶಕದಲ್ಲಿ ಅರಸು ಅವರು ಮುಖ್ಯಮಂತ್ರಿಯಾಗಿ ಜಾರಿಗೆ ತಂದ ಕಾರ್ಯಕ್ರಮಗಳು ಇಂದಿನ ಯುವ ಜನರು ಅನುಭವಿಸುತ್ತಿದ್ದಾರೆ ಎಂದರು.

ವಿರಾಜಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಕೆ.ಸಿ.ದಯಾನಂದ ಮಾತನಾಡಿ, ಭೂ ಸುಧಾರಣಾ ಕಾಯ್ದೆ ಜಾರಿಗೊಳಿಸಿ, ರಾಜ್ಯದಲ್ಲಿ ಕ್ರಾಂತಿ ಉಂಟು ಮಾಡಿದರು. ಆಶ್ರಯ ಯೋಜನೆ, ಗ್ರಾಮೀಣ ಸಾಲ ಮನ್ನಾ, ಮನೆ ಮನೆಗೆ ವಿದ್ಯುತ್ ಸಂಪರ್ಕ ಹೀಗೆ ಹಲವು ಕಾರ್ಯಕ್ರಮ ಜಾರಿಗೊಳಿಸಿದರು ಎಂದು ತಿಳಿಸಿದರು.

ಉಪ ವಿಭಾಗಾಧಿಕಾರಿ ಡಾ.ಯತೀಶ್ ಉಲ್ಲಾಳ್ ಮಾತನಾಡಿದರು. ಹಾಗೆಯೇ ಶಾಸಕ ಡಾ.ಮಂಥರ್ ಗೌಡ, ಪ್ರಾಂಶುಪಾಲ ಕೆ.ಸಿ.ದಯಾನಂದ ಅವರನ್ನು ಇದೇ ಸಂದರ್ಭದಲ್ಲಿ ಗೌರವಿಸಲಾಯಿತು.

ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸತೀಶ್, ಸದಸ್ಯ ರಾಜೇಶ್ ಯಲ್ಲಪ್ಪ, ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಮುನಿರ್ ಅಹಮದ್, ಜಿಪಂ ಸಿಇಓ ವರ್ಣಿತ್ ನೇಗಿ, ತಹಶೀಲ್ದಾರ್ ಪ್ರವೀಣ್ ಕುಮಾರ್, ಕೃಷಿ ಇಲಾಖೆ ಉಪ ನಿರ್ದೇಶಕ ಬಾಲರಾಜ್ ರಂಗ ರಾವ್, ಡಿಡಿಪಿಯು ಪುಟ್ಟರಾಜು ಇತರರು ಇದ್ದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಎನ್.ಮಂಜುನಾಥ್ ಸ್ವಾಗತಿಸಿದರು. ಆಲೂರು ಸಿದ್ದಾಪುರ ವಸತಿ ಶಾಲೆಯ ವಿದ್ಯಾರ್ಥಿನಿಯರು ನಾಡಗೀತೆ ಹಾಡಿದರು. ಪ್ರಾಂಶುಪಾಲರಾದ ಭಾರತಿ ನಿರೂಪಿಸಿದರು. ಭಾಗಮಂಡಲ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ ಲೋಕೇಶ್ ವಂದಿಸಿದರು.

ಸೌಜನ್ಯ ಕೊಲೆ ಪ್ರಕರಣ: ಸಮಗ್ರ ತನಿಖೆಗೆ ಆಗ್ರಹಿಸಿ ಪ್ರತಿಭಟನೆ



ವಿರಾಜಪೇಟೆ, ಆ.20– ಸೌಜನ್ಯ ಕೊಲೆ ಪ್ರಕರಣದ ನಿಜವಾದ ಆರೋಪಿಯನ್ನು ಬಂಧಿಸಬೇಕು. ಸರಕಾರ ಈ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ ಒತ್ತಾಯಿಸಿ ಸಿಐಟಿಯು ಮಹಿಳಾ ಸಂಘಟನೆ ವತಿಯಿಂದ ವಿರಾಜಪೇಟೆ ಗಡಿಯಾರ ಕಂಬದ ಬಳಿ ಪ್ರತಿಭಟನೆ ನಡೆಸಿ ಆ.28 ರಂದು ಬೆಳ್ತಂಗಡಿಯಲ್ಲಿ ನಡೆಯುವ ಪ್ರತಿಭಟನೆಗೆ ಬೆಂಬಲ ಸೂಚಿಸಿದರು.

ಕಟ್ಟಡ ಕಾರ್ಮಿಕ ಸಂಘದ ರಾಜ್ಯ ಮಹಿಳಾ ಮುಖಂಡರಾದ ಮಂಡ್ಯದ ಸಿ.ಕುಮಾರಿ ಅವರು ಪ್ರತಿಭಟನಕಾರರನ್ನುದ್ದೇಶಿಸಿ ಮಾತನಾಡಿ, ಕಳೆದ ಹನ್ನೆರಡು ವರ್ಷಗಳ ಹಿಂದೆ ಸೌಜನ್ಯ ಕೊಲೆ ನಡೆದಿದ್ದು, ಇದುವರೆಗೂ ಪೊಲೀಸರು ನಿಜವಾದ ಆರೋಪಿಯನ್ನು ಕಂಡು ಹಿಡಿದಿಲ್ಲ. ಸಿಕ್ಕಿದ ಒಬ್ಬ ಆರೋಪಿಯನ್ನು ಈ ಹಿಂದೆ ಬಂಧಿಸಿ ಈಗ ಬಿಡುಗಡೆ ಮಾಡಿದ್ದಾರೆ. ಸೌಜನ್ಯಳ ಕೊಲೆಗೆ ನ್ಯಾಯ ದೊರಕಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕಟ್ಟಡ ಕಾರ್ಮಿಕ ಸಂಘದ ಜಿಲ್ಲಾ ಅಧ್ಯಕ್ಷ ಎ.ಸಿ.ಸಾಬು, ಸಿಐಟಿಯು ಸಂಘಟನೆಯ ಜಿಲ್ಲಾ ಅಧ್ಯಕ್ಷ ಪಿ.ಆರ್.ಭರತ್ ಮಾತನಾಡಿ, ಸೌಜನ್ಯ ಕೊಲೆ ಆರೋಪಿಯನ್ನು ಬಂಧಿಸಿ ಶಿಕ್ಷೆ ನೀಡುವಂತೆ ಒತ್ತಾಯಿಸಿದರು. ಕಟ್ಟಡ ಕಾಮಿಕ ಸಂಘದ ಜಿಲ್ಲಾ ಸಮಿತಿಯ ಪದ್ಮಿನಿ, ಹರಿದಾಸ್, ಸುಬ್ರಮಣಿ ಹರಿದಾಸ್ ಮಹಿಳೆಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಶ್ರದ್ಧಾಭಕ್ತಿಯಿಂದ ಶ್ರಾವಣ ಶನಿವಾರದ ಪೂಜೆ



ನಾಪೋಕ್ಲು ಆ.20– ಸಮೀಪದ ಕಕ್ಕುಂದಕಾಡು ಶ್ರೀಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದಲ್ಲಿ ಶ್ರಾವಣ ಶನಿವಾರದ ಪೂಜೆ ಭಕ್ತಾದಿಗಳ ಸಂಗಮದೊಂದಿಗೆ ಶ್ರದ್ಧಾಭಕ್ತಿಯಿಂದ ಸಂಪನ್ನಗೊಂಡಿತ್ತು. ಪ್ರತಿವರ್ಷದಂತೆ ಶ್ರಾವಣ ಶನಿವಾರ ಪ್ರಯುಕ್ತ ದೇವಾಲಯದಲ್ಲಿ ಬೆಳಿಗ್ಗೆ ಏಳು ಗಂಟೆಗೆ ಅಭಿಷೇಕ, 11 ಗಂಟೆಯಿಂದ 12 ಗಂಟೆವರೆಗೆ ನೆರೆದ ಭಕ್ತಾದಿಗಳು ತಮ್ಮ ಭಕ್ತಿ ಅನುಸಾರ ವಿವಿಧ ಪೂಜಾ ಕೈಂಕರ್ಯಗಳು ಸೇವೆಯ, ಸಂಕಲ್ಪ ನೆರವೇರಿಸಿ ಭಕ್ತಿ ಪರವಸರಾ ದರು. ಮಧ್ಯಾಹ್ನ 12.30 ಕ್ಕೆ ವೆಂಕಟೇಶ್ವರನಿಗೆ ವಿಶೇಷ ಮಹಾಪೂಜೆ, ಮಹಾಮಂಗಳಾರತಿಯ ಕಾರ್ಯಕ್ರಮಗಳು ನೆರವೇರಿಸಲಾಯಿತು. ನೆರೆದ ಭಕ್ತಾದಿಗಳಿಗೆ ತೀರ್ಥ ಪ್ರಸಾದ ವಿತರಿಸಿದ ಬಳಿಕ ನೆರೆದಿದ್ದ ಭಕ್ತಾದಿಗಳಿಗೆ ಅನ್ನಸಂತರ್ಪಣೆ ನೆರವೇರಿತು. ದೇವಸ್ಥಾನದಲ್ಲಿ ಶ್ರಾವಣ ಶನಿವಾರ ಪೂಜಾ ಕಾರ್ಯಕ್ರಮಗಳು ಸೆಪ್ಟೆಂಬರ್ 9ರವರೆಗೆ ನಡೆಯಲಿವೆ.

ಚೆಕ್ ಬೌನ್ಸ್ ಪ್ರಕರಣ ವಜಾಗೊಳಿಸಿದ ವಿ.ಪೇಟೆ ಕೋರ್ಟ್

ವಿರಾಜಪೇಟೆ, ಆ.20– ಕೋತೂರು ಗ್ರಾಮದ ಪ್ರದೀಪ್ ವಿರುದ್ಧ ವಿರಾಜಪೇಟೆ ಅಡಿಷನಲ್ ನ್ಯಾಯಾಲಯದಲ್ಲಿ 15 ಲಕ್ಷ ರೂ. ವಸೂಲಾತಿಗಾಗಿ ಅಮ್ಮತ್ತಿ ಕಾರ್ಮಾಡು ಗ್ರಾಮದ ವಿ.ಸಿ. ಸವಿತ ದಾಖಲಿಸಿದ್ದ ಚೆಕ್‌ಬೌನ್ಸ್ ಪ್ರಕರಣವನ್ನು ವಿಚಾರಣೆಗೊಳಪಡಿಸಿದ ನ್ಯಾಯಾಧೀಶರಾದ ಪ್ರದೀಪ್ ಪಟ್ಟೇದಾರ್ ಅಂತಿಮ ತೀರ್ಪು ನೀಡಿ, ಪ್ರಕರಣವನ್ನು ವಜಾಗೊಳಿಸಿ ಆರೋಪಿಯನ್ನು ಖುಲಾಸೆಪಡಿಸಿದ್ದಾರೆ.

ಶ್ರೀಮತಿ ವಿ.ಸಿ. ಸವಿತರವರು ಸೆಪ್ಟೆಂಬರ್ 2017ರಲ್ಲಿ 15 ಲಕ್ಷ ರೂ.ವನ್ನು ಪ್ರದೀಪ್ ರವರಿಗೆ ನೀಡಿದ್ದು, ಹಣದ ಬಾಬ್ತು ಗ್ಯಾರಂಟಿಗಾಗಿ ವಿಜಯ ಬ್ಯಾಂಕ್ ಕಾನೂರು ಶಾಖೆಯ ಚೆಕ್ ಪಡೆದಿದ್ದರು. ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂದು ಚೆಕ್ ಅಮಾನ್ಯಗೊಂಡಿತ್ತು. ಈ ಸಂಬಂಧ ಸವಿತಾ ಅವರು ಚೆಕ್‌ಬೌನ್ಸ್ ಪ್ರಕರಣವನ್ನು ನ್ಯಾಯಾಲಯದಲ್ಲಿ ಹೂಡಿದ್ದರು. ಪ್ರಕರಣದ ವಿಚಾರಣೆಯನ್ನು ನಡೆಸಿದ ನ್ಯಾಯಾಲಯ ಫಿರ್ಯಾದಿಗೆ ದೊಡ್ಡ ಮೊತ್ತದ ಹಣ ನೀಡಲು ಆರ್ಥಿಕ ಸಾಮರ್ಥ್ಯವಿಲ್ಲವೆಂದು ಸಂಶಯ ವ್ಯಕ್ತಪಡಿಸಿ, ಹಣದ ವಿನಿಮಯ ನಡೆದ ಸಂದರ್ಭ ದೇಶದಲ್ಲಿ ನೋಟ್ ಬ್ಯಾನ್ ಆಗಿತ್ತು. ಜೊತೆಗೆ ಕೆಲವು ಆರ್ಥಿಕ ನಿಯಮಾವಳಿಯ ಉಲ್ಲಂಘನೆ ಆಗಿದೆ ಎಂಬ ಆರೋಪಿಯ ವಾದವನ್ನು ಪುರಸ್ಕರಿಸಿ ಅಂತಿಮವಾಗಿ ಚೆಕ್ ಅಮಾನ್ಯ ಪ್ರಕರಣವನ್ನು ವಜಾಗೊಳಿಸಿ, ಆರೋಪಿಯನ್ನು ದೋಷಮುಕ್ತಗೊಳಿಸಿ. ತೀರ್ಪು ನೀಡಿದೆ. ಆರೋಪಿಯ ಪರವಾಗಿ ವಕೀಲ ಡಿ.ಸಿ. ಧ್ರುವ ವಾದಿಸಿದ್ದರು.

ನಾಗಮಲೆಗೆ ತೆರಳುತ್ತಿದ್ದ ಇಬ್ಬರ ಮೇಲೆ ಕಾಡಾನೆ ದಾಳಿ: ಓರ್ವ ಸಾವು



ಹನೂರು, ಆ.20– ಪುಣ್ಯಕ್ಷೇತ್ರ ನಾಗಮಲೆಗೆ ತೆರಳುತ್ತಿದ್ದ ಇಬ್ಬರು ಭಕ್ತರ ಮೇಲೆ ಕಾಡಾನೆ ದಾಳಿ ನಡೆಸಿದ ಪರಿಣಾಮ ಓರ್ವ ಮೃತಪಟ್ಟು, ಮತ್ತೋರ್ವ ಪಾರಾಗಿರುವ ಘಟನೆ ಇಂಡಿಗನತ್ತ– ನಾಗಮಲೆ ಮಾರ್ಗ ಮಧ್ಯದಲ್ಲಿ ಜರುಗಿದೆ. ಬೆಂಗಳೂರು ಮೂಲದ ಗೋವಿಂದರಾಜು (35) ಮೃತಪಟ್ಟವರಾಗಿದ್ದು, ಈತನ ಸ್ನೇಹಿತ ಲೋಕೇಶ್ ಆನೆ ದಾಳಿಯಿಂದ ಪಾರಾಗಿದ್ದಾರೆ.

ವಿವರ: ಗೋವಿಂದರಾಜು ಮತ್ತು ಆತನ ಸ್ನೇಹಿತ ಲೋಕೇಶ್ ಶನಿವಾರ ಸಂಜೆ ಮಲೆ ಮಹದೇಶ್ವರ ಬೆಟ್ಟಕ್ಕೆ ಆಗಮಿಸಿ ಮಾದಪ್ಪನ ದರ್ಶನ ಪಡೆದು ಬಳಿಕ ರಾತ್ರಿ ನಾಗಮಲೆಗೆ ತೆರಳುತ್ತಿದ್ದ ವೇಳೆ ಇಂಡಿಗನತ್ತ ಸಮೀಪದ ಅರಣ್ಯ ಇಲಾಖೆ ಚೆಕ್ ಪೋಸ್ಟ್ ಬಳಿ ಕಾಡಾನೆ ಏಕಾಏಕಿ ದಾಳಿ ನಡೆಸಿದೆ. ಈ ವೇಳೆ ಆನೆ ತುಳಿತಕ್ಕೆ ಸಿಲುಕಿ ಗೋವಿಂದರಾಜು ಸ್ಥಳದಲ್ಲೇ ಸಾವನ್ನಪ್ಪಿದರೇ, ಆತನ ಸ್ನೇಹಿತ ಲೋಕೇಶ್ ಆನೆ ದಾಳಿಯಿಂದ ಬಚಾವಾಗಿ ಬಂದಿದ್ದು, ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಸ್ಥಳಕ್ಕೆ ಮಲೆ ಮಹದೇಶ್ವರ ಬೆಟ್ಟ ಪೊಲೀಸರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ರಾತ್ರಿ ವೇಳೆ ನಾಗಮಲೆಗೆ ತೆರಳಿದ್ದು ಈ ಅವಘಡಕ್ಕೆ ಕಾರಣ ಎನ್ನಲಾಗಿದೆ. ಈ ಸಂಬಂಧ ಮಹದೇಶ್ವರ ಬೆಟ್ಟದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾತ್ರಿ ಸಂಚಾರ ನಿಷೇಧಿಸಲು ಆಗ್ರಹ: ಮಲೆ ಮಹದೇಶ್ವರ ಬೆಟ್ಟದಿಂದ ನಾಗಮಲೆ ಕ್ಷೇತ್ರಕ್ಕೆ ತೆರಳುವ ಭಕ್ತಾದಿಗಳ ಮೇಲೆ ಆಗಿಂದಾಗ್ಗೆ ಕಾಡಾನೆ ದಾಳಿ ನಡೆಸುತ್ತಿವೆ. ಈ ನಿಟ್ಟಿನಲ್ಲಿ ರಾತ್ರಿ ವೇಳೆ ಭಕ್ತಾದಿಗಳು ನಾಗಮಲೆಗೆ ತೆರಳುವುದನ್ನು ನಿಷೇಧಿಸುವಂತೆ ಭಕ್ತರು ಸಾಮಾಜಿಕ ಜಾಲತಾಣಗಳಲ್ಲಿ ಆಗ್ರಹಿಸಿದ್ದಾರೆ.

ಉಪೇಂದ್ರ ಬಂಧನಕ್ಕೆ ಆಗ್ರಹಿಸಿ ನಾಳೆ ಬೃಹತ್ ಪ್ರತಿಭಟನೆ


ಕೊಳ್ಳೇಗಾಲ, ಆ.20– ಆಕ್ಷೇಪಾರ್ಹ ಹೇಳಿಕೆ ನೀಡಿರುವ ನಟ ಉಪೇಂದ್ರ ಬಂಧನಕ್ಕೆ ಆಗ್ರಹಿಸಿ ಆ.22 ರಂದು ಪಟ್ಟಣದಲ್ಲಿ ದಲಿತ ಸಂಘಟನೆಗಳಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ದಲಿತ ಮುಖಂಡರಾದ ನಿಂಗರಾಜು, ಛಲವಾದಿ ಮಹಾಸಭೆ ರಾಜ್ಯ ಉಪಾಧ್ಯಕ್ಷ ಅಣಗಳ್ಳಿ ಬಸವರಾಜು ತಿಳಿಸಿದರು.

ಪಟ್ಟಣದಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಟ ಉಪೇಂದ್ರ ಅವರು ಆಕ್ಷೇಪಾರ್ಹ ಪದ ಬಳಸಿರುವುದು ಸರಿಯಲ್ಲ. ಇದೊಂದು ಶಿಕ್ಷಾರ್ಹ ಅಪರಾಧ. ಪ್ರಕರಣ. ಈ ಸಂಬಂಧ ಈಗಾಗಲೇ ಪೊಲೀಸರಿಗೆ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ರಾಜ್ಯ ಸರ್ಕಾರ ಸಹ ಕ್ರಮ ಜರುಗಿಸದೇ ಮಲತಾಯಿ ಧೋರಣೆ ಅನುಸರಿಸುತ್ತಿದೆ. ಹೀಗಾಗಿ ನಟ ಉಪೇಂದ್ರ ಬಂಧನಕ್ಕೆ ಆಗ್ರಹಿಸಿ ಮಂಗಳವಾರ ಬೃಹತ್ ಮೆರವಣಿಗೆ ಮೂಲಕ ಪ್ರತಿಭಟನೆ ನಡೆಸಿ ಪಟ್ಟಣದ ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದರು. ಈ ವೇಳೆ ಮುಖಂಡರಾದ ಚೇತನ್, ದೊರೆರಾಜು, ಸಿದ್ದಾರ್ಥ್, ಸುರೇಶ್ ಇನ್ನಿತರರಿದ್ದರು.

ಚಾ.ನಗರದಲ್ಲಿ ಸಂವಿಧಾನ ಉಳಿವಿಗಾಗಿ ಭೀಮ ಸಂಕಲ್ಪ ಸಮಾವೇಶ

ದೇಶದಲ್ಲಿ ಪ್ರಜಾಪ್ರಭುತ್ವ ಕ್ಷೀಣಿಸುತ್ತಿರುವುದು ವಿಷಾದಕರ

ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ



ಚಾಮರಾಜನಗರ, ಆ.20– ದೇಶದಲ್ಲಿ ಪ್ರಜಾಪ್ರಭುತ್ವ ಕ್ಷೀಣಿಸುತ್ತಿರುವುದು ವಿಷಾದಕರ ಸಂಗತಿ. ಕೋಮುವಾದ ಅಳಿಯಬೇಕು ಪ್ರಜಾಪ್ರಭುತ್ವ ಉಳಿಯಬೇಕು. ಆ ನಿಟ್ಟಿನಲ್ಲಿ ಚಾಮರಾಜನಗರ ಭೀಮ ಸಂಕಲ್ಪ ಸಮಾವೇಶ ಸಾಗಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ದಲಿತ ಸಂಘಟನೆಗಳ ಒಕ್ಕೂಟದಿಂದ ನಡೆದ ಸಂವಿಧಾನ ಉಳಿವಿಗಾಗಿ ಭೀಮ ಸಂಕಲ್ಪ ಸಮಾವೇಶವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಸಿದ್ಧಾಂತ ಪ್ರಚಾರ ಮಾಡಬೇಕು. ಬಲವಾದ ಅಂಬೇಡ್ಕರ್ ವಾದ ಬೇಕು. ದೇಶದ ಸಂವಿಧಾನ ರಕ್ಷಣೆ ನಮ್ಮ ಮೇಲಿದೆ. ಸಂವಿಧಾನ ರಕ್ಷಣೆ ಆದರೆ ನಾವು ರಕ್ಷಣೆಯಾಗುತ್ತೇವೆ. ಅದಕ್ಕಾಗಿ ಒಗ್ಗಟ್ಟಾಗಬೇಕು ಎಂದರು.

ಚಾಮರಾಜನಗರ ಹೋರಾಟದ ಜಿಲ್ಲೆ. ಜಾನಪದ ಸಾಹಿತ್ಯದ ತಾಯಿ ಬೇರು ಇಲ್ಲಿದೆ. ಇದನ್ನು ಮುಂಚೂಣಿಗೆ ತರಬೇಕಿದೆ. ದೇವರಾಜ ಅರಸು, ರಾಜೀವ್ ಗಾಂಧಿ ಪ್ರಜಾಪ್ರಭುತ್ವವಾದಿಗಳು, ಜಗಜ್ಯೋತಿ ಬಸವೇಶ್ವರರು ಜಾತಿ ಸಮಾಜವನ್ನು ಕಾಯಕ ಸಮಾಜವಾಗಿ ಬದಲಾವಣೆ ಮಾಡಿದರು. ಅದೇ ಹಾದಿಯಲ್ಲಿ ಅಂಬೇಡ್ಕರ್ ಅವರು ಹೋರಾಟ ಮಾಡಿ ವಿಶ್ವಜ್ಞಾನಿಯಾಗಿದ್ದು, ವಿಶ್ವಸಂಸ್ಥೆಯಲ್ಲಿ ಅವರ ಜನ್ಮ ದಿನಾಚರಣೆ ಆಚರಿಸಲಾಗುತ್ತಿದೆ ಎಂದರು.

ಅನುದಾನ ದುರುಪಯೋಗವಾಗಲ್ಲ: ಹೆಚ್.ಸಿ.ಮಹದೇವಪ್ಪ, ಸಿದ್ದರಾಮಯ್ಯ, ಸತೀಶ್ ಜಾರಕಿಹೊಳಿ ಇರುವ ತನಕ ಸರ್ಕಾರದಲ್ಲಿ ಎಸ್‌ಇಪಿ, ಟಿಎಸ್‌ಪಿಯ ಒಂದು ರೂಪಾಯಿ ಅನ್ಯ ಕಾರ್ಯಗಳಿಗೆ, ದುರುಪಯೋಗವಾಗಲು ಬಿಡಲ್ಲ ಎಂದರು.

ಸಂವಿಧಾನದಿಂದ ದೇಶದ ರಕ್ಷಣೆ ಸಾಧ್ಯ: ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ದ್ವಾರಕನಾಥ್ ಮಾತನಾಡಿ, ದೇಶದ ರಕ್ಷಣೆಗೆ ಅಂಬೇಡ್ಕರ್ ಸಂವಿಧಾನ ಅವಶ್ಯಕವಾಗಿದೆ. ಹೀಗಾಗಿ ಸಂವಿಧಾನ ಉಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಆ ನಿಟ್ಟಿನಲ್ಲಿ ಸಂವಿಧಾನ ಉಳಿವಿಗಾಗಿ ಭೀಮ ಸಂಕಲ್ಪ ಸಮಾವೇಶ ಸ್ಫೂರ್ತಿಯಾಗಲಿ ಎಂದರು.

ದಸಂಸ ಜಿಲ್ಲಾ ಸಂಚಾಲಕ ಕೆ.ಎಂ. ನಾಗರಾಜು ಮಾತನಾಡಿ, ಇಡೀ ವಿಶ್ವದಲ್ಲೇ ಅಂಬೇಡ್ಕರ್ ಸಂವಿಧಾನ ಶ್ರೇಷ್ಠ ಸಂವಿಧಾನವಾಗಿದೆ. ಈ ಸಂವಿಧಾನ ಯಥಾವತ್ತಾಗಿ ಜಾರಿಯಾದರೇ ದೇಶದ ಪ್ರಗತಿ ಸಾಧ್ಯವಾಗಲಿದೆ ಎಂದರು.

ತಿ.ನರಸೀಪುರ ನಳಂದ ಬುದ್ಧ ವಿಹಾರದ ಶ್ರೀಬೋಧಿರತ್ನ ಬಂತೇಜಿ, ಮೈಸೂರಿನ ಉರಿಲಿಂಗಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ, ಶ್ರೀ ಬಸವಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿದರು. ಶಾಸಕ ಸಿ.ಪುಟ್ಟರಂಗ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಇದೇ ವೇಳೆ ಶಾಸಕರು, ಸಚಿವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಸ್.ಗಣೇಶ ಪ್ರಸಾದ್, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಮಾಜಿ ಶಾಸಕ ಕಳಲೆ ಕೇಶವ ಮೂರ್ತಿ, ಕೆಪಿಸಿಸಿ ಕಾರ್ಯದರ್ಶಿ ಹೆಚ್.ಸಿ. ಬಸವರಾಜು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ನಗರಸಭಾ ಮಾಜಿ ಅಧ್ಯಕ್ಷ ಎಸ್.ನಂಜುಂಡಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಚಂದ್ರು, ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ (ಪಾಪು), ಮಾನವ ಬಂಧುತ್ವ ವೇದಿಕೆ ಡಾ.ಲೀಲಾ ಸಂಪಿಗೆ ಕೆರೆಗೋಡು, ಸಾಹಿತಿ ಸಿದ್ದರಾಜು ದೊಡ್ಡರಾಯಪೇಟೆ, ಡಿ.ಎನ್. ನಟರಾಜು, ಓಲೆ ಮಹದೇವು, ದಾಸ್, ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಕೆ.ಮಂಜುನಾಥ್, ಅಂತಾರಾಷ್ಟ್ರೀಯ ಜಾನಪದ ಗಾಯಕ ಸಿ.ಎಂ. ನರಸಿಂಹಮೂರ್ತಿ, ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ, ಮಾನವ ಬಂಧುತ್ವ ವೇದಿಕೆಯ ಅಧ್ಯಕ್ಷ ಸುಭಾಷ್ ಮಾಡ್ರಳ್ಳಿ, ಸೋಮಣ್ಣ, ನಾಗರಾಜು, ಸಿದ್ದರಾಜು ಇತರರಿದ್ದರು.

ಹಬ್ಬ, ಮದುವೆಯಲ್ಲಿ ಸಂವಿಧಾನ ಪೀಠಿಕೆ ಓದುವ ಪರಿಪಾಠವಾಗಬೇಕು

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ

ಚಾಮರಾಜನಗರ: ಸಂವಿಧಾನದ ಮಹತ್ವ ಪ್ರತಿ ಮನೆ ಮನೆಗೆ ತಲುಪಬೇಕು. ಹಬ್ಬ, ಮದುವೆಯಲ್ಲಿ ಸಂವಿಧಾನ ಪೀಠಿಕೆ ಓದುವ ಪರಿಪಾಠವಾಗಬೇಕು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಸಂವಿಧಾನ ಉಳಿವಿಗಾಗಿ ಭೀಮ ಸಂಕಲ್ಪ ಸಮಾವೇಶದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರು ಸತತ ಪ್ರಯತ್ನ, ಸಂಘರ್ಷದ ಮೂಲಕ ರಚಿಸಿ ಕೊಟ್ಟಿರುವ ಸಂವಿಧಾನವನ್ನು ಉಳಿಸಿಕೊಳ್ಳಬೇಕು. ಸಂವಿಧಾನ ಬಗ್ಗೆ ಜಾಗೃತಿ ಮೂಡಿಸಬೇಕು. ಸಂವಿಧಾನದ ಮಹತ್ವ, ರಕ್ಷಣೆ, ಅನುಕೂಲವನ್ನು ಮಕ್ಕಳಿಗೆ, ಕುಟುಂಬಕ್ಕೆ ತಿಳಿಸಿಕೊಡುವ ಕೆಲಸ ಆಗಬೇಕಿದೆ ಎಂದರು.

ನಿಮ್ಮೆಲ್ಲರ ಸಹಕಾರದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಸಂವಿಧಾನ ಉಳಿಸುವ, ನಿಮ್ಮೆಲ್ಲರಿಗೂ ರಕ್ಷಣೆ ಕೊಡುವ ಸರ್ಕಾರ ಬಂದಿದೆ. ಮುಂದಿನ ದಿನಗಳಲ್ಲೂ ಸಂವಿಧಾನ ರಕ್ಷಣೆ ಮಾಡುವ ಪಕ್ಷ ಅಧಿಕಾರಕ್ಕೆ ಬರಬೇಕು. ಅದಕ್ಕೆ ನಿಮ್ಮೆಲ್ಲರ ಸಹಕಾರ ಬೇಕಿದೆ ಎಂದರು.

ಕಳೆದ ಬಿಜೆಪಿ ಸರ್ಕಾರ ವಿದ್ಯಾರ್ಥಿ ವೇತನ, ಭೂ ಒಡೆತನ ಯೋಜನೆ ರದ್ದು ಮಾಡಿತ್ತು. ಅದನ್ನು ನಮ್ಮ ಸರ್ಕಾರ ಉಳಿಸಿದೆ. ಆಯವ್ಯಯದಲ್ಲಿ ಎಸ್‌ಸಿ, ಎಸ್‌ಟಿ ಜನಸಂಖ್ಯೆ ಅನುಗುಣವಾಗಿ ಅನುದಾನ ಮೀಸಲಿಡಲಾಗಿದೆ ಎಂದರು. ಪ್ರತಿ ಮನೆ ಮನೆಯಲ್ಲೂ ಅಂಬೇಡ್ಕರ್ ಭಾವಚಿತ್ರ ಇಟ್ಟು ಸಂವಿಧಾನ ಪೀಠಿಕೆಯನ್ನು ಸಣ್ಣ ಮಕ್ಕಳಿಗೆ ಓದಿಸಿದರೆ ಬಹಳಷ್ಟು ಬದಲಾವಣೆ ಸಾಧ್ಯವಾಗುತ್ತದೆ ಎಂದರು.

ಬಿಜೆಪಿ ಹೈಕಮಾಂಡ್ ನನಗೇ ಚಾ.ನಗರ ಲೋಕಸಭಾ ಟಿಕೆಟ್ ನೀಡಲಿದೆ

ಮಾಜಿ ಸಚಿವ ಕೋಟೆ ಎಂ.ಶಿವಣ್ಣ ವಿಶ್ವಾಸ



ಗುಂಡ್ಲುಪೇಟೆ, ಆ.20– ನಾನು ಮುಂಬರುವ ಲೋಕಸಭಾ ಚುನಾವಣೆಯ ಚಾಮರಾಜನಗರ ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದು, ನನ್ನ ಹಿರಿತನ, ರಾಜಕೀಯ ಅನುಭವ ನೋಡಿ ಬಿಜೆಪಿ ಹೈಕಮಾಂಡ್ ನನಗೆ ಟಿಕೆಟ್ ನೀಡಲಿದೆ ಎಂದು ಮಾಜಿ ಸಚಿವ ಕೋಟೆ ಎಂ.ಶಿವಣ್ಣ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಬಾರಿ ತಿ.ನರಸೀಪುರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವಂತೆ ಹೈಕಮಾಂಡ್ ತಿಳಿಸಿತ್ತು. ಆದರೆ ಆದರೆ ಪೂರ್ವ ಸಿದ್ಧತೆ ಇಲ್ಲದೇ ತಕ್ಷಣ ಕಣಕ್ಕಿಳಿಯುವುದು ಸೂಕ್ತವಲ್ಲವೆಂದು ನನಗೆ ಮುಂಬರುವ ಲೋಕಸಭಾ ಚುನಾವಣೆಗೆ ಅವಕಾಶ ಮಾಡಿಕೊಡುವಂತೆ ವರಿಷ್ಠರಿಗೆ ತಿಳಿಸಿದ್ದೆ. ಹಾಗಾಗಿ ಕಳೆದ ಚುನಾವಣೆಯಲ್ಲಿ ಚುನಾವಣಾ ಉಸ್ತುವಾರಿಯಾಗಿ ಜಿಲ್ಲೆಗೆ ನೇಮಕ ಮಾಡಿದ್ದರು. ಅಲ್ಲದೇ ನಳೀನ್ ಕುಮಾರ್ ಕಟೀಲ್ ಹಾಗೂ ಸಂತೋಷ್ ಅವರು ಮುಂದಿನ ಚುನಾವಣೆಗಾಗಿ 8 ವಿಧಾನಸಭಾ ಕ್ಷೇತ್ರದಲ್ಲಿ ಸಕ್ರಿಯವಾಗಿ ಓಡಾಡುವಂತೆ ಹೇಳಿದ್ದರು ಎಂದರು.

ಜನ ಮೋದಿ ಆಡಳಿತ ಮೆಚ್ಚಿದ್ದಾರೆ: ಚಾಮರಾಜನಗರ ಲೋಕಸಭಾ ಕ್ಷೇತ್ರ ಬಿಜೆಪಿಗೆ ಪೂರಕವಾಗಿದೆ. ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚಿನ ಸ್ಥಾನ ಗೆದ್ದಿರಬಹುದು. ಆದರೆ ಜನರಿಗೆ ಬೇಕಿರುವುದು ಸದೃಢ ಭಾರತ. ಮೋದಿಯವರು ಪ್ರಧಾನಿಯಾದ ನಂತರ ವಿಶ್ವವೇ ಭಾರತದತ್ತ ತಿರುಗಿ ನೋಡುವಂತಾಗಿದೆ. ಉಗ್ರಗಾಮಿ ಚಟುವಟಿಕೆ ಕ್ಷೀಣಿಸಿದೆ. ಎಷ್ಟೇ ಘಟಬಂಧನವಾದರೂ ದೇಶದ ಮುಂದಿನ ಪ್ರಧಾನಿ ಮೋದಿಯವರು. ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದರು.

> ನನಗೆ 1985 ರಲ್ಲಿ ಕಾಂಗ್ರೆಸ್ ಟಿಕೆಟ್ ಕೊಡಿಸಿದವರು ಸಂಸದ ಶ್ರೀನಿವಾಸ್ ಪ್ರಸಾದ್. ಅವರು ಮುಂದಿನ ಚುನಾವಣೆಯಲ್ಲಿ ಸ್ಪರ್ಧೆ ಮಾಡಲ್ಲ ಎಂದಿದ್ದಾರೆ. ಅವರಿಗೆ ದೊಡ್ಡ ಮನಸ್ಸಿದೆ. ಯಾರೇ ಅಭ್ಯರ್ಥಿಯಾದರೂ ಸಂಪೂರ್ಣ ಸಹಕಾರ ನೀಡುತ್ತಾರೆ ಎಂಬ ನಂಬಿಕೆ ಇದೆ.
>
> **-ಕೋಟೆ ಎಂ.ಶಿವಣ್ಣ,** ಮಾಜಿ ಸಚಿವರು.

ಸಚಿವ ಹೆಚ್.ಸಿ.ಮಹದೇವಪ್ಪ ಮೊನ್ನೆ ಹಂಗಳದಲ್ಲಿ ಮಾತನಾಡುವಾಗ ಸಂವಿಧಾನದ ಆಶಯಗಳ ಬಗ್ಗೆ ಮಾತನಾಡಿದ್ದಾರೆ. ಅವರದೇ ಸರ್ಕಾರ ಎಸ್ಸಿಪಿ, ಟಿಎಸ್‌ಪಿ ಹಣ ದುರುಪಯೋಗ ಪಡಿಸಿಕೊಂಡಿದೆ. ಮೊದಲು ಅದರ ಬಗ್ಗೆ ಮಾತನಾಡಲಿ, ನನಗೆ ಪಕ್ಷ ಟಿಕೆಟ್ ನೀಡಿದರೆ ನನ್ನ ವಿರುದ್ಧ ಹೆಚ್.ಸಿ.ಮಹದೇವಪ್ಪ ನಿಂತರೂ ನಾನೇ ಗೆಲ್ಲುತ್ತೇನೆ ಎಂಬ ವಿಶ್ವಾಸವಿದೆ ಎಂದರು.

ಈ ವೇಳೆ ಜಿಲ್ಲಾ ಮಾದಿಗ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ರಾಜಶೇಖರ್, ಮಾಜಿ ಪುರಸಭಾ ನಾಮ ನಿರ್ದೇಶಿತ ಸದಸ್ಯ ಸಿದ್ದಯ್ಯ, ಕಾನೂನು ಸಲಹೆಗಾರ, ವಕೀಲರಾದ ಸಿದ್ದೇಶ್, ಸಿದ್ದಯ್ಯ, ಮುಖಂಡರಾದ ಗುರುಲಿಂಗಯ್ಯ, ಶಿವಣ್ಣ, ರಾಚಯ್ಯ, ಸಿದ್ದಯ್ಯ, ಕೃಷ್ಣ, ನಾಗರಾಜು, ರಂಗಸ್ವಾಮಿ, ಮಹದೇವಯ್ಯ, ಪ್ರಭು, ವೆಂಕಟೇಶ್, ಲಿಂಗರಾಜು ಮತ್ತಿತರರಿದ್ದರು.

ಚಾ.ನಗರದಲ್ಲಿ ಅದ್ದೂರಿ ಪುನ್ನಾಡು ಸಾಹಿತ್ಯ ಮೇಳ



ಚಾಮರಾಜನಗರ, ಆ.20– ನಗರದ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಕರ್ನಾಟಕ ಜಾನಪದ ಪರಿಷತ್ತು ಹಾಗೂ ರಂಗವಾಹಿನಿ ಸಹಯೋಗದಲ್ಲಿ ಚಾಮರಾಜನಗರ ಬೆಳ್ಳಿಹಬ್ಬದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಪೊನ್ನಾಡು ಸಾಹಿತ್ಯದ ಇತಿಹಾಸದ ಬಗ್ಗೆ ಬೆಳಕು ಚೆಲ್ಲಲಾಯಿತು.

ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಹಿ.ಶಿ.ರಾಮಚಂದ್ರಗೌಡ ಮಾತನಾಡಿ, ಜ್ಞಾನದ ಜೊತೆಗೆ ಇಂದು ವಿಜ್ಞಾನವು ಅಗತ್ಯವಾಗಿದ್ದು, ಅವುಗಳ ಮೂಲ ಹುಡುಕಿಕೊಂಡು ಹೋದಂತೆ ಮನುಷ್ಯ ಗಟ್ಟಿಯಾಗಿ ಬೆಳೆಯುತ್ತಾ ಹೋಗುತ್ತಾನೆ ಎಂದರು.

ಈ ಭಾಗದ ಮಲೆ ಮಹದೇಶ್ವರಸ್ವಾಮಿ ಅವರನ್ನು ಸಾಂಸ್ಕೃತಿಕ ರಾಯಭಾರಿಗಳು ಎನ್ನಬಹುದು. ಅವರು ಜಾತಿ, ಧರ್ಮ ಮೀರಿದವರು, ಒಕ್ಕಲುತನದ ಸಂಸ್ಕೃತಿ ಸಾರಿದವರು. ಮಂಟೇಸ್ವಾಮಿ ಒಕ್ಕಲುತನಕ್ಕೆ ಬೇಕಾಗಿದ್ದ ಕಬ್ಬಿಣದ ಪರಿಕರ ಕೊಟ್ಟವರು. ಇವರು ನಿಜವಾದ ತಂತ್ರಜ್ಞರು ಎಂದು ಬಣ್ಣಿಸಿದರು.

ಸಾಹಿತಿ ಡಾ.ರಾಜಶೇಖರ ಜಮದಂಡಿ ಮಾತನಾಡಿ, ಜಿಲ್ಲೆಯ ಮಾಂಬಳ್ಳಿಯಲ್ಲಿ ಕ್ರಿ.ಶ.550ರಲ್ಲಿ ಪುನ್ನಾಡು ಎಂಬ ಸಾಮ್ರಾಜ್ಯ ಇತ್ತು. 14ನೇ ಶತಮಾನದವರೆಗೂ ಇದು ಅಸ್ತಿತ್ವದಲ್ಲಿತ್ತು. ಪುನ್ನಾಡು ಎಂಬ ಪ್ರದೇಶ ಕಾವೇರಿ ಮತ್ತು ಕಬಿನಿ ನದಿಗಳ ನಡುವಿನ ಪ್ರದೇಶದ ರಾಜ್ಯವಾಗಿತ್ತು ಎಂದರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಚಾ.ನಗರ ಕಲೆ, ಸಾಹಿತ್ಯದ ನೆಲೆಬೀಡಾಗಿದೆ. ಇಲ್ಲಿ ಸಾಕಷ್ಟು ಸಾಹಿತಿಗಳು ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಜಾನಪದ ಪರಿಷತ್ ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ, ಆರ್.ಉಮೇಶ್, ಆರ್.ಎಂ. ರಾಜಪ್ಪ ಪ್ರಾಧ್ಯಾಪಕ ಪ್ರೊ.ಎಂ.ಶಿವಸ್ವಾಮಿ, ಮುಖಂಡ ನಾಗೇಶ್, ಕರ್ನಾಟ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ, ಪ್ರಧಾನ ಕಾರ್ಯದರ್ಶಿ ಸಿ.ಎಂ. ರಾಘವೇಂದ್ರ ಸೇರಿದಂತೆ ಇತರರಿದ್ದರು.

ಒಂದನೇ ಪುಟದಿಂದ

ಸಿಐಡಿ ವಶಕ್ಕೆ

ಸಿಐಡಿ ಅಧಿಕಾರಿಗಳು ಮಂಡ್ಯದ ಕೃಷಿ ಇಲಾಖೆಯ ಎಲ್ಲಾ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಿದ್ದರು. ರಾಜ್ಯಪಾಲರ ಕಚೇರಿಗೆ ಪತ್ರ ಬರೆದವರ್ಯಾರು? ಕೃಷಿ ಅಧಿಕಾರಿಗಳೇ ಪತ್ರ ಬರೆದಿದ್ದಾರಾ ಅಥವಾ ಅವರ ಹೆಸರಿನಲ್ಲಿ ಇನ್ಯಾರಾದರೂ ಪತ್ರ ಬರೆದಿದ್ದಾರಾ ಎಂಬ ನಿಟ್ಟಿನಲ್ಲಿ ಸಮಗ್ರ ತನಿಖೆ ಮಾಡಿದ್ದರು. ಲೆಟರ್ ಪೋಸ್ಟ್ ಆದ ಮೈಸೂರಿನ ಸರಸ್ವತಿಪುರಂನ ಅಂಚೆ ಇಲಾಖೆಯ ಅಧಿಕಾರಿಗಳನ್ನು ಸಹ ವಿಚಾರಣೆ ನಡೆಸಿದ್ದರು. ಈ ಸಂದರ್ಭ ಕಾಂಗ್ರೆಸ್ಸಿಗರು ಮಾಜಿ ಸಿಎಂ ಕುಮಾರಸ್ವಾಮಿ ಹಾಗೂ ಜೆಡಿಎಸ್ ಮುಖಂಡರೇ ಪತ್ರ ಬರೆಸಿದ್ದಾರೆ ಎಂದು ಆರೋಪ ಕೂಡ ಮಾಡಿದ್ದರು.

ಪತ್ರ ಬರೆದವರ್ಯಾರೆಂಬುದು ತಿಳಿದು ಬಂದಿಲ್ಲ: ಈ ಬಗ್ಗೆ ಮಂಡ್ಯ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ರಾಜ್ಯ ಪಾಲರಿಗೆ ಪತ್ರ ಬರೆದಿರೋದು ಮೈಸೂರು ಅಧಿಕಾರಿಗಳು ಎಂಬ ವಿಚಾರ ನನಗೆ ಇನ್ನೂ ತಿಳಿದು ಬಂದಿಲ್ಲ. ಸಿಐಡಿ ಅಧಿಕಾರಿಗಳು ಇನ್ನೂ ಸರ್ಕಾರಕ್ಕೆ ವರದಿ ಸಲ್ಲಿಸಿಲ್ಲ. ಮೈಸೂರಿನ ಇಬ್ಬರು ಅಧಿಕಾರಿಗಳು ಮಂಡ್ಯ ದವರ ಹೆಸರಿನಲ್ಲಿ ಪತ್ರ ಬರೆದಿದ್ದಾರೆ ಎಂದು ಮಾಧ್ಯಮಗಳ ಮೂಲಕ ನನಗೆ ಗೊತ್ತಾಗಿದೆ ಎಂದು ಸ್ಪಷ್ಟ ಪಡಿಸಿದರು. ಇದಕ್ಕೆ ಜೆಡಿಎಸ್ ಅಥವಾ ಬೇರೆಯವರು ಪ್ರಚೋದಿಸಿದರಾ ಎನ್ನುವುದನ್ನು ತಿಳಿದುಕೊಳ್ಳುತ್ತೇನೆ. ನನ್ನ ಮೇಲೆ ಕೆಲವರು ಬೇಕು ಅಂತಾ ತೀಟೆ ಮಾಡಲು ನಿಂತಿದ್ದಾರೆ. ಅಂತಹವರನ್ನು ನಾನು ಒಪ್ಪುವ ಅವಶ್ಯಕತೆ ಇಲ್ಲ. ನಾನು ಗೌರವವಾಗಿ ನಡೆದುಕೊಳ್ಳುತ್ತೇನೆ. ನಮ್ಮ ಮುಂದೆ ಕಾವೇರಿ, ಬರಗಾಲದ ವಿಷಯಗಳಿವೆ. ಅವುಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಕು. ಚಲುವರಾಯಸ್ವಾಮಿ ಇನ್ನೊಬ್ಬರ ದ್ವೇಷಕ್ಕೆ ರಾಜಕಾರಣ ಮಾಡುವುದಿಲ್ಲ. ನಾನು ಸೋತಾಗ ಜೆಡಿಎಸ್‌ನವರು ಏಳು ಜನ ಗೆದ್ದಿದ್ದರು. ನಾನು ಐದು ವರ್ಷ ಅವರ ವಿರುದ್ಧ ಒಂದು ಮಾತು ಆಡಲ್ಲ ಎಂದರು. ಕೃಷಿ ಇಲಾಖೆ ಅಧಿಕಾರಿಗಳಾದ ಗುರುಪ್ರಸಾದ್ ಮತ್ತು ಸುದರ್ಶನ್ ಅವರನ್ನು ವಶಕ್ಕೆ ಪಡೆದಿರುವುದಾಗಿ ಸಿಐಡಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ ಎಂದು ಇಲಾಖೆ ಜಂಟಿ ನಿರ್ದೇಶಕ ಚಂದ್ರಶೇಖರ್ ಸ್ಪಷ್ಟಪಡಿಸಿದ್ದಾರೆ.

ಸುಲಿಗೆ ಅಸಲಿ ಎನ್ನುವುದು ಸಾಬೀತು

ಎಲ್ಲಾ ಮಾಹಿತಿ ಸೋರಿಕೆ ಮಾಡಿತ್ತಾರೋ? ಇದೇನು ತನಿಖೆಯಾ? ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದೇನು ಸರ್ಕಾರವಾ? ಇವರ ಮೂಗಿನ ನೇರಕ್ಕೆ, ಅದೂ ವಿದ್ಯುತ್ ವೇಗದಲ್ಲಿ, ಅದೂ ಕೇವಲ ಒಂದೇ ವಾರದಲ್ಲಿ ನಮ್ಮ ಸಿಐಡಿ ಪೊಲೀಸರು ಎಲ್ಲವನ್ನೂ ಕಂಡು ಹಿಡಿದುಬಿಟ್ಟಿದ್ದಾರೆ. ಅದಕ್ಕೆ ಪೂರಕವಾಗಿ ಆರೋಪಿ ಸಚಿವರು ಹೇಳಿಕೆ ಕೊಡುತ್ತಿದ್ದಾರೆ. ಇದು ಹಳ್ಳ ಹಿಡಿಯದೆ ಇನ್ನೇನಾಗುತ್ತದೆ ಎಂದು ಕಿಡಿಕಾರಿದರು.

ಸರ್ಕಾರದ ಭ್ರಷ್ಟಾಚಾರ ಬಯಲಿಗೆ ತಂದ ಆ ಮೈಸೂರು ಅಧಿಕಾರಿಗಳನ್ನು ನಾನು ಅಭಿನಂದಿಸುತ್ತೇನೆ. ಅವರಿಗೆ ನಾನು ಹೇಳುವುದು ಇಷ್ಟೇ. ಹೇಗೂ ರಾಜ್ಯಪಾಲರಿಗೆ ದೂರಿನ ಪತ್ರ ನೀವೇ ಬರೆದಿದ್ದೀರಿ ಎನ್ನುವುದು ಗೊತ್ತಾಗಿ ಹೋಗಿದೆ. ಈಗಲಾದರೂ ನಡೆದಿರುವುದನ್ನು ಧೈರ್ಯವಾಗಿ ಹೊರಗೆ ಹೇಳಿ. ಕಷ್ಟಪಟ್ಟು, ಬಡತನದಲ್ಲಿ ಓದಿ ಸರಕಾರಿ ಕೆಲಸಕ್ಕೆ ಬಂದಿದ್ದೀರಿ. ಆರೂವರೆ ಕೋಟಿ ಜನರ ತೆರಿಗೆ ಹಣದಿಂದ ನಿಮಗೆ ಸಂಬಳ ಕೊಡಲಾಗುತ್ತಿದೆ ಎಂಬುದನ್ನು ಮನನಗೊಂಡು ಜನರ ಪರವಾಗಿ ಮಾತನಾಡಿ. ಸರಕಾರದಲ್ಲಿ ನಡೆಯುತ್ತಿರುವ ಕುಕೃತ್ಯಗಳ ಬಗ್ಗೆ ಸತ್ಯ ಹೇಳಿ. ಎಲ್ಲಾದರೂ ಇದಕ್ಕೆ ಅಂತಿಮ ತೆರೆ ಎಳೆಯಬೇಕು ಎಂದು ಒತ್ತಾಯ ಮಾಡಿದರು. ಹಾಗಾದರೆ, ಚಲುವರಾಯಸ್ವಾಮಿ ಅವರು ನಿಮ್ಮ ಹೆಸರನ್ನೇಕೆ ಹೇಳಿದರು ಎಂದು ಮಾಧ್ಯಮಗಳು ಕೇಳಿದ ಪ್ರಶ್ನೆಗೆ ಉತ್ತರಿಸಿದ ಕುಮಾರಸ್ವಾಮಿ, ಅವರಿಗೆ ನನ್ನದೇ ಚಿಂತೆ ಎಂದರು.

ಬಾಗಿಲು ಹಾಕಿದಂತಿದೆ ಸರ್ಕಾರದ ಕ್ರಮ

ಹಾಕಿದರೆ ಏನು ಪ್ರಯೋಜನ? ಎಂದು ಹೆಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.

ಕಾವೇರಿ ನೀರಿನಲ್ಲಿ ತಮಿಳುನಾಡು 1 ಲಕ್ಷ ಎಕರೆಯಲ್ಲಿ ಮಾತ್ರ ಬೆಳೆ ಬೆಳೆಯಬೇಕಿದೆ. ಆದರೆ ಈಗ 4 ಲಕ್ಷ ಎಕರೆಯಷ್ಟು ಹೆಚ್ಚಿಸಿಕೊಂಡು ಕಾವೇರಿ ನೀರಿನಲ್ಲಿ ಬೆಳೆ ಬೆಳೆಯುತ್ತಿದ್ದಾರೆ. ಕರ್ನಾಟಕದ ಜಲಾಶಯದಲ್ಲಿ ನೀರಿಲ್ಲದ ಈ ಸಮಯದಲ್ಲಿ ತಮಿಳುನಾಡಿಗೆ ಸಾಕಷ್ಟು ನೀರು ಬಿಟ್ಟಿರುವ ರಾಜ್ಯ ಸರ್ಕಾರ, ನೀರಿನ ಅಭಾವದಿಂದ ಬೆಳೆ ಬೆಳೆಯದಂತೆ ಕರ್ನಾಟಕದ ರೈತರಿಗೆ ಕಟ್ಟಾಜ್ಞೆ ಮಾಡುತ್ತಿದೆ. ಹೀಗಾದರೆ ನಮ್ಮ ರೈತರ ಸ್ಥಿತಿ ಏನಾಗಬೇಕು ಎಂದು ಮರು ಪ್ರಶ್ನಿಸಿದರು. ತಮಿಳುನಾಡು ಸರ್ಕಾರ ಹೇಳಿದ ಕೂಡಲೆ ತರಾತುರಿಯಲ್ಲಿ ನೀರು ಬಿಟ್ಟಿದ್ದಾರೆ. ಮತ್ತೆ ಇನ್ನು ಒಂದು ವಾರ ನೀರು ಬಿಡಿ ಎಂದು ಕೇಳುತ್ತಾರೆ. ಹಾಗಾದರೆ ಮತ್ತೊಂದು ವಾರ ಹೀಗೆ ನೀರು ಹರಿಸುತ್ತಾರೆಯೇ ಎಂದು ಪ್ರಶ್ನಿಸಿದ ಕುಮಾರಸ್ವಾಮಿ, ರಾಜ್ಯದ ರೈತರ ಹಾಗೂ ಜನರ ಹಿತ ರಕ್ಷಿಸುವ ಬದ್ಧತೆ ಈ ಸರ್ಕಾರಕ್ಕೆ ಇದ್ದರೆ ತಮಿಳುನಾಡಿಗೆ ನೀರು ಬಿಡುತ್ತಿರಲಿಲ್ಲ ಎಂದು ಹೇಳಿದರು.

ಲೋಕಸಭಾ ಚುನಾವಣೆ ಸೇರಿದಂತೆ ಹಲವು ಚುನಾವಣೆಗಳಲ್ಲಿ ಜೆಡಿಎಸ್, ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳುವ ವಿಚಾರ ಈಗ ಅಪ್ರಸ್ತುತ. ಮೈತ್ರಿ ಮಾಡಿಕೊಳ್ಳುವ ಪ್ರಸ್ತಾಪವನ್ನು ನಾವು ಮಾಡಿಲ್ಲ, ಬಿಜೆಪಿಯವರು ಸಹ ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು. ಸರ್ಕಾರದ ಜನ ವಿರೋಧಿ ನೀತಿ ವಿರುದ್ಧ ಜೆಡಿಎಸ್ ಪಕ್ಷ ಹೋರಾಟ ಮಾಡುತ್ತದೆ. ಪಕ್ಷದ ನಾಯಕರ 4 ತಂಡಗಳನ್ನು ರಚಿಸಿ ರಾಜ್ಯಾದ್ಯಂತ ಪ್ರವಾಸ ಮಾಡಲಾಗುವುದು. ಈ ಮೂಲಕ ಸರ್ಕಾರದ ಜನ ವಿರೋಧಿ ಧೋರಣೆಯನ್ನು ಜನತೆಗೆ ತಿಳಿಸಲಾಗುವುದು ಎಂದು ಹೇಳಿದರು. ಇದಕ್ಕೂ ಮೊದಲು ಕುಮಾರಸ್ವಾಮಿ ಅವರು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಭೇಟಿ ಮಾಡಿ, ಆಶೀರ್ವಾದ ಪಡೆದರು. ಕುಮಾರಸ್ವಾಮಿ ಅವರು ಈ ವೇಳೆ ಸುತ್ತೂರು ಶ್ರೀಗಳ ಜೊತೆ ಸುಮಾರು ಅರ್ಧ ಗಂಟೆಗಳ ಕಾಲ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಸಾ.ರಾ.ಮಹೇಶ್, ಮಾಜಿ ಮೇಯರ್ ಎಂ.ಜೆ.ರವಿಕುಮಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಈಗ ನಾಯಿ ಕಂಟಕ

ಫೌಂಟೇನ್ ಕಡೆ ಹೋಗುವ ರಸ್ತೆಗೆ ಬ್ಯಾರಿಕೇಡ್ ಅಳವಡಿಸಿ ಯಾರೂ ಆ ಕಡೆಗೆ ಹೋಗದಂತೆ ಕ್ರಮ ವಹಿಸಿದರು. ಆದರೆ ಶ್ವಾನ ಮತ್ತೊಂದು ರಸ್ತೆಯಲ್ಲಿ ಕಾಣಿಸಿಕೊಂಡು ಆತಂಕ ಹೆಚ್ಚಿಸಿತು. ಇದರಿಂದ ಅಧಿಕಾರಿಗಳು ರಾತ್ರಿ 7 ಗಂಟೆಗೆ ಕೆಆರ್‌ಎಸ್ ಮುಖ್ಯದ್ವಾರ ಬಂದ್ ಮಾಡಿ, ಉದ್ಯಾನದಲ್ಲಿದ್ದ ಪ್ರವಾಸಿಗರನ್ನು ಹೊರಗೆ ಕಳುಹಿಸಿದರು. ಶ್ವಾನ ದಾಳಿಯಿಂದ ಗಾಯಗೊಂಡವರಲ್ಲಿ 7 ಜನರನ್ನು 108 ಆಂಬುಲೆನ್ಸ್ ಮೂಲಕ ಸ್ಥಳೀಯ ಆಸ್ಪತ್ರೆಗೆ ಕರೆದೊಯ್ದು, ಚಿಕಿತ್ಸೆ ಕೊಡಿಸಲಾಯಿತು. ಸಿಬ್ಬಂದಿ ಮುಖ್ಯದ್ವಾರದ ಬಳಿ ನಿಂತು ನಾಯಿ ಕಡಿತಕ್ಕೊಳಗಾಗಿರುವವರು ಆಸ್ಪತ್ರೆಗೆ ಬರುವಂತೆ ಧ್ವನಿವರ್ಧಕದಲ್ಲಿ ಪ್ರಕಟಿಸಿದರು. ಆದರೆ, ಅಷ್ಟರಲ್ಲಾಗಲೇ ಉಳಿದವರು ತಮ್ಮ ವಾಹನದಲ್ಲೇ ಚಿಕಿತ್ಸೆಗಾಗಿ ಮೈಸೂರು ಹಾಗೂ ಶ್ರೀರಂಗಪಟ್ಟಣ ದತ್ತ ತೆರಳಿದರು ಎಂದು ಪ್ರತ್ಯಕ್ಷದರ್ಶಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

20 ಶ್ವಾನಗಳ ಸ್ಥಳಾಂತರಿಸಲಾಗಿತ್ತು: ಆ.1 ಮತ್ತು 2ರಂದು ಮೈಸೂರಲ್ಲಿ ನಡೆದ ಜಿ–20 ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದ ವಿವಿಧ ರಾಷ್ಟ್ರಗಳ ಪ್ರತಿನಿಧಿಗಳು ಕೆಆರ್‌ಎಸ್‌ಗೆ ಬೇಟಿ ನೀಡಿದ್ದ ಸಂದರ್ಭದಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ 20 ಶ್ವಾನಗಳನ್ನು ಹಿಡಿದು, ಸ್ಥಳಾಂತರಿಸಲಾಗಿತ್ತು. ಕೆಆರ್‌ಎಸ್ ಉದ್ಯಾನದ ಅಕ್ಕಪಕ್ಕ ಮೀನು, ಮಾಂಸದ ಅಂಗಡಿಗಳಿರುವುದರಿಂದ ನಾಯಿಗಳ ಸಂಖ್ಯೆ ಹೆಚ್ಚಾಗಿದ್ದು, ಅವುಗಳು ಉದ್ಯಾನಕ್ಕೂ ಬರುತ್ತಿರುತ್ತವೆ. ದಾಳಿ ನಡೆಸಬಹುದಾದ ನಾಯಿಗಳನ್ನು ಗುರುತಿಸಿ, ಅವುಗಳನ್ನು ಹಿಡಿದು ಸ್ಥಳಾಂತರಿಸುವ ಕೆಲಸ ಮಾಡಲಾಗುತ್ತಿದೆ. ಆದರೆ ಭಾನುವಾರ ಶ್ವಾನವೊಂದು ಹೆಚ್ಚು ಜನರನ್ನು ನೋಡಿ ಗಾಬರಿಗೊಂಡು 5–6 ಮಂದಿಗೆ ಕಚ್ಚಿದೆ. ಈ ವೇಳೆ ಉತ್ತರ ಭಾರತದ ಮಹಿಳೆಯೊಬ್ಬರು ಗಾಬರಿಯಿಂದ ಬಿದ್ದು, ಗಾಯಗೊಂಡಿದ್ದು, ಕಡಿತಕ್ಕೊಳಗಾದವರಿಗೆ ಚಿಕಿತ್ಸೆ ಕೊಡಿಸಲಾಗಿದೆ ಎಂದು ಕೆಆರ್‌ಎಸ್ ಉದ್ಯಾನದ ಉಸ್ತುವಾರಿ ಸಿಬ್ಬಂದಿ ತಿಳಿಸಿದ್ದಾರೆ.

ವಿದ್ಯುತ್ ಮೀಟರ್ ವ್ಯವಸ್ಥೆ ಜಾರಿಗೆ ಸಿದ್ಧತೆ

ಯಾವುದೇ ದೋಷಗಳು ಕಂಡ ಬಾರದ ಕಾರಣ ಈಗ ಪ್ರೀಪೇಯ್ಡ್ ಸ್ಮಾರ್ಟ್ ವಿದ್ಯುತ್ ಮೀಟರ್ ಅಳವಡಿಸಲು ಅಧಿಸೂಚನೆ ಹೊರಡಿ ಸಿದೆ. ಈ ಸಂಬಂಧ 30 ದಿನದೊಳಗೆ ಜನರು ಆಕ್ಷೇಪಣೆ, ಅಭಿಪ್ರಾಯಗಳನ್ನು ಕೆಇ ಆರ್‌ಸಿಗೆ ಸಲ್ಲಿಸಬಹುದು ಎಂದು ತಿಳಿಸಲಾಗಿದೆ. ಮೈಸೂರಿನ ಚೆಸ್ಕಾಂನಲ್ಲಿ 32 ಲಕ್ಷ ವಿದ್ಯುತ್ ಗ್ರಾಹಕರಿದ್ದಾರೆ. ಚೆಸ್ಕಾಂ ಸೇರಿದಂತೆ ಕರ್ನಾಟಕದ ಎಲ್ಲಾ ಎಸ್ಕಾಂಗಳಲ್ಲಿ ಸುಮಾರು ಎರಡು ಕೋಟಿ ವಿದ್ಯುತ್ ಗ್ರಾಹಕರಿದ್ದಾರೆ. ಎಸ್ಕಾಂಗಳು ಎಲ್ಲಾ ಗ್ರಾಹಕರಿಂದ ಠೇವಣಿಯಾಗಿ 9108 ಕೋಟಿ ರೂ ಸಂಗ್ರಹಿಸಿದೆ. ಈಗ ಪ್ರಿ ಪೇಯ್ಡ್ ಸ್ಮಾರ್ಟ್ ವಿದ್ಯುತ್ ಮೀಟರ್ ಅಳ ವಡಿಸಿಕೊಳ್ಳುವವರಿಗೆ ಎಸ್ಕಾಂಗಳು ಗ್ರಾಹಕರಿಂದ ಸಂಗ್ರಹಿಸಿರುವ ಠೇವಣಿ ಹಣವನ್ನು ವಾಪಸು ನೀಡುತ್ತದೆ. ಜೊತೆಗೆ ಹೊಸದಾಗಿ ವಿದ್ಯುತ್ ಮೀಟರ್ ಅಳವಡಿಸಿಕೊಳ್ಳುವವರು ಠೇವಣಿ ಹಣವನ್ನು ಪಾವತಿಸುವಂತಿಲ್ಲ. ಆದರೆ ಪ್ರೀಪೇಯ್ಡ್ ಸ್ಮಾರ್ಟ್ ವಿದ್ಯುತ್ ಮೀಟರ್ ಅಳವಡಿಕೆಯನ್ನು ಕೆಇಆರ್‌ಸಿ ಸದ್ಯಕ್ಕೆ ಕಡ್ಡಾಯ ಮಾಡಿಲ್ಲ. ಬಯಸುವವರು ಅಳವಡಿಸಿ ಕೊಂಡು ಅದರ ಉಪಯೋಗಪಡೆಯಬಹುದು ಎಂದು ತಿಳಿಸಿದೆ.

ಒಟ್ಟಾರೆ ಮೊಬೈಲ್ ರೀಚಾರ್ಜ್ ಮಾಡಿಸಿಕೊಂಡಂತೆ ಈಗ ವಿದ್ಯುತ್ ಅನ್ನು ಚಾರ್ಜ್ ಮಾಡಿಸಿಕೊಳ್ಳಬಹುದು. ಇದು ಕೇಂದ್ರ ಸರ್ಕಾರದ ವಿದ್ಯುತ್ ಕಾಯ್ದೆಯ ನಿಬಂಧನೆಯಾಗಿದೆ. ಹಂತಹಂತವಾಗಿ ದೇಶದ ಎಲ್ಲಾ ರಾಜ್ಯಗಳಲ್ಲಿ ಇದನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಈಗ ಆರಂಭದಲ್ಲಿ ಜನರ ಆಯ್ಕೆಯ ವಿವೇಚನೆಗೆ ಬಿಡುವ ಸರ್ಕಾರ ಮುಂದೊಂದು ದಿನ ಇದನ್ನು ಕಡ್ಡಾಯ ಮಾಡುವುದರಲ್ಲಿ ಸಂಶಯವಿಲ್ಲ.

ಜಾತಿ, ಹಣಬಲ ಇಲ್ಲದವರೂ ಪ್ರಜಾಪ್ರಭುತ್ವದಲ್ಲಿ ಶೋಷಿತರ ಪರ ಆಡಳಿತಕ್ಕೆ 'ಅರಸರು' ಸಾಕ್ಷೀಭೂತರಾಗಿದ್ದಾರೆ

● ಮೈಸೂರು ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಗುಣಗಾನ ● ಎಂಟು ವರ್ಷಗಳ ಅರಸರ ಆಳ್ವಿಕೆ ಜಗತ್ತಿಗೆ ಮಾದರಿ



ಮೈಸೂರು,ಆ.20(ಎಂಟಿವೈ)– ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು, ಜಾತಿ ಹಾಗೂ ಹಣ ಬೆಂಬಲ ವಿಲ್ಲದಿದ್ದರೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶೋಷಿತರ, ದಮನಿತರ ಕಾಳಜಿಯುಳ್ಳ ಆಡಳಿತ ನಡೆಸಬಹುದೆಂಬುದನ್ನು ತಮ್ಮ ಅಧಿಕಾರಾವಧಿಯಲ್ಲಿ ಜಗತ್ತಿಗೆ ತೋರಿಸಿಕೊಟ್ಟ ಮಹಾನ್ ಸಮಾಜ ಸುಧಾರಕ ಎಂದು ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಮಾಜಿ ಮುಖ್ಯಮಂತ್ರಿ ಡಿ.ದೇವ ರಾಜ ಅರಸ್ ಅವರ 108ನೇ ಜನ್ಮ ದಿನದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದಲ್ಲಿ 1915ರಲ್ಲಿ ಜನಿಸಿದ ಡಿ.ದೇವರಾಜ ಅರಸ್ ವಿದ್ಯಾರ್ಥಿ ಜೀವನದಲ್ಲಿ ಸಂಭ್ರಮಿಸದೆ, ಸಾರ್ವಜನಿಕರ ಹಿತಕಾಯುವ ಹೋರಾಟ, ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

1952ರಲ್ಲಿ ಹುಣಸೂರು ಕ್ಷೇತ್ರದಿಂದ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದರು. 1962ರಲ್ಲಿ ಮುಖ್ಯಮಂತ್ರಿಯಾಗಿದ್ದ ನಿಜಲಿಂಗಪ್ಪ ಅವರ ಸಂಪುಟದಲ್ಲಿ ಸಚಿವರಾಗಿ ವಿವಿಧ ಇಲಾಖೆಯ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದರು. 1972ರಲ್ಲಿ ಮೊದಲು ಹಾಗೂ 1978ರಲ್ಲಿ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿದ ಡಿ.ದೇವರಾಜ ಅರಸ್ ತಮಗಿದ್ದ ಅನುಭವವನ್ನು ಆಡಳಿತದಲ್ಲಿ ತೋರ್ಪಡಿಸಿದರು. ಈ ಹಿಂದೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಅನುಭವ, ಸಂವಿಧಾನದ ಆಶಯ ಸಾಕಾರಗೊಳಿಸುವ ಮನೋಭಾವ, ಶೋಷಿತರು, ದಮನಿತರು ಅನುಭವಿಸಿದ ಸಂಕಷ್ಟವನ್ನು ಸೂಕ್ಷ್ಮವಾಗಿ ಗಮನಿಸಿದ್ದ ಡಿ.ದೇವರಾಜ ಅರಸ್ ಅವರು ಉತ್ತಮ ಆಡಳಿತ ನೀಡುವ ಮೂಲಕ ಮನೆ ಮಾತಾದರು ಎಂದರು.

ಗೊಂದಲ ಹುನ್ನಾರ: ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ಜಾತಿ, ಧರ್ಮದ ಹೆಸರಿನಲ್ಲಿ ಜನರನ್ನು ವಿಭಜಿಸಿ, ಗೊಂದಲ ಸೃಷ್ಟಿ ಮಾಡುವ ಹುನ್ನಾರ ನಡೆಯುತ್ತಿದೆ. ಇದರಿಂದ ಸಂವಿಧಾನದ ಆಶಯಗಳಿಗೆ ಭಂಗ ಉಂಟುಮಾಡುವ ಸಂಚು ಕೂಡ ನಡೆಯುತ್ತಿದೆ. ಹಣ ಮತ್ತು ಜಾತಿ ಬಲವುಳ್ಳವರ ಕೈಗೆ ರಾಜಕೀಯ ಅಧಿಕಾರ ಸಿಗದಂತೆ ನಾವು ಎಚ್ಚರವಹಿಸಬೇಕು ಎಂದು ಸಲಹೆ ನೀಡಿದರು.

ರೈತರ ಬಗ್ಗೆ ಕಾಳಜಿ: ರೈತರನ್ನು ನಾವು ದೇಶದ ಬೆನ್ನೆಲುಬು ಎಂದು ಕರೆಯುತ್ತೇವೆ. ದೇವರಾಜ ಅರಸ್ ಅವರು ಸ್ವತಃ ಉಳುಮೆ ಮಾಡುತ್ತಿದ್ದರು. ರೈತರ ಸಂಕಷ್ಟದ ಅರಿವು ಅವರಿಗೆ ಇತ್ತು. ಅದಕ್ಕಾಗಿ ರೈತರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಗ್ರಾಮೀಣ ಬದುಕಿನ ಎಲ್ಲಾ ಮಜಲುಗಳನ್ನು ಅರ್ಥ ಮಾಡಿಕೊಂಡಿದ್ದರು. ಮುಂದಿನ ಜನಾಂಗದ ಭವಿಷ್ಯದ ಬಗ್ಗೆ ಚಿಂತಿಸುತ್ತಿದ್ದರು. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಕ್ಷೇತ್ರದಲ್ಲೂ ದಮನಿತ ಸಮುದಾಯಕ್ಕೆ ನ್ಯಾಯ ಒದಗಿಸಲು ಮುಂದಾದರು. ಅವರಿಗೆ ಬಡವರ ಬಗ್ಗೆ ಇದ್ದ ಕಾಳಜಿ ಕೇವಲ ಬಾಯಿ ಮಾತಿಗಷ್ಟೇ ಸೀಮಿತವಾಗಿರದೆ, ಕಾರ್ಯಕ್ರಮದ ಮೂಲಕ ಜಾರಿಗೆ ತಂದರು. ಇದರಿಂದ ಅವರನ್ನು ರಾಜಕಾರಣಿ ಎನ್ನದೆ ಸಮಾಜ ಸುಧಾರಕ, ಸಾಮಾಜಿಕ ಚಿಂತಕ, ಸಮಾಜ ಶಾಸ್ತ್ರದ ಶ್ರೇಷ್ಠ ವೈದ್ಯರು ಎಂದು ಬಣ್ಣಿಸಿದರು.

ಸಮಾಜಕ್ಕೆ ಚಲನೆ ತಂದವರು: ವಿವಿಧ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಮೂಲಕ ಚಲನೆ ಇಲ್ಲದ ಸಮಾಜಕ್ಕೆ ಚಲನಶೀಲತೆಯನ್ನು ಉಂಟು ಮಾಡಿದರು. ಅವರ ಬದುಕು ಸುಂದರವಾಗಿರಲಿಲ್ಲ. ಸುಂದರವಾದ ಗುಲಾಬಿ ತೋಟದಲ್ಲಿ ಮುಳ್ಳಿನಂತೆ ಅವರ ಪರಿಸ್ಥಿತಿ ಇತ್ತು. ಹಲವು ಸವಾಲುಗಳು ಎದುರಾದರೂ, ಅವುಗಳನ್ನು ಸಮರ್ಥವಾಗಿ ನಿಭಾಯಿಸಿದರು. ಎಲ್.ಜಿ.ಹಾವನೂರ ವರದಿ ಜಾರಿ ಮಾಡುವ ಮೂಲಕ ಹಿಂದುಳಿದ ವರ್ಗಗಳಿಗೆ ಮೀಸಲಾತಿ ತಂದರು. ಶೈಕ್ಷಣಿಕ ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿ ಅವಕಾಶ ನೀಡಿದರು. ಇದರಿಂದ ರಾಜ್ಯದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ ಎಂದು ವಿಶ್ಲೇಷಿಸಿದರು.

ಬಡವರ ಬದುಕು ಹಸನಾಗಿಸಿದರು: ನಾಡು, ನೆಲ, ಜಲದ ಬಗ್ಗೆಯೂ ಅಪಾರ ಕಾಳಜಿಯನ್ನು ಹೊಂದಿದ್ದ ದೇವರಾಜ ಅರಸು ಅವರು, 1971ರ ನ.1ರಂದು ಏಕೀಕರಣಗೊಂಡ 'ಕರ್ನಾಟಕ ರಾಜ್ಯ'ವನ್ನು ಘೋಷಣೆ ಮಾಡಿದರು. 1979ರಲ್ಲಿ ಕನ್ನಡ ಭಾಷೆಯನ್ನು ಆಡಳಿತ ಭಾಷೆಯಾಗಿ ಘೋಷಿಸಿದರು. 1978ರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಅಧಿಕಾರಿಗಳಿಗೆ ಮುಂಬಡ್ತಿಯಲ್ಲಿ ಮೀಸಲಾತಿ ಜಾರಿಗೊಳಿಸಿದರು. ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ನಿಗಮವನ್ನು ಸ್ಥಾಪಿಸಿದರು. ರಾಜ್ಯದಲ್ಲಿ ಹಿಂದುಳಿದ ವರ್ಗಕ್ಕೆ ಶೇ.48ರಷ್ಟು ಮೀಸಲಾತಿ ನೀಡುವ ಮೂಲಕ ಬಡವರ ಬದುಕನ್ನು ಹಸನಾಗಿಸಿದರು ಎಂದರು.

ಗುಣಾತ್ಮಕ ರಾಜಕೀಯ ನಾಯಕತ್ವ ಸೃಷ್ಟಿ ಮಾಡಿ ನೊಂದ ಜನರಿಗೆ, ಶೋಷಿತರಿಗೆ, ಎಲ್ಲಾ ಸಮುದಾಯದ ಬಡವರಿಗೆ ಅವರ ಆಡಳಿತ ಸ್ಮರಣೀಯವಾಗಿದೆ.

ಅವರು ಬದುಕಿರುವವರೆಗೂ ನಿರಂತರವಾಗಿ ಹುಣಸೂರು ಕ್ಷೇತ್ರದಲ್ಲಿ ಜಯಗಳಿಸುತ್ತಾ ಬಂದರು. ಅಂತಹ ವಾತಾವರಣ ದೇಶದಲ್ಲಿ, ರಾಜ್ಯದಲ್ಲಿ ಮರುಕಳಿಸದಿದ್ದರೆ ಪ್ರಜಾಪ್ರಭುತ್ವ ಅಪಾಯಕ್ಕೆ ಸಿಲುಕಿ, ಸಂವಿಧಾನದ ಆಶಯಕ್ಕೆ ಗಂಡಾಂತರ ಒದಗುತ್ತದೆ ಎಂದು ಎಚ್ಚರಿಸಿದರು.

ಸಾಮ್ಯತೆ ಇದೆ: ದೇವರಾಜ ಅರಸರ ಆಡಳಿತ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಯಕತ್ವದ ನಮ್ಮ ಸರ್ಕಾರದ ಆಡಳಿತದಲ್ಲಿ ಸಾಮ್ಯತೆ ಇದೆ. ಅವರ ದಾರಿಯಲ್ಲೇ ನಾವು ಸಾಗುತ್ತಿದ್ದೇವೆ. ನಮ್ಮ ಯುವಕರು ಜಾತ್ಯಾತೀತ, ಪ್ರಜಾಪ್ರಭುತ್ವ, ಸಂವಿಧಾನ ಬದ್ಧ ನಡವಳಿಕೆ ಮೂಲಕ ಸ್ವಾತಂತ್ರ್ಯ ಉದ್ದೇಶ ಹಾಗೂ ಪ್ರಜಾಪ್ರಭುತ್ವವನ್ನು ರಕ್ಷಿಸಬೇಕು ಎಂದು ಕರೆ ನೀಡಿದರು.

ಇದೇ ವೇಳೆ ಮುಕ್ತ ವಿವಿಯ ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಂಯೋಜನಾಧಿಕಾರಿ ಡಾ.ಎನ್.ಆರ್. ಚಂದ್ರೇಗೌಡ, ಡಿ.ದೇವರಾಜ ಅರಸ್ ಅವರ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಶಾಸಕರಾದ ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ ಸದಸ್ಯರಾದ ಅಡಗೂರು ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮರಿತಿಬ್ಬೇಗೌಡ, ಉಪ ಮೇಯರ್ ಡಾ.ಜಿ.ರೂಪ, ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಘವೇಂದ್ರ ಇನ್ನಿತರರು ಉಪಸ್ಥಿತರಿದ್ದರು.

ಬದ್ಧತೆಯಿಂದ ಬದಲಾವಣೆ

ರಾಜ್ಯದಲ್ಲಿ 8 ವರ್ಷ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ ಡಿ.ದೇವರಾಜ ಅರಸು ಅವರಿಗೆ ಜಾತಿ ಹಾಗೂ ಹಣದ ಬಲವಿರಲಿಲ್ಲ. ಅವರಿಗಿದ್ದ ಬದ್ಧತೆಯಿಂದ ಅನೇಕ ಬದಲಾವಣೆ ತಂದರು. ಮಾಜಿ ಸಚಿವ ಬಸವಲಿಂಗಯ್ಯ ಅವರೊಂದಿಗೆ ಸೇರಿ ತಲೆ ಮೇಲೆ ಮಲ ಹೊರುವ ಪದ್ಧತಿಯನ್ನು ನಿರ್ಮೂಲನೆ ಮಾಡಿದರು. ಉಳುವವನೇ ಭೂಮಿ ಒಡೆಯ, ಭಾಗ್ಯಜ್ಯೋತಿ, 20 ಅಂಶಗಳ ಕಾರ್ಯಕ್ರಮ ಜಾರಿಗೊಳಿಸಿದರು. ದೇಶದಲ್ಲಿ ಈಗ ರಾಜಕಾರಣದಲ್ಲಿ ಜಾತಿ ಹಾಗೂ ಹಣ ಬಲವೇ ಪ್ರಾಧಾನ್ಯತೆ ಮೆರೆಯುತ್ತಿದೆ. ಇಂತಹ ಸಂದರ್ಭದಲ್ಲಿ ಡಿ.ದೇವರಾಜ ಅರಸು ಅವರು ನಮ್ಮೆಲ್ಲರಿಗೂ ಆದರ್ಶರಾಗಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಬಡವರು ಶಾಸಕರಾದರು

ಡಿ.ದೇವರಾಜ ಅರಸು ಅವರು ಬಡವ–ಬಲ್ಲಿದ ಎಂಬ ಅಸಮಾನತೆಯನ್ನು ತೊಡೆದು ಹಾಕಿದರು. ಸಣ್ಣಪುಟ್ಟ ಸಮುದಾಯದ ಬಡವರು ಶಾಸಕರಾಗಿ ಆಯ್ಕೆಯಾಗಲು ದೇವರಾಜ ಅರಸು ಅವರೇ ಕಾರಣ. ಧ್ವನಿ ಇಲ್ಲದವರಿಗೆ ಧ್ವನಿಯಾದರು. ಇಂದು ನಾವೆಲ್ಲರೂ ದೇವರಾಜ ಅರಸು ಅವರನ್ನು ತಪ್ಪದೇ ಸ್ಮರಿಸಿಕೊಳ್ಳಬೇಕು.

- ಶಾಸಕ ಜಿ.ಟಿ.ದೇವೇಗೌಡ

ಸಂಯುಕ್ತ ಜನತಾ ದಳದಿಂದ ನವಚೈತನ್ಯ ಸಭೆ

ಪಕ್ಷದ ಸಂಘಟನೆ ಸಂಬಂಧ ಚರ್ಚೆ



ಮೈಸೂರು, ಆ.20(ಜಿಎ)– ಮೈಸೂರಿನಲ್ಲಿ ಸಂಯುಕ್ತ ಜನತಾದಳದ ವತಿಯಿಂದ ಭಾನುವಾರ ನವಚೈತನ್ಯ ಸಭೆ ನಡೆಸಲಾಯಿತು. ನಗರದ ಎಲೆತೋಟ ರಸ್ತೆಯಲ್ಲಿರುವ ಖಾಸಗಿ ಸಭಾಂಗಣದಲ್ಲಿ ನಡೆದ ಸಭೆಗೆ ಪಕ್ಷದ ರಾಜ್ಯಾಧ್ಯಕ್ಷ ಮಹಿಮ ಜೆ.ಹೆಚ್.ಪಟೇಲ್ ಚಾಲನೆ ನೀಡಿ, ಮುಂಬರುವ ಲೋಕಸಭೆ ಹಾಗೂ ಇತರೆ ಸ್ಥಳೀಯ ಮಟ್ಟದ ಚುನಾವಣೆಗಳಿಗೆ ಪಕ್ಷವನ್ನು ಸದೃಢವಾಗಿ ಸಂಘಟಿಸುವ ನಿಟ್ಟಿನಲ್ಲಿ ಕಾರ್ಯತಂತ್ರಗಳ ಬಗ್ಗೆ ಚರ್ಚಿಸಲಾಯಿತು.

ಈ ವೇಳೆ ಮಹಿಮ ಜೆ.ಎಚ್.ಪಟೇಲ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ರಾಜಕೀಯ ಅನ್ನೋದು ಬಂಡವಾಳ ಹಾಕಿ ಬಂಡವಾಳ ತೆಗೆಯೋ ಉದ್ಯಮ ಆಗಿ ಬಿಟ್ಟಿದೆ. ಜೆಡಿಯು ಪಕ್ಷದಿಂದ 'ವಿಷ ಮುಕ್ತ ಕೃಷಿ, ನಶೆ ಮುಕ್ತ ಸಮಾಜ' ಮಾಡುವ ಕನಸು ಹೊತ್ತಿದ್ದೇವೆ. ಎಲ್ಲಾ ಜಿಲ್ಲೆಗಳಲ್ಲೂ ಪ್ರವಾಸ ಮಾಡಿ ಪಕ್ಷ ಸಂಘಟನೆ ಮಾಡುತ್ತೇವೆ. ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆ ಸೇರಿದಂತೆ ಲೋಕಸಭಾ ಚುನಾವಣೆಯಲ್ಲಿ ಪಕ್ಷದಿಂದ 3 ಅಥವಾ 4 ಅಭ್ಯರ್ಥಿಗಳನ್ನು ಕಣಕ್ಕಿಳಿಸುತ್ತೇವೆ ಎಂದರು.

ಪಕ್ಷದ ರೈತ ಘಟಕದ ರಾಜ್ಯಾಧ್ಯಕ್ಷ ಡಿ.ಶ್ರೀನಿವಾಸ್ ಮಾತನಾಡಿ, ರಾಮಕೃಷ್ಣ ಹೆಗಡೆ ಮತ್ತು ಜೆ.ಎಚ್. ಪಟೇಲ್ ಅವರು ಕಟ್ಟಿದ ಪಕ್ಷ ಇದು. ಮುಂಬರುವ ದಿನಗಳಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬರುತ್ತದೆ. ಮೇಕೆದಾಟು ಯೋಜನೆ ಹೆಸರೇಳಿ ಹೋರಾಟ ಮಾಡಿ, ಗ್ಯಾರಂಟಿ ಯೋಜನೆಗಳ ಮೂಲಕ ಅಧಿಕಾರಕ್ಕೆ ಬಂದ ಈ ಕಾಂಗ್ರೆಸ್ ಸರ್ಕಾರ ಕೂಡ ಜನರ ವಿಶ್ವಾಸ ಗಳಿಸಿಕೊಳ್ಳುವಲ್ಲಿ ಸೋತಿದೆ. ಹೀಗಾಗಿ ನಾವು ರಾಜ್ಯದ ಮೂಲೆ ಮೂಲೆಗೂ ತೆರಳಿ ಪಕ್ಷ ಅಧಿಕಾರಕ್ಕೆ ತರಲು ಶ್ರಮಿಸುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸಭೆಯಲ್ಲಿ ಪಕ್ಷದ ಸಂಚಾಲಕಿ ಕಲಾವತಿ ಎಂ.ಡಿ. ಪ್ರಧಾನ ಕಾರ್ಯದರ್ಶಿ ಸುರೇಶ್,ಮಹಿಳಾ ವಿಭಾಗದ ಉಪಾಧ್ಯಕ್ಷೆ ಶಾಂತಕುಮಾರಿ, ಸಂಘಟನಾ ಕಾರ್ಯದರ್ಶಿ ಮಂಜುನಾಥ್, ತುಮಕೂರು ಜಿಲ್ಲಾಧ್ಯಕ್ಷ ರೇಣುಕಾ ಪ್ರಸಾದ್, ಪಕ್ಷದ ಯುವನಾಯಕ ವಾಟಾಳು ಸಾಗರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಆ.23ರಂದು ಬಾನುಲಿ ಕೃಷಿ ಬೆಳಗು ಕಾರ್ಯಕ್ರಮ

ಮೈಸೂರು, ಆ.20– ಆಕಾಶವಾಣಿ ಮೈಸೂರು, ಕೃಷಿ ಇಲಾಖೆ ಮೈಸೂರು, ಕೃಷಿ ವಿಶ್ವವಿದ್ಯಾಲಯ ಬೆಂಗಳೂರು, ಸಾವಯವ ಕೃಷಿ ಸಂಶೋಧನಾ ಕೇಂದ್ರ, ವಿಸ್ತರಣಾ ಶಿಕ್ಷಣ ಘಟಕ ನಾಗನಹಳ್ಳಿ, ವಲಯ ಕೃಷಿ ಸಂಶೋಧನಾ ಕೇಂದ್ರ, ವಿ.ಸಿ ಫಾರಂ ಮಂಡ್ಯ, ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಪ್ರಾಂ.ಸ.ಸಾ. ಕೃಷಿ ಸಂಘಗಳ ಒಕ್ಕೂಟ ನಿ ವಿಶ್ವೇಶ್ವರಯ್ಯ ಡೆವಲಪ್‌ಮೆಂಟ್ ಆರ್ಗನೈಜೇಷನ್ ಮೈಸೂರು ವತಿಯಿಂದ ಬಾನುಲಿ ಕೃಷಿ ಬೆಳಗು ಕಾರ್ಯಕ್ರಮ, ಸಾವಯುವ ಸಂಪದ ಬಾನುಲಿ ಸರಣಿಯ ಸಾವಯುವ ಕೃಷಿ ಕ್ಷೇತ್ರ ತರಬೇತಿ ಕಾರ್ಯಾಗಾರವನ್ನು ಆ.23ರಂದು ಬೆಳಗ್ಗೆ 10 ಗಂಟೆಗೆ ಟಿ. ನರಸೀಪುರ ತಾಲೂಕಿನ ರಂಗಸಮುದ್ರದ ಆರ್.ಎಸ್. ರಮಾನಂದ ಹಾಗೂ ಎಂ.ಎಸ್ ರಾಣಿ ಅವರ ಜಮೀನಿನಲ್ಲಿ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕಾಂಗ್ರೆಸ್ ಭವನದಲ್ಲಿ ಡಿ.ದೇವರಾಜ ಅರಸು, ರಾಜೀವ್ ಗಾಂಧಿ ಜಯಂತಿ

ಜನಪರ ಯೋಜನೆಗಳ ಜಾರಿಗೊಳಿಸಿದ ಡಿ.ದೇವರಾಜ ಅರಸು

ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಬಣ್ಣನೆ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಭಾನುವಾರ ದೇವರಾಜ ಅರಸು ಮತ್ತು ರಾಜೀವ್ ಗಾಂಧಿ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಲಾಯಿತು.

ಮೈಸೂರು,ಆ.20(ಪಿಎಂ)– ಬಲಿಷ್ಠ ಸಮಾಜಗಳ ಪ್ರತಿರೋಧಕ್ಕೂ ಜಗ್ಗದೇ ಸಮ ಸಮಾಜ ನಿರ್ಮಾಣಕ್ಕಾಗಿ ಜನಪರ ಯೋಜನೆಗಳನ್ನು ಜಾರಿಗೊಳಿಸಿದ ಆಧುನಿಕ ರಾಜರ್ಷಿ ಡಿ.ದೇವರಾಜ ಅರಸು. ಅವರು ರಾಜ್ಯಧರ್ಮದಲ್ಲಿ ಅತ್ಯಂತ ಸಂವಿಧಾನಬದ್ಧವಾಗಿ ನಡೆದುಕೊಂಡ ರಾಜಕಾರಣಿ ಎಂದು ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಬಣ್ಣಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ಘಟಕದ ವತಿಯಿಂದ 'ಮಹಾ ಚೇತನಗಳಿಗೆ ಕಾಂಗ್ರೆಸ್ ಮಹಾ ನಮನ' ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ ಮಾಜಿ ಮುಖ್ಯಮಂತ್ರಿ ಡಿ.ದೇವ ರಾಜ ಅರಸು ಹಾಗೂ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಜಯಂತಿಯಲ್ಲಿ ಅವರು ಮುಖ್ಯ ಭಾಷಣ ಮಾಡಿದರು.

ಸಾಮಾಜಿಕ ನ್ಯಾಯ, ಅಭಿವೃದ್ಧಿ, ಜನಪರ ಕಾಳಜಿ ಮೆರೆದ ಅನೇಕ ಮಹನೀಯರಿಗೆ ಜನ್ಮಕೊಟ್ಟ ಪುಣ್ಯಭೂಮಿ 'ಮೈಸೂರು'. ಮಿಲ್ಲರ್ ಆಯೋಗದ ಮೂಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ತಳ ಸಮುದಾಯಗಳಿಗೆ ಸಮಾನ ಅವಕಾಶ ಕಲ್ಪಿಸಿದರು. ಆ ಮೂಲಕ ದೇಶದಲ್ಲಿ ಮೀಸಲಾತಿ ಕಲ್ಪಿಸಿದ ಪ್ರಪ್ರಥಮರಲ್ಲಿ ನಾಲ್ವಡಿಯವರೂ ಸೇರಿದ್ದಾರೆ. ಅವರ ಬಳಿಕ ಇದೇ ಮಣ್ಣಿನಲ್ಲಿ ಜನಿಸಿದ ಡಿ.ದೇವರಾಜ ಅರಸು ಅವರು ಮೀಸಲಾತಿ ಮೂಲಕ ಹಿಂದುಳಿದ ಸಮುದಾಯಗಳನ್ನು ಮುಖ್ಯವಾಹಿನಿಗೆ ತರಲು ಶ್ರಮಿಸಿದರು ಎಂದು ಸ್ಮರಿಸಿದರು.

ದೇವರಾಜ ಅರಸು ಅವರ ಕುಟುಂಬಕ್ಕೆ ಯಾವುದೇ ರಾಜಕೀಯ ಹಿನ್ನೆಲೆ ಇಲ್ಲ. ಪ್ರಾರಂಭದಲ್ಲಿ ಪ್ರಬಲ ಶಕ್ತಿಗಳೊಂದಿಗೆ ಸಂಘರ್ಷ ಮಾಡುತ್ತಲೇ 1960ರಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರ ಮಾತಿನ ಮೇರೆಗೆ ರಾಜ್ಯದ ಚುಕ್ಕಾಣಿ ತೆಗೆದುಕೊಂಡರು. ಬಳಿಕ ತಮ್ಮ ನೇತೃತ್ವದಲ್ಲಿ 1971ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ 27 ಲೋಕಸಭಾ ಸ್ಥಾನಗಳನ್ನು ಕಾಂಗ್ರೆಸ್‌ಗೆ ತಂದುಕೊಟ್ಟು ಇತಿಹಾಸ ಸೃಷ್ಟಿ ಮಾಡಿದರು. ಅಲ್ಲದೆ, 1972ರಲ್ಲಿ ಅಂದು ಇದ್ದ 216 ವಿಧಾನಸಭಾ ಕ್ಷೇತ್ರಗಳಲ್ಲಿ 165 ಸ್ಥಾನಗಳನ್ನು ತಂದುಕೊಟ್ಟು ಇತಿಹಾಸ ಸೃಷ್ಟಿಸಿದರು ಎಂದು ತಿಳಿಸಿದರು.

ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅರಸು ಅವರ ಹಾದಿಯಲ್ಲಿ ಸಾಗುವ ಮೂಲಕ ಸಾಮಾಜಿಕ ನ್ಯಾಯವನ್ನು ಸಮಾಜದ ಎಲ್ಲಾ ವರ್ಗದ ಜನರಿಗೆ ನೀಡುವಂತಹ ಆಡಳಿತ ನಡೆಸುತ್ತಿದ್ದಾರೆ. ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಸೇರಿದಂತೆ ಸರ್ವ ಜನಾಂಗಗಳನ್ನು ಸಮಾನವಾಗಿ ನೋಡುವ ಮೂಲಕ ಜಾತಿರಹಿತ, ಶೋಷಣೆರಹಿತ ಸಮ ಸಮಾಜ ಕಟ್ಟಲು ಮುಂದಾಗಿದ್ದಾರೆ ಎಂದರು.

ಸಾಮಾಜಿಕ ನ್ಯಾಯ ಕಲ್ಪಿಸಲು ನಾಲ್ವಡಿಯವರು ಮಿಲ್ಲರ್ ಆಯೋಗ ರಚನೆ ಮಾಡಿದಂತೆ ಹಾಗೂ ದೇವರಾಜ ಅರಸು ಹಾವನೂರು ಆಯೋಗ ರಚನೆ ಮಾಡಿದಂತೆ ಸಿದ್ದರಾಮಯ್ಯನವರು ರಾಜ್ಯದಲ್ಲಿ ಜಾತಿ ಆಧಾರಿತ ಸಮೀಕ್ಷೆಗಾಗಿ ಕಾಂತರಾಜು ಆಯೋಗ ರಚಿಸಿದರು. ಹಿಂದುಳಿದ ವಿವಿಧ ಸಮಾಜಗಳನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕೆಂಬುದು ಈ ಆಯೋಗದ ಹಿಂದಿರುವ ಸದುದ್ದೇಶವಾಗಿದೆ. ಸದರಿ ಆಯೋಗದ ವರದಿ ಬಿಡುಗಡೆ ಮೂಲಕ ತಳಸಮುದಾಯಗಳನ್ನು ಮುಖ್ಯವಾಹಿನಿಗೆ ತರಲು ಯೋಜನೆಗಳನ್ನು ರೂಪಿಸುವಂತಾಗಲಿ. ಆ ಮೂಲಕ ನಮ್ಮ ಸಂವಿಧಾನದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಮ ಸಮಾಜದ ಆಶಯ ಈಡೇರುವಂತಾಗಲಿ ಎಂದು ಆಶಿಸಿದರು.

ದೇವರಾಜ ಅರಸು ಅವರು ಭೂ ಸುಧಾರಣಾ ಕಾಯ್ದೆ ಜಾರಿಗೊಳಿಸಿ, ಉಳುವವನಿಗೆ ಭೂಮಿ ದೊರೆಯುವಂತೆ ಮಾಡಿದರು. ಸುಮಾರು 8 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಭೂಮಿ ಲಭ್ಯವಾಗುವಂತೆ ಕಾನೂನು ಮಾಡಿದ ಮಹಾನಾಯಕ ದೇವರಾಜ ಅರಸು. ಜೊತೆಗೆ ಋಣಮುಕ್ತ ಕಾಯ್ದೆ ಜಾರಿಗೊಳಿಸಿ, ಪಡೆದ ಸಾಲಕ್ಕಾಗಿ ವರ್ಷಗಟ್ಟಲೆ ಜೀತ ಮಾಡುವ ಪದ್ಧತಿ ನಿರ್ಮೂಲನೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ವಸತಿರಹಿತರಿಗೆ ಜನತಾ ಮನೆಗಳ ನಿರ್ಮಿಸಿ, ಆ ಮನೆಗಳು ಬೆಳಗಲು ಭಾಗ್ಯಜ್ಯೋತಿ ಯೋಜನೆಯಡಿ ವಿದ್ಯುತ್ ಪೂರೈಸಿದರು ಎಂದು ಸ್ಮರಿಸಿದರು.

ಇದಕ್ಕೂ ಮುನ್ನ ದೇವರಾಜ ಅರಸು ಅವರ ಸಹಪಾಠಿಗಳೂ ಆದ 95 ವರ್ಷ ಹಿರಿಯರಾದ ಮಾಜಿ ಶಾಸಕ ಹೆಜ್ಜಿಗೆ ಎಂ.ಶ್ರೀನಿವಾಸಯ್ಯನವರು ದೇವರಾಜ ಅರಸು ಮತ್ತು ರಾಜೀವ್‌ಗಾಂಧಿ ಭಾವ ಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಕಾರ್ಯಕ್ರಮಕ್ಕೂ ಮುನ್ನ ಜಾನಪದ ಕಲಾವಿದ ಅಮ್ಮ ರಾಮಚಂದ್ರ ಮತ್ತು ತಂಡದವರಿಂದ ಗಾಯನ ಕಾರ್ಯಕ್ರಮ ನಡೆಯಿತು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಚಂದ್ರಮೌಳಿ, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಮೋದಾಮಣಿ, ಕಾಂಗ್ರೆಸ್ ಓಬಿಸಿ ಘಟಕದ ನಗರಾಧ್ಯಕ್ಷ ನಾಗೇಶ್, ಮಾಧ್ಯಮ ವಕ್ತಾರ ಕೆ.ಮಹೇಶ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ನಗರಾಧ್ಯಕ್ಷ ಆರ್. ಮೂರ್ತಿ ಮತ್ತಿತರರು ಹಾಜರಿದ್ದರು.

ವಿಶ್ವದಲ್ಲಿ ಭಾರತಕ್ಕೆ ಸ್ಥಾನಮಾನ ತಂದುಕೊಟ್ಟ ರಾಜೀವ್ ಗಾಂಧಿ...

ದೇಶದಲ್ಲಿ ತಂತ್ರಜ್ಞಾನ, ಕಂಪ್ಯೂಟರೀಕರಣ, ಟೆಲಿ–ಕಮ್ಯೂನಿಕೇಷನ್ ಬೆಳವಣಿಗೆಗೆ ಪ್ರಧಾನಿಯಾಗಿ ರಾಜೀವ್ ಗಾಂಧಿ ಕೊಡುಗೆ ಅಪಾರ. ಭಾರತವನ್ನು ಏನಾದರೂ ವಿಶ್ವಗುರು ಸ್ಥಾನಕ್ಕೆ ತರಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದರೆ ಅದು ರಾಜೀವ್ ಗಾಂಧಿ ಹೊರತು ಇಂದಿನ ಮೌನಿ ಬಾಬಾ ಮೋದಿಯವರಲ್ಲ. ಇಡೀ ವಿಶ್ವದಲ್ಲಿ ಭಾರತಕ್ಕೆ ತನ್ನದೇ ಆದ ಸ್ಥಾನಮಾನ ಕೊಡಿಸುವಲ್ಲಿ ರಾಜೀವ್ ಗಾಂಧಿ ಪ್ರಮುಖ ಪಾತ್ರ ವಹಿಸಿದ್ದಾರೆ.

-ವಿ.ಎಸ್.ಉಗ್ರಪ್ಪ

ದೇವರಾಜ ಅರಸು ಹಿಂದುಳಿದವರ ಅಭಿವೃದ್ಧಿಗೆ ಶ್ರಮಿಸಿದ ಮಹಾನ್ ಚೇತನ

ದೇವರಾಜ ಅರಸು ಅವರ ಜಯಂತಿಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಬಣ್ಣನೆ



ಹುಣಸೂರು.ಆ.20– ಸಮಾಜದಲ್ಲಿ ಸಾಮಾಜಿಕ ಮತ್ತು ಸಮಾನತೆಯ ಪರಿಕಲ್ಪನೆಯೊಂದಿಗೆ ದೀನ-ದಲಿತರ ಕೆಳವರ್ಗದ ಎಲ್ಲಾ ಸಮಾಜಗಳ ಅಭಿವೃದ್ಧಿಗೆ ಶ್ರಮಿಸಿದ ಮಹಾನ್ ಚೇತನ. ಭೂ ಸುಧಾರಣೆಯ ಹರಿಕಾರ ಸಾಮಾಜಿಕ ಸಮಾನತೆಯ ನಿಜ ಸಾಧಕ ದಿವಂಗತ ದೇವರಾಜ ಅರಸು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಸ್ಮರಿಸಿದ್ದಾರೆ.

ನಗರದ ಎಪಿಎಂಸಿ ಎದುರು ಇರುವ ದಿವಂಗತ ದೇವರಾಜ ಅರಸರ ಪ್ರತಿಮೆ ಬಳಿ ತಾಲೂಕು ಪಂಚಾಯಿತಿ, ತಾಲೂಕು ಆಡಳಿತ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ ದಿವಂಗತ ಡಿ.ದೇವರಾಜ ಅರಸರ 108ನೇ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಭೂ ಸುಧಾರಣೆ ಕಾಯಿದೆಯನ್ನು ಜಾರಿಗೆ ತಂದು ಉಳುವವನಿಗೆ ಭೂಮಿ ಕಾರ್ಯಕ್ರಮದಡಿ ರಾಜ್ಯದ 21 ಲಕ್ಷ ಎಕರೆ ಭೂಮಿಯನ್ನು ಸಾವಿರಾರು ಬಡವರಿಗೆ ನೀಡಿ ಭೂ ಒಡೆಯನನ್ನಾಗಿ ಮಾಡಿದ ಧೀಮಂತ ಮುಖ್ಯಮಂತ್ರಿ ಅರಸು ಅವರು ಎಂದರು.

ಅಲ್ಲದೆ ಅಂದಿನ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿ ಅವರ 20 ಅಂಶಗಳ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತಂದು ಆರ್ಥಿಕ ಸಾಮಾಜಿಕ ಸಮಾನತೆಯನ್ನು ತರುವ ಮೂಲಕ ರಾಜ್ಯ ರಾಜಕೀಯ ರಂಗದಲ್ಲಿ ಹೊಸತನವನ್ನು ಕಂಡುಕೊಂಡರು ಹಾಗೂ ಯುವ ಜನತೆಗೆ ತಮ್ಮ ಅಡಳಿತದಲ್ಲಿ ಹೆಚ್ಚಿನ ಅವಕಾಶವನ್ನು ಕಲ್ಪಿಸಿದ ಉತ್ತಮ ಆಡಳಿತಗಾರರಾಗಿದ್ದರು ಎಂದರು.

ಪ್ರಧಾನ ಭಾಷಣಕಾರರಾಗಿ ಮಾತನಾಡಿದ ಕೊತ್ತೇಗಾಲ ಪ್ರೌಢಶಾಲೆಯ ಆಂಗ್ಲ ಭಾಷಾ ಶಿಕ್ಷಕ ಜೆ.ಮಹದೇವ್, ತಳಸಮುದಾಯ, ಹಿಂದುಳಿದವರು, ಶೋಷಿತರು ಹಾಗೂ ದೀನ ದಲಿತ, ದುರ್ಬಲ ವರ್ಗದವರ ಬದುಕನ್ನು ಹಸನುಗೊಳಿಸಲು ಕ್ರಾಂತಿಕಾರಕ ಯೋಜನೆಗಳನ್ನು ಜಾರಿಗೆ ತರುವ ಮೂಲಕ ನಾಡಿನ ಚರಿತ್ರೆಯಲ್ಲಿ ಅಚ್ಚಳಿಯದ ಸಾಮಾಜಿಕ ನ್ಯಾಯದ ಹರಿಕಾರ ದಿವಂಗತ ಡಿ.ದೇವರಾಜ ಅರಸು, ಸಾಮಾಜಿಕ ಸಮಾನತೆಯ ನಿಜ ಸಾಧಕರಾಗಿದ್ದರು ಎಂದರು.

ಕರ್ನಾಟಕವನ್ನು ಪ್ರಾಯೋಗಿಕ ರಾಜಕಾರಣದ ಕರ್ಮಭೂಮಿಯಾಗಿಸಿ ಸರ್ವರ ಹಿತ ಸಾಧಿಸುವ ಸಾಮಾಜಿಕ ನ್ಯಾಯದ ಜನಪರ ಆಡಳಿತ ನಡೆಸಿದ ಅರಸರು ಸರ್ಕಾರದ ಯೋಜನೆಗಳು ಜನಸಾಮಾನ್ಯರ ಬಾಳಿಗೆ ಪ್ರಗತಿಪರ ಸಾಧನಗಳಾಗುವಂತೆ ದೃಢ ನಿಲುವು ತಾಳಿದರು. ಅವರ ಅಧಿಕಾರಾವಧಿಯಲ್ಲಿ ಕೃಷಿ, ಕೈಗಾರಿಕೆ, ಶಿಕ್ಷಣ, ಆರೋಗ್ಯ, ನೀರಾವರಿ, ಉದ್ಯೋಗ, ತಂತ್ರಜ್ಞಾನ, ಕಲೆ, ಸಾಹಿತ್ಯ, ಸಂಸ್ಕೃತಿ ಕ್ಷೇತ್ರಗಳಲ್ಲಿ ಅಭೂತಪೂರ್ವ ಸಾಧನೆಗಳು ದಾಖಲಾಗಿ, ರಾಜ್ಯ ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಹೊಸ ಮನ್ವಂತರಕ್ಕೆ ಸಾಕ್ಷಿಯಾದವು ಎಂದರು.

ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ತಾಲೂಕಿನ ಅರಸು ಒಡನಾಡಿಗಳನ್ನು ಗುರುತಿಸಿ ಐವರಿಗೆ ಗೌರವಿಸಿ ಸನ್ಮಾನ ಮಾಡಲಾಯಿತು. ಅಲ್ಲದೆ ದಿವಂಗತ ಅರಸರ ಬಗ್ಗೆ ವಿದ್ಯಾರ್ಥಿನಿಲಯಗಳ ಮಕ್ಕಳಿಗೆ ಏರ್ಪಡಿಸಿದ್ದ ಪ್ರಬಂಧ ಮತ್ತು ಬಾಷಣ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಬಹುಮಾನ ಮತ್ತು ನೆನಪಿನ ಕಾಣಿಕೆ ನೀಡಲಾಯಿತು ಹಾಗೂ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಪುಸ್ತಕ, ಬಟ್ಟೆ ಮತ್ತು ಶುಚಿತ್ವದ ಕಿಟ್‌ಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ಶ್ರೀಮತಿ ರುಚಿ ಬಿಂದಾಲ್, ತಹಸಿಲ್ದಾರ್ ಡಾ.ಆಶೋಕ್, ತಾಪಂ ಕಾರ್ಯನಿರ್ವಹಣಾಧಿಕಾರಿ ಬಿ.ಕೆ.ಮನು, ಪೌರಾಯುಕ್ತೆ ಮಾನಸ, ತಾಲೂಕು ಸಮಾಜ ಕಲ್ಯಾಣಾಧಿಕಾರಿ ಮೋಹನ್‌ಕುಮಾರ್, ಸಹಾಯಕ ಕೃಷಿ ನಿರ್ದೇಶಕ ವೆಂಕಟೇಶ್, ತಾಲೂಕು ಹಿಂದುಳಿದ ಕಲ್ಯಾಣಾಧಿಕಾರಿ ಸುಜೇಂದ್ರ ಕುಮಾರ್, ನಗರಸಭಾ ಸದಸ್ಯರಾದ ಕೃಷ್ಣರಾಜಗುಪ್ತ, ಸರವಣ್ಣ, ಹೆಚ್.ಪಿ.ಸತೀಶ್ ಕುಮಾರ್, ಪೇರುಮಾಳ್, ದಸಂಸ ಸಂಚಾಲಕ ನಿಂಗರಾಜ್ ಮಲ್ಲಾಡಿ, ಅರಸು ವೇದಿಕೆಯ ಅಧ್ಯಕ್ಷ ಬಿಳಿಕೆರೆ ರಾಜು, ಆದಿಜಾಂಬವ ಸಂಘದ ಡಿ.ಕುಮಾರ್, ಸತ್ಯ ಫೌಂಡೇಷನ್ ಅಧ್ಯಕ್ಷ ಸತ್ಯಪ್ಪ ಮುಖಂಡರಾರ ಕಣಗಾಲ್ ರಾಮೇಗೌಡ, ಯಜಮಾನ್ ಶಂಕ್ರಯ್ಯ, ಬಸವಲಿಂಗಯ್ಯ, ಎ.ಪಿ.ಎಂ.ಸಿ ಅಧ್ಯಕ್ಷ ಸುಹಾಶ್, ಇನ್ನೂ ಅನೇಕ ಗಣ್ಯರು ಭಾಗವಹಿಸಿದ್ದರು.

ಹುಟ್ಟೂರು ಕಲ್ಲಹಳ್ಳಿಯಲ್ಲಿ ಅರಸು ಸಮಾಧಿಗೆ ಪುಷ್ಪನಮನ



ಹುಣಸೂರು, ಆ.20– ದೀನ ದಲಿತರ ಕಣ್ಮಣಿ ಹಾಗೂ ಶೋಷಿತ ವರ್ಗಗಳ ಆಶಾಕಿರಣ ಡಿ.ದೇವರಾಜ ಅರಸರ 108ನೇ ಜನ್ಮ ದಿನಾಚರಣೆ ಅಂಗವಾಗಿ ಅರಸು ಹುಟ್ಟೂರಾದ ಕಲ್ಲಹಳ್ಳಿ ಗ್ರಾಮದ ಅರಸು ಅವರ ಸಮಾದಿಗೆ ಶಾಸಕ ಹರೀಶ್ ಗೌಡ ಹಾಗೂ ಮಾಜಿ ಸಚಿವ ಎಚ್.ವಿಶ್ವನಾಥ್ ಪುಷ್ಪನಮನ ಸಲ್ಲಿಸಿದರು.

ನಂತರ ಶಾಸಕ ಹರೀಶ್‌ಗೌಡ ಮಾತನಾಡಿ, ಇಂತಹ ಮಹಾಪುರುಷನ ಕ್ಷೇತ್ರದಿಂದ ನಾನು ಶಾಸಕನಾಗಿರುವುದು ನನ್ನ ಪುಣ್ಯ. ದಿವಂಗತರು 6 ಬಾರಿ ಶಾಸಕರಾಗಿ, ಸಚಿವರಾಗಿ, ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲಿ ಸಾಮಾಜಿಕ ಸಮಾನತೆ ಸಾರುವ ಹಲವಾರು ಕಾನೂನುಗಳನ್ನು ಜಾರಿಗೆ ತುದು ಬಡವರ ಪಾಲಿಗೆ ಆಶಾಕಿರಣವಾಗಿದ್ದರು. ಉಳುವವನಿಗೆ ಭೂಮಿ, ಜೀತಮುಕ್ತ ಪದ್ಧತಿ, ಮಲ ಹೊರುವ ಪದ್ಧತಿಯನ್ನು ನಿರ್ಮೂಲನೆ ಮಾಡಿ ಸಮ ಸಾಮಾನತೆಯನ್ನು ಸಾರಿ ರೈತರಿಗೆ ಅನುಕೂಲ ಮಾಡಿದ್ದರು ಎಂದರು.

ಮಾಜಿ ಸಚಿವ ಎಚ್.ವಿಶ್ವನಾಥ್ ಮಾತನಾಡಿ, ಅರಸುರಂತಹ ಉತ್ತಮ ವ್ಯಕ್ತಿ ಸಿಗುವುದು ಕಷ್ಟ, ಅವರು ಒಂದಲ್ಲ, ಎರಡಲ್ಲ, ಹತ್ತು ಹಲವಾರು ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತಂದು ಬಡವರ ಅಭಿವೃದಿಗೆ ಮಾರ್ಗದರ್ಶಕರಾಗಿದ್ದರು. ಅಲ್ಲದೆ ಅಂದಿನ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರ 20 ಅಂಶಗಳ ಕಾರ್ಯಕ್ರಮವನ್ನು ಯಥಾವತ್ತಾಗಿ ಜಾರಿಗೆ ತರುವುದರ ಜೊತೆಗೆ ನಮ್ಮಂಥ ಯುವಕರನ್ನು ರಾಜಕಾರಣದಲ್ಲಿ ಬೆಳೆಯಲು ಸಹಕಾರ ನೀಡಿ ಶಕ್ತಿ ತುಂಬಿದ ಮಹಾನ್ ರಾಜಕಾರಣಿ, ಈಗ ನಾವೆಲ್ಲ ಅವರ ಫೋಟೋ ಇಟ್ಟು ಪೂಜೆ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ದೇವರಾಜ ಅರಸು ಅಭಿಮಾನಿ ಬಳಗದ ಅಧ್ಯಕ್ಷ ಬಿಳಿಕೆರೆ ರಾಜು, ಕುರುಬರ ಅಭಿವೃದ್ಧಿ ಸಂಘದ ಅಧ್ಯಕ್ಷ ಡಿ.ಕೆ.ಕುನ್ನೇಗೌಡ, ಕಾಂತರಾಜು, ದಲಿತ ಮುಖಂಡ ಬಸವಲಿಂಗಯ್ಯ, ಪುರಸಭೆ ಮಾಜಿ ಸದಸ್ಯ ಹೆಚ್.ಎಸ್.ವರದರಾಜು, ಕಣಗಾಲ್ ರಾಮೇಗೌಡ, ತಟ್ಟೆಕೆರೆ ಶ್ರೀನಿವಾಸ್, ಗಣಪತಿರಾವ್, ಮಲ್ಲೇಶ್, ಮಹದೇವಮ್ಮ ಅನೇಕರು ಉಪಸ್ಥಿತರಿದ್ದರು.

ಹೆಚ್.ಡಿ.ಕೋಟೆಯಲ್ಲಿ ದೇವರಾಜು ಅರಸು ಭವನ ನಿರ್ಮಿಸುವೆ

ದೇವರಾಜ ಅರಸು ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಘೋಷಣೆ



ಹೆಚ್.ಡಿ.ಕೋಟೆ, ಆ.20– ಡಿ.ದೇವರಾಜ ಅರಸು ಸಮುದಾಯ ಭವನ ನಿರ್ಮಾಣದ ಜೊತೆಗೆ ಅರಸು ಅವರ ವಸ್ತು ಸಂಗ್ರಹಾಲಯ ಮಾಡಲು ಕ್ರಮ ಕೈಗೊಳ್ಳುವುದಾಗಿ ಶಾಸಕ ಅನಿಲ್ ಚಿಕ್ಕಮಾದು ಇಂದಿಲ್ಲಿ ಘೋಷಿಸಿದ್ದಾರೆ.

ಪಟ್ಟಣದ ತಾಲೂಕು ಆಡಳಿತ ಸೌಧದ ಆವರಣದಲ್ಲಿ ಭಾನುವಾರ ತಾಲೂಕು ಆಡಳಿತ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಡಿ.ದೇವರಾಜ ಅರಸು ಅವರ 108ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅರಸು ಅವರು ಉಳುವವನೇ ಭೂಮಿಯ ಒಡೆಯ ಎಂಬ ಕಾನೂನು ಯಥಾವತ್ತಾಗಿ ಜಾರಿ ಮಾಡಿದರು. ಇದು ರಾಜಕೀಯ ಇತಿಹಾಸದಲ್ಲಿ ದೊಡ್ಡ ಕ್ರಾಂತಿ ಉಂಟುಮಾಡಿದ ಕೀರ್ತಿ ಸಲ್ಲುತ್ತದೆ ಎಂದ ಅವರು, ಹಿಂದುಳಿದ ವರ್ಗಗಳನ್ನು ಮೇಲೆತ್ತುವ ಕೆಲಸ ಮಾಡಿದರು. ಏಳು ವರ್ಷಗಳ ಕಾಲ ಸುದೀರ್ಘವಾಗಿ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದರು. ಅರಸು ಅಂತವರು ಮತ್ತೊಮ್ಮೆ ಹುಟ್ಟಲು ಸಾಧ್ಯವಿಲ್ಲ ಎಂದರು.

ತಾಲೂಕಿನಲ್ಲಿ ಉತ್ತಮವಾದ ಭವನ ನಿರ್ಮಾಣ ಮಾಡಲು ಕ್ರಮವಹಿಸುವುದಾಗಿ ತಿಳಿಸಿದರು. ಜಾಗದ ಸಮಸ್ಯೆಯಿಂದ ಸ್ವಲ್ಪ ಸಮಸ್ಯೆ ಆಗಿತ್ತು. ಈಗಾಗಲೇ ಜಾಗ ಗುರುತು ಮಾಡಿದ್ದು ಅದೇ ಜಾಗದಲ್ಲಿ ಭವನ ನಿರ್ಮಾಣ ಮಾಡುವುದಾಗಿ ಭರವಸೆ ನೀಡಿದರು.

ನಮ್ಮ ತಂದೆಯವರಿಗೆ ಅರಸು ಅವರು ರಾಜಕೀಯದಲ್ಲಿ ಉನ್ನತ ಹುದ್ದೆಯನ್ನು ನೀಡಲು ಆಹ್ವಾನಿಸಿದ್ದರು. ಆದರೆ ನಮ್ಮ ತಂದೆಯವರು ಅದನ್ನು ತಿರಸ್ಕರಿಸಿದ ಘಟನೆ ಕೂಡ ಆ ಸಂದರ್ಭದಲ್ಲಿ ನಡೆದಿತ್ತು ಎಂದು ನೆನಪಿಸಿದರು. ಮುಖ್ಯ ಭಾಷಣಕಾರರಿಗೆ ಆಗಮಿಸಿ ಮಾತನಾಡಿದ ನಿವೃತ್ತ ಉಪನ್ಯಾಸಕ ಶಿವಪ್ಪ, ಶೋಷಿತ ಸಮುದಾಯ, ಹಿಂದುಳಿದ ವರ್ಗದವರಿಗೆ ಧ್ವನಿ ನೀಡಿದ ಮಹಾ ನಾಯಕ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು, ಮೈಸೂರು ರಾಜ್ಯವನ್ನು ಕರ್ನಾಟಕ ರಾಜ್ಯ ಎಂದು ಮರು ನಾಮಕರಣ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ತಮ್ಮ ಅಧಿಕಾರ ಅವಧಿಯಲ್ಲಿ ಉತ್ತಮ ಆಡಳಿತ ನೀಡಿ ಅಭಿವೃದ್ಧಿ ಹರಿಕಾರರು ಎಂದು ಜನಜನಿತರಾಗಿದ್ದರು ಎಂದು ತಿಳಿಸಿದ ಅವರು, ಇದೇ ಸಂದರ್ಭದಲ್ಲಿ ವಿದ್ಯಾರ್ಥಿ ನಿಲಯಗಳಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಕೌಶಿಕ್, ಹರ್ಷಿತಾ ಅವರನ್ನು ಶಾಸಕರು ಸನ್ಮಾನಿಸಿದರು.

ತಹಸೀಲ್ದಾರ್ ಸಣ್ಣರಾಮಪ್ಪ, ಪರಶಿವಮೂರ್ತಿ, ಕೋಟೆ ಸರಗೂರು ಇಓಗಳಾದ ಧರಣೀಶ್, ಸುಷ್ಮಾ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಶಶಿಕಲಾ, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಶಿವಪ್ಪ, ಅರಸು ಮಂಡಳಿ ತಾಲೂಕು ಉಪಾಧ್ಯಕ್ಷ ದೀಪಕ್, ವೆಂಕಟೇಅರಸು, ಪಣಿಕುಮಾರ್ ಅರಸು, ಮಂಜುನಾಥ್, ಎಂ.ಡಿ.ಮಂಚಯ್ಯ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮಸ್ವಾಮಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ನಾರಾಯಣಸ್ವಾಮಿ, ಮಹಾದೇವಯ್ಯ, ಸಣ್ಣಕುಮಾರ್, ಆನಗಟ್ಟಿ ರಾಜು, ಕೃಷ್ಣಮೂರ್ತಿ ಇದ್ದರು.

ಹೆಚ್.ಡಿ.ಕೋಟೆಯಲ್ಲಿ ಬೀಗ ಮುರಿದು ಮನೆಯಲ್ಲಿ 10 ಲಕ್ಷ ರೂ. ಮೌಲ್ಯದ ನಗ–ನಾಣ್ಯ ದೋಚಿ ಪರಾರಿ



ಹೆಚ್.ಡಿ.ಕೋಟೆ.ಆ.20– ಪಟ್ಟಣದ ಹೌಸಿಂಗ್ ಬೋರ್ಡ್ ಮನೆಯೊಂದರ ಬೀಗ ಮುರಿದು 10 ಲಕ್ಷ ರೂ. ಮೌಲ್ಯದ ಚಿನ್ನ, ಬೆಳ್ಳಿ ಆಭರಣ ಮತ್ತು ನಗದು ದೋಚಿರುವ ಘಟನೆ ಸಂಭವಿಸಿದೆ.

ತಾಲೂಕಿನ ಹೊಸಹೊಳಲು ಗ್ರಾಮದ ನಿವಾಸಿ ಜಯಶಂಕರ್, ಪಟ್ಟಣದ ಹೌಸಿಂಗ್ ಬೋರ್ಡ್‌ನಲ್ಲಿ ವಾಸವಿದ್ದು, ಕುಟುಂಬ ಸಮೇತ ನಿನ್ನೆ ಶ್ರಾವಣ ಶನಿವಾರದ ಪ್ರಯುಕ್ತ ತಮ್ಮ ಊರಿಗೆ ಹೋಗಿದ್ದರು. ಮನೆಗೆ ಬೀಗ ಹಾಕಿರುವುದನ್ನು ಗಮನಿಸಿದ ಕಳ್ಳರು ಮನೆ ಮುಂಬಾಗಿಲಿನ ಬೀಗ ಮತ್ತು ಡೋರ್‌ಲಾಕ್ ಅನ್ನು ಒಡೆದು ಮನೆ ಒಳಗಿದ್ದ ಕಬ್ಬಿಣದ ಮತ್ತು ಮರದ ಬೀರುಗಳನ್ನು ಒಡೆದು 150 ಗ್ರಾಂ ಚಿನ್ನ, ಐವತ್ತು ಸಾವಿರ ರೂಪಾಯಿ ನಗದು ಹಾಗೂ ಇನ್ನಿತರ ಬೆಳ್ಳಿ ಪದಾರ್ಥಗಳನ್ನು ದೋಚಿ ಪರಾರಿಯಾಗಿದ್ದಾರೆ.

ಇಂದು ಬೆಳಗ್ಗೆ ಎಂದಿನಂತೆ ಜಯಶಂಕರ್ ಮನೆಗೆ ಬಂದ ಸಂದರ್ಭದಲ್ಲಿ ಮನೆಯ ಬೀಗ ಒಡೆದಿರುವುದನ್ನು ಕಂಡು ಗಾಬರಿಗೊಂಡು ತಕ್ಷಣ ಸರ್ಕಲ್ ಇನ್ಸ್‌ಪೆಕ್ಟರ್ ಶಬೀರ್ ಹುಸೇನ್ ಅವರಿಗೆ ವಿಚಾರ ತಿಳಿಸಿದರು. ಮೈಸೂರಿನಿಂದ ಬೆರಳಚ್ಚು ತಜ್ಞರು ಹಾಗೂ ಶ್ವಾನದಳ ಕರೆಸಿ ಪರಿಶೀಲಿಸಿ ಕಳ್ಳರ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ಪಟ್ಟಣದ ವ್ಯಾಪ್ತಿಯಲ್ಲಿ ಇತ್ತೀಚೆಗೆ ಹಗಲು–ರಾತ್ರಿಯೆನ್ನದೆ ನಿರಂತರ ಕಳ್ಳತನವಾಗುತ್ತಿದ್ದು, ಜನತೆಯಲ್ಲಿ ಆತಂಕ ಮೂಡಿಸಿದೆ. ಈ ಸಂಬಂಧ ಪಟ್ಟಣದ ಪೊಲೀಸರು ಹಿಂದೆ ನಡೆದಿರುವ ಘಟನೆಗಳ ವಿಚಾರದಲ್ಲಿ ಸರಿಯಾದ ಕ್ರಮ ತೆಗೆದುಕೊಳ್ಳದೆ ಬೇಜವಾಬ್ದಾರಿತನ ತೋರಿಸಿರುವುದೇ ಇದಕ್ಕೆ ಕಾರಣ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ಸಂಬಂಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಶಾಲಾ ಆವರಣದಿಂದ 8 ವರ್ಷದ ಬಾಲಕಿ ಅಪಹರಣಕ್ಕೆ ಯತ್ನ

ಬಾಲಕಿ, ವಿದ್ಯಾರ್ಥಿಗಳ ಚೀರಾಟದಿಂದ ಪರಾರಿಯಾದ ಅಪಹರಣಕಾರರು

ನಂಜನಗೂಡು, ಆ.20– ತಾಲೂಕಿನ ಹುಲ್ಲಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 8 ವರ್ಷದ ಬಾಲಕಿಯನ್ನು ಅಪಹರಿಸಲು ಯತ್ನಿಸಿದ ಘಟನೆಯೊಂದು ಸಂಭವಿಸಿದ್ದು, ಅಪಹರಣ ಮಾಡಲು ಆಗಂತುಕರು ಬಾಲಕಿ ಮತ್ತು ಇತರ ವಿದ್ಯಾರ್ಥಿಗಳ ಚೀರಾಟದಿಂದ ಪ್ರಯತ್ನ ವಿಫಲವಾಗಿದೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಹುಲ್ಲಹಳ್ಳಿ ಸರ್ಕಾರಿ ಶಾಲೆಯಲ್ಲಿ ಘಟನೆ, ಪ್ರಕರಣ ದಾಖಲು

ಹುಲ್ಲಹಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಮಧ್ಯಾಹ್ನದ ವೇಳೆ ಶಾಲೆಯ ಎರಡನೇ ತರಗತಿಯ ವಿದ್ಯಾರ್ಥಿನಿ ಮೂತ್ರ ವಿಸರ್ಜನೆಗೆಂದು ಶೌಚಾಲಯಕ್ಕೆ ತೆರಳಿದ್ದಾಗ ಕಾಂಪೌಂಡ್ ಸಮೀಪ ಅಡಗಿ ಕುಳಿತಿದ್ದ ಇಬ್ಬರು ಅಪರಿಚಿತ ವ್ಯಕ್ತಿಗಳು ವಿದ್ಯಾರ್ಥಿನಿಯನ್ನು ಎಳೆದೊಯ್ಯಲು ಯತ್ನಿಸಿದರು. ಈ ವೇಳೆ ವಿದ್ಯಾರ್ಥಿನಿಯ ಕಿರುಚಾಟದಿಂದ ಸ್ಥಳಕ್ಕಾಗಮಿಸಿದ ಇತರೆ ಕೆಲ ವಿದ್ಯಾರ್ಥಿಗಳು ಜೋರಾಗಿ ಕೂಗಿದ್ದರಿಂದ ಬಾಲಕಿಯನ್ನು ಸ್ಥಳದಲ್ಲಿಯೇ ಬಿಟ್ಟು ಅಪರಿಚಿತರು ಪರಾರಿಯಾಗಿದ್ದಾರೆ. ನಂತರ ಶಿಕ್ಷಕರು ವಿದ್ಯಾರ್ಥಿಯನ್ನು ಸಂತೈಸಿ ಪೋಷಕರಿಗೆ ಮಾಹಿತಿ ನೀಡಿ ಆನಂತರ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಶಾಲೆಯ ಮುಖ್ಯ ಶಿಕ್ಷಕ ಗಣೇಶ್ ದೂರು ದಾಖಲಿಸಿದ್ದಾರೆ.

ಇನ್ನು ಶಾಲೆಯ ಆವರಣದಲ್ಲಿಯೇ ಬಾಲಕಿ ಅಪಹರಣದ ಪ್ರಯತ್ನ ನಡೆಸಿರುವುದು ಪೋಷಕರಿಗೆ ಆತಂಕ ಸೃಷ್ಟಿಸಿದ್ದು ಈ ಸಂಬಂಧ ದೂರು ದಾಖಲಿಸಿಕೊಂಡಿರುವ ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದ್ದಾರೆ.

ಘಟನೆ ಬಗ್ಗೆ ಆತಂಕ ವ್ಯಕ್ತಪಡಿಸಿದ ಜಯ ಕರ್ನಾಟಕ ಸಂಘಟನೆ ಅಧ್ಯಕ್ಷ ಜವರ ನಾಯಕ, ಸರಕಾರಿ ಶಾಲೆಯ ಹಿಂಭಾಗದ ಕಾಂಪೌಂಡ್ ಸಂಪೂರ್ಣ ಶಿಥಿಲಗೊಂಡಿದ್ದು ಮತ್ತು ಸುತ್ತಲಿನ ಪ್ರದೇಶದಲ್ಲಿ ಗಿಡಗಂಟಿಗಳು ಬೆಳೆದಿರುವುದರಿಂದ ಅಪರಿಚಿತ ವ್ಯಕ್ತಿಗಳು ಶಾಲೆಯೊಳಗೆ ನುಗ್ಗುತ್ತಿದ್ದಾರೆ. ತಕ್ಷಣ ಗಿಡಗಂಟಿಗಳನ್ನು ತೆರವುಗೊಳಿಸಿ ಶಿಥಿಲಗೊಂಡಿರುವ ಕಾಂಪೌಂಡ್ ದುರಸ್ತಿಗೊಳಿಸುವಂತೆ ಒತ್ತಾಯಿಸಿದರು.


ಕಾಂಗ್ರೆಸ್ ವರಿಷ್ಠರು ಬಯಸಿದರೆ ಚಾ.ನಗರದಿಂದ ಸ್ಪರ್ಧೆ

ನಂಜನಗೂಡು: ಕಾಂಗ್ರೆಸ್ ಪಕ್ಷದ ವರಿಷ್ಟರು, ಹೈಕಮಾಂಡ್ ಅವಕಾಶ ನೀಡಿದರೆ ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸುತ್ತೇನೆ ಎಂದು ಕಾಂಗ್ರೆಸ್ ಮುಖಂಡ, ಮಾಜಿ ಶಿಕ್ಷಣ ಸಚಿವ ಎಂ. ಸೋಮಶೇಖರ್ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಾದ್ಯಂತ ಪ್ರವಾಸ ಮಾಡಿದ್ದೇನೆ, ಕಾಂಗ್ರೆಸ್ ಪಕ್ಷ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ನೀಡಿದ್ದ ಗ್ಯಾರಂಟಿಗಳನ್ನು ಈಡೇರಿಸುತ್ತಿರುವುದರಿಂದ ಜನರಿಗೆ ಕಾಂಗ್ರೆಸ್‌ನತ್ತ ಒಲವು ಮೂಡಿದೆ, ಬಿಜೆಪಿಗೆ ಹೋಗಿದ್ದ ಕೆಲವು ನಾಯಕರು ಮರಳಿ ಮತ್ತೆ ಕಾಂಗ್ರೆಸ್ ಪಕ್ಷದತ್ತ ಮುಖ ಮಾಡಿದ್ದಾರೆ, ರಾಜ್ಯ ಬಿಜೆಪಿಯಲ್ಲಿನ ನಾಯಕರ ಕೊರತೆ, ಭ್ರಷ್ಟಾಚಾರ, ಕಮಿಷನ್ ದಂಧೆ ಸ್ವಜನ ಪಕ್ಷಪಾತಗಳಿಂದ ಜನ ಬೇಸತ್ತಿದ್ದಾರೆ, ಮುಂದಿನ ಲೋಕ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 15ಕ್ಕೂ ಹೆಚ್ಚು ಸ್ಥಾನಗಳಲ್ಲಿ ಜಯಗಳಿಸಲಿದೆ ಎಂದರು. ವಕೀಲ ಗೋಳೂರು ಪ್ರಸಾದ್, ಶಶಿರೇಖಾ, ನಾಗೇಂದ್ರ ಉಪಸ್ಥಿತರಿದ್ದರು.

ಸಾಮಾಜಿಕ ನ್ಯಾಯ ಒದಗಿಸಿದ ಹರಿಕಾರ ದೇವರಾಜ ಅರಸು

ತಿ.ನರಸೀಪುರದಲ್ಲಿ ದಿ.ದೇವರಾಜ ಅರಸು ಅವರ ಜನ್ಮ ದಿನಾಚರಣೆ



ತಿ.ನರಸೀಪುರ.ಆ.20– ದೇವರಾಜ ಅರಸ್ ಅವರು ಮುಖ್ಯಮಂತ್ರಿಯಾಗಿದ್ದಾಗ ಹಿಂದುಳಿದ ಸಮುದಾಯದವರ ಅಭಿವೃದ್ಧಿಗಾಗಿ ಸಾಕಷ್ಟು ಜನಪ್ರಿಯ ಯೋಜನೆಗಳನ್ನು ರೂಪಿಸುವ ಮೂಲಕ ಹಿಂದುಳಿದ, ದೀನ ದಲಿತ ವರ್ಗಗಳನ್ನು ಸಮಾಜಮುಖಿಗೆ ಬರುವಂತೆ ಮಾಡಿದ ಮಹಾನ್ ವ್ಯಕ್ತಿ ಎಂದು ತಹಸೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಬಣ್ಣಿಸಿದ್ದಾರೆ.

ತಾಲೂಕು ಆಡಳಿತ, ತಾಲೂಕು ಪಂಚಾಯತಿ, ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಪಟ್ಟಣದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಾಜಿ ಮುಖ್ಯಮಂತ್ರಿ ದಿ.ಡಿ.ದೇವರಾಜ ಅರಸು ಅವರ 108ನೇ ಜನ್ಮದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರಳ ಸಜ್ಜನಿಕೆಯ ರಾಜಕಾರಣಿ, ಮುತ್ಸದ್ದಿ ದಿವಂಗತ ಡಿ.ದೇವರಾಜ ಅರಸು ಅವರ ಜೀವನ ಶೈಲಿ ಪ್ರತಿಯೊಬ್ಬ ನಾಗರಿಕರಿಗೂ ಮಾರ್ಗದರ್ಶನವಾಗಬೇಕು, ಹಿಂದುಳಿದ ವರ್ಗಗಳ ಇಲಾಖೆಯನ್ನು ಹುಟ್ಟು ಹಾಕುವ ಮೂಲಕ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಕೂಡ ನ್ಯಾಯ ಒದಗಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.

ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ವಿದ್ಯೋದಯ ಕಾಲೇಜಿನ ಉಪನ್ಯಾಸಕ ಮೂಗೂರು ಕುಮಾರಸ್ವಾಮಿ ಮಾತನಾಡಿ, ದೇವರಾಜ ಅರಸು ಅವರು ಬಡವರ ಪರವಾಗಿದ್ದರು. ಬಡತನ ರೇಖೆಗಿಂತ ಕೆಳಗಿನವರಿಗೆ ಮುಖ್ಯವಾಹಿನಿಗೆ ತಂದು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಸದೃಢಗೊಳಿಸುವ ಗುರಿ ಹೊಂದಿದ ಅವರು, ಈ ರಾಜ್ಯದ, ಈ ದೇಶದ ಹಿಂದುಳಿದ ವರ್ಗಗಳ, ದಲಿತರ, ಬಡವರ ಮನಸ್ಸಿನಲ್ಲಿ ಎಂದೆಂದಿಗೂ ಚಿರಸ್ಥಾಯಿಯಾಗಿದ್ದಾರೆ ಎಂದರು.

ಅಸಾಧ್ಯವಾದ ಸಾಧನೆಗಳನ್ನು ಮೌನವಾಗಿ ಮಾಡಿ ತೋರಿಸಿದ "ಮೌನಕ್ರಾಂತಿಯ ಹರಿಕಾರ" ಅವರಾಗಿದ್ದಾರೆ. ದೇವರಾಜ ಅರಸು ಅವರು ಡಾ.ಬಿ.ಆರ್. ಅಂಬೇಡ್ಕರ್, ಮಹಾತ್ಮ ಗಾಂಧಿ ಅವರ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡಿದ್ದರು. ವಿದ್ಯೆ ಕಲಿತು ಸಾಕಷ್ಟು ಜ್ಞಾನ ಪಡೆದ ಅವರು ಯಾವುದೇ ನೌಕರಿಗೆ ಹೋಗದೇ ತಮ್ಮ ಸ್ವಂತ ಗ್ರಾಮಕ್ಕೆ ಬಂದು ಕೃಷಿ ಕಾರ್ಯ ಕೈಗೊಂಡು ತಮ್ಮ ಗ್ರಾಮಕ್ಕೆ ಮಾದರಿಯಾಗುವ ಹಾಗೆ ಕೆಲಸ ಮಾಡಿದರು. ಬಡವರ ಸಮಸ್ಯೆಯನ್ನು ಮನೆಯಲ್ಲಿ ಕುಳಿತುಕೊಂಡು ಕೇಳಿ ನ್ಯಾಯ ದೊರಕಿಸಿಕೊಡುವ ಕೆಲಸ ಮಾಡಿದರು. ಮುಂದೆ ಒಂದು ದಿನ ಅವರು ಜನನಾಯಕರಾಗಿ ಹೊರಹೊಮ್ಮಿದರು ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ಹಾಗೂ ಕ್ರೀಡೆಯಲ್ಲಿ ಭಾಗವಹಿಸಿ ವಿಜೇತರಾದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಬಿಇಓ ಶೋಭಾ, ಸಿಡಿಪಿಓ ಭವ್ಯಶ್ರೀ, ಬಾಬು ಜಗಜೀವನ ರಾಮ್ ಸಂಘದ ಮಾಜಿ ಅಧ್ಯಕ್ಷ ಮಲಿಯೂರು ಶಂಕರ್, ವಿಚಾರವಾದಿ ಕೆ.ಎನ್. ಪ್ರಭುಸ್ವಾಮಿ, ಮನ್ಸೂರ್ ಆಲಿ, ಅಲಗೂಡು ಪುಟ್ಟಮಲ್ಲಯ್ಯ, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಪುರಸಭೆ ಮುಖ್ಯಾಧಿಕಾರಿ ಬಿ.ಕೆ. ವಸಂತ ಕುಮಾರಿ, ಸಮಾಜ ಕಲ್ಯಾಣ ಅಧಿಕಾರಿ ರಾಮೇಗೌಡ, ಹಿಂದುಳಿದ ವರ್ಗಗಳ ತಾಲೂಕು ಕಲ್ಯಾಣಾಧಿಕಾರಿ ಎಂ.ರಾಜಣ್ಣ, ವ್ಯವಸ್ಥಾಪಕ ಅನಂತರಾಮ್ ತಿವಾರಿ, ಶಿಕ್ಷಕ ಸಿದ್ದೇಗೌಡ,ನಿಲಯ ಮೇಲ್ವಿಚಾರಕರಾದ ವೆಂಕಟಶೆಟ್ಟಿ, ವರಲಕ್ಷ್ಮಿ, ಮಹದೇವಸ್ವಾಮಿ, ತಾಲೂಕು ಕಚೇರಿಯ ಎಸ್.ನಿತಿನ್ ಮತ್ತಿತರರಿದ್ದರು.

ರಾಜಕೀಯ ಪರಿಸ್ಥಿತಿ ಹದಗೆಡುವಲ್ಲಿ ಜನಪ್ರತಿನಿಧಿಗಳು, ಮತದಾರರು ಪಾಲುದಾರರು

●ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಬೇಸರದ ನುಡಿ ●'ಅತ್ಯುತ್ತಮ ಶಾಸಕ' ಕೆ.ಟಿ.ಶ್ರೀಕಂಠೇಗೌಡರಿಗೆ ಅಭಿನಂದನೆ ●ಜನ ಜಾಗೃತರಾದರೆ ಸುಧಾರಣೆಯ ಆಶಾಭಾವನೆ ಇದೆ



ಮೈಸೂರು, ಆ.20(ಎಸ್‌ಬಿಡಿ)– ಈಗಿನ ರಾಜಕೀಯ ಪರಿಸ್ಥಿತಿ ಹಾಗೂ ಜನರ ಮನಃಸ್ಥಿತಿ ಆತಂಕ ಉಂಟುಮಾಡುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ಮೈಸೂರಿನ ಮಾನಸಗಂಗೋತ್ರಿ ವಿಜ್ಞಾನಭವನದಲ್ಲಿ ಸುತ್ತೂರು ಶ್ರೀಗಳ ಸಾನ್ನಿಧ್ಯದಲ್ಲಿ ಭಾನುವಾರ ನಡೆದ 2022ನೇ ಸಾಲಿನ ಕರ್ನಾಟಕ ವಿಧಾನಪರಿಷತ್ತಿನ 'ಅತ್ಯುತ್ತಮ ಶಾಸಕ' ಪ್ರಶಸ್ತಿಗೆ ಭಾಜನರಾಗಿರುವ ಕೆ.ಟಿ.ಶ್ರೀಕಂಠೇಗೌಡ(ಮಾಜಿ ಎಂಎಲ್‌ಸಿ) ಅವರಿಗೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜಕೀಯ ಪರಿಸ್ಥಿತಿ ಹದಗೆಡುವಲ್ಲಿ ಜನಪ್ರತಿನಿಧಿಗಳು ಹಾಗೂ ಮತದಾರರು ಪಾಲುದಾರರೆಂದು ಬೇಸರ ವ್ಯಕ್ತಪಡಿಸುವುದರ ಜೊತೆಗೆ ಸುಧಾರಣೆ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಜಾಗೃತರಾಗಿ, ಉತ್ತಮರನ್ನು ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದರು.

ಉತ್ತಮರು, ಸಾಮಾಜಿಕ ಸಮಸ್ಯೆಗಳ ಬಗ್ಗೆ ಅರಿವಿರುವವರು, ಪಾರದರ್ಶಕವಾಗಿ ಬದ್ಧತೆಯಿಂದ ಕೆಲಸ ಮಾಡುತ್ತೇನೆ ಎನ್ನುವವರು ಚುನಾವಣೆಯಲ್ಲಿ ಆಯ್ಕೆಯಾಗಲು ಸಾಧ್ಯವಾ? ಎನ್ನುವಂತಾಗಿದೆ. ಉತ್ತಮ ಕೆಲಸಗಳಿಂದಲೇ ನಾವು ಗೆದ್ದು ಬರಬಹುದೆಂದು ಭಾವಿಸಿರುತ್ತೇವೆ. ಆದರೆ ಫಲಿತಾಂಶ ಬಂದಾಗಲೇ ಹಣೇಬರಹ ಗೊತ್ತಾಗುವುದು. ಇದು ನಮ್ಮಿಂದಲೇ(ರಾಜಕಾರಣಿಗಳು) ಆದ ತಪ್ಪಾಗಿರಬಹುದು. ಆದರೆ ನಮ್ಮಿಂದ ಹಾಗೆ ಮಾಡಿಸಿದ್ದು ನೀವಲ್ಲವೆ?. ಚುನಾವಣೆಗಳಲ್ಲಿ ಪ್ರಾಮಾಣಿಕರನ್ನು ಆಯ್ಕೆ ಮಾಡದಿದ್ದರೆ ಮುಂದಿನ ಸ್ಥಿತಿ ಏನಾಗಬಹುದು ಎಂದು ಯೋಚಿಸಿದರೆ ಆತಂಕವಾಗುತ್ತದೆ ಎಂದರು.

ಜನ ಜಾಗೃತರಾಗಬೇಕು: ದೇಶದಲ್ಲಿ ಹಣದ ಕೊರತೆ ಇಲ್ಲ. ನಮ್ಮದು ಶ್ರೀಮಂತ ರಾಷ್ಟ್ರ. ರಾಜ್ಯದಲ್ಲೂ ನಿರೀಕ್ಷೆಗಿಂತ ಹೆಚ್ಚು ತೆರಿಗೆ ಸಂಗ್ರಹವಾಗುತ್ತಿದೆ. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ 70 ಸಾವಿರ ಕೋಟಿ ವಾಣಿಜ್ಯ ತೆರಿಗೆ ನಿರೀಕ್ಷಿಸಲಾಗಿತ್ತು. ಆದರೆ ಜನ 1 ಲಕ್ಷ ಕೋಟಿ ತೆರಿಗೆ ಪಾವತಿಸಿದ್ದಾರೆ. ಸಾರ್ವಜನಿಕರು ಕೇವಲ ತೆರಿಗೆ ಕಟ್ಟಿದರೆ ಸಾಲದು. ಆ ಹಣವನ್ನು ಸರ್ಕಾರ ಯಾವ ರೀತಿಯಲ್ಲಿ ಬಳಕೆ ಮಾಡುತ್ತಿದೆ, ಹೇಗೆ ದುರುಪಯೋಗವಾಗುತ್ತಿದೆ ಎಂದು ಗಮನಿಸಬೇಕು. ಆ ಬಗ್ಗೆ ಜಾಗೃತಿ ಮೂಡಿಸಿಕೊಂಡು ಪ್ರಶ್ನಿಸಬೇಕು. ಆದರೆ ಲೂಟಿ ಮಾಡುವವರು ಹಾಗೂ ಪ್ರಾಮಾಣಿಕರನ್ನು ಒಂದೇ ತಕ್ಕಡಿಯಲ್ಲಿ ತೂಗುತ್ತಾರೆ. ಉಳ್ಳವರಿಗೆ ಕಾನೂನು ವ್ಯವಸ್ಥೆ ಇದೆ. ಆದರೆ ಬಡವರಿಗೆ ನ್ಯಾಯ ದೊರಕದ ಪರಿಸ್ಥಿತಿ ನಿರ್ಮಾಣವಾಗಿದೆ. ವ್ಯವಸ್ಥೆಯ ವಾಸ್ತವತೆ ಗೊತ್ತಿದೆ. ಇದನ್ನು ಬದಲಾವಣೆ ಮಾಡಬೇಕೆಂಬ ಭಾವನೆಯೂ ಇದೆ. ಆದರೆ ಈ ನಿಟ್ಟಿನಲ್ಲಿ ಪ್ರಯತ್ನಗಳಾಗುತ್ತಿಲ್ಲ. ಜನ ನಿರಾಶರಾಗದೆ ಜಾಗೃತರಾಗಬೇಕು. ಇಲ್ಲವಾದರೆ ದೇಶದ ಪರಿಸ್ಥಿತಿ ಊಹಿಸಿಕೊಳ್ಳುವುದೂ ಕಷ್ಟ ಎಂದು ಆತಂಕ ವ್ಯಕ್ತಪಡಿಸಿದರು.

ಮೇಲ್ಮನೆ ಚಿಂತಕ ಚಾವಡಿಯಾಗಿ ಉಳಿದಿಲ್ಲ: ವಿವಿಧ ಕ್ಷೇತ್ರಗಳ ಪ್ರತಿನಿಧಿಗಳು, ಬುದ್ಧಿವಂತರು, ವಿಚಾರವಂತರು ಮೇಲ್ಮನೆ ವಿಧಾನಪರಿಷತ್‌ಗೆ ಆಯ್ಕೆಯಾಗುತ್ತಾರೆ. ಮೇಲ್ಮನೆಯನ್ನು ಹಿಂದೆ ಚಿಂತಕರ ಚಾವಡಿ ಎನ್ನಲಾಗುತ್ತಿತ್ತು. ಆದರೆ ಇತ್ತೀಚೆಗೆ ಬದಲಾಗಿದೆ. ವಿಧಾನಸಭೆಯಲ್ಲೂ ಯಾರೋ ಒಬ್ಬರು ಸುದೀರ್ಘವಾಗಿ ಮಾತನಾಡುವುದರಿಂದ ಬೇರೆಯವರಿಗೆ ಮಾತನಾಡುವ ಅವಕಾಶವೇ ಸಿಗುವುದಿಲ್ಲ. ಹಿಂದಿನಂತೆ ಕಲಾಪಗಳು ನಡೆಯುವುದಿಲ್ಲ. ಕಲಾಪಗಳಲ್ಲಿ ಯಾವ ನಾಯಕರು, ಯಾವ ವಿಷಯಗಳ ಬಗ್ಗೆ, ಏನು ಮಾತನಾಡಿದ್ದಾರೆ ಎನ್ನುವುದನ್ನು ಜನರೂ ಗಮನಿಸುವುದಿಲ್ಲ. ಮದುವೆ ಇನ್ನಿತರ ಕಾರ್ಯಕ್ರಮಗಳಿಗೆ ಆಹ್ವಾನಿಸುತ್ತಾರೆ. ಹೋಗದಿದ್ದರೆ ಚುನಾವಣೆ ವೇಳೆ ಅದೇ ವಿಚಾರ ಮುಂದಿಟ್ಟು ಮಾತನಾಡುತ್ತಾರೆ. ಬೆಳಗ್ಗೆಯಿಂದ ರಾತ್ರಿವರೆಗೂ ಇದೇ ಪರಿಸ್ಥಿತಿ ಇರುವುದರಿಂದ ಸರ್ಕಾರದ ನಿರ್ಣಯಗಳ ಬಗ್ಗೆಯೂ ಅಧ್ಯಯನ ಮಾಡಲಾಗುವುದಿಲ್ಲ. ಹೀಗಾದರೆ ಉತ್ತಮ ಸಂಸದೀಯ ಪಟುವಾಗಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.

ಕೆಟಿಎಸ್‌ಗೆ ಬಣ್ಣನೆ: ಕೆ.ಟಿ.ಶ್ರೀಕಂಠೇಗೌಡರು ವಿಧಾನ ಪರಿಷತ್ ಸದಸ್ಯರಾಗಿ ಸದನದ ಕಲಾಪಗಳಲ್ಲಿ ಶಿಕ್ಷಕರು ಹಾಗೂ ಪದವೀಧರರ ಕ್ಷೇತ್ರವನ್ನು ಯಶಸ್ವಿಯಾಗಿ ಪ್ರತಿನಿಧಿಸಿ, ಹಲವು ಗಂಭೀರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದು, ಪರಿಹಾರ ಕಲ್ಪಿಸುವಲ್ಲಿ ಸಮರ್ಥವಾಗಿ ಸೇವೆ ಸಲ್ಲಿಸಿದ್ದಾರೆ. ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಇವರು, ಸ್ನೇಹಿತರು, ಹಿತೈಷಿಗಳು, ಶಿಕ್ಷಕರು ಹಾಗೂ ಪದವೀಧರರ ಬೆಂಬಲದಿಂದ ವಿಧಾನಪರಿಷತ್‌ನಲ್ಲಿ ಪ್ರತಿನಿಧಿಸುವ ಅವಕಾಶ ಸಿಕ್ಕಾಗ ಎಲ್ಲರ ಧ್ವನಿಯಾಗಿ ಕೆಲಸ ಮಾಡಿದ್ದಾರೆ. ನಾಡಿನ ಹಲವು ಜ್ವಲಂತ ಸಮಸ್ಯೆಗಳ ಬಗ್ಗೆಯೂ ಚರ್ಚೆ ಮಾಡಿ, ಸರ್ಕಾರದ ಗಮನ ಸೆಳೆದಿದ್ದಾರೆ. ನಾನು ಎರಡು ಬಾರಿ ಮುಖ್ಯಮಂತ್ರಿಯಾಗಿದ್ದಾಗಲೂ ಇವರ ಬದ್ಧತೆಯನ್ನು ಗಮನಿಸಿದ್ದೇನೆ. ಉತ್ತಮ ಸಂಸದೀಯ ಪಟುವಾಗಿದ್ದರಿಂದಲೇ ಅತ್ಯುತ್ತಮ ಶಾಸಕ ಪ್ರಶಸ್ತಿ ದಕ್ಕಿದೆ ಎಂದು ಪ್ರಶಂಸಿಸಿದರು.

ಆತ್ಮೀಯ ಅಭಿನಂದನೆ: 'ಅತ್ಯುತ್ತಮ ಶಾಸಕ' ಪ್ರಶಸ್ತಿಗೆ ಬಾಜನರಾಗಿರುವ ಕೆ.ಟಿ.ಶ್ರೀಕಂಠೇಗೌಡ ಹಾಗೂ ಅವರ ಪತ್ನಿ ಬಿ.ಎಂ.ವೀಣಾ ಅವರನ್ನು ಅಭಿನಂದನಾ ಸಮಿತಿ ವತಿಯಿಂದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಇನ್ನಿತರ ಗಣ್ಯರು ಆತ್ಮೀಯವಾಗಿ ಅಭಿನಂದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹಾಗೂ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ ಮಾತನಾಡಿ, ಕೆ.ಟಿ.ಶ್ರೀಕಂಠೇಗೌಡರ ಬಣ್ಣಿಸಿದರು. ಕೆ.ಟಿ.ಶ್ರೀಕಂಠೇಗೌಡರು, ತಮ್ಮ ರಾಜಕೀಯ ಜೀವನ, ಹೆಚ್.ಡಿ.ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರ ಸಹಕಾರವನ್ನು ಸ್ಮರಿಸಿ ಕೊಂಡರು. ಮಂಡ್ಯದ ಕರ್ನಾಟಕ ಸಂಘದ ಅಧ್ಯಕ್ಷರೂ ಆದ ಸಾಹಿತಿ ಪ್ರೊ.ಜಯಪ್ರಕಾಶ ಗೌಡ ಹಾಗೂ ಮೈಸೂರು ವಿವಿ ವಿಶ್ರಾಂತ ಪ್ರಾಧ್ಯಾಪಕ ಡಾ.ಹೆಚ್.ಎಂ.ರಾಜಶೇಖರ ಅಭಿನಂದನಾ ನುಡಿಗಳನ್ನಾಡಿದರು. ಸಿ.ಎನ್.ಮಂಜೇಗೌಡ, ಅಭಿನಂದನಾ ಸಮಿತಿ ಅಧ್ಯಕ್ಷ ಡಾ.ಕೆ.ಕಾಳಚನ್ನೇಗೌಡ, ಲಯನ್ ಕೆ.ದೇವೇಗೌಡ, ನಗರ ಪಾಲಿಕೆ ಸದಸ್ಯರಾದ ಕೆ.ವಿ.ಶ್ರೀಧರ್, ಪ್ರೇಮಾ ಶಂಕರೇಗೌಡ, ಎಸ್‌ಬಿಎಂ ಮಂಜು, ಜೆಡಿಎಸ್ ಮುಖಂಡ ಹೆಚ್.ಕೆ.ರಾಮು ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ತಾತ್ಕಾಲಿಕ ಕಾರ್ಯಕ್ರಮಗಳಿಗೆ ಜನ ಮನ್ನಣೆ ನೀಡ್ತಾರೆ

ಮೈಸೂರು, ಆ.20(ಎಸ್‌ಬಿಡಿ)– ಸ್ವಾಭಿಮಾನದಿಂದ ಜೀವನ ನಡೆಸಲು ಅನುಕೂಲಕರವಾದ ಶಾಶ್ವತ ಯೋಜನೆಗಳಿಗಿಂತ ತಾತ್ಕಾಲಿಕ ಕಾರ್ಯಕ್ರಮಗಳಿಗೆ ಜನ ಪ್ರಭಾವಿತರಾಗುತ್ತಿದ್ದಾರೆ ಎಂದು ಮಾಜಿ ಸಿಎಂ ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಅಮೃತಮಹೋತ್ಸವ ಆಚರಿಸಿದ್ದೇವೆ. ಆದರೆ ಈಗಲೂ ಸುಲಭವಾಗಿ ಸಿಗುವ ಅನುಕೂಲಗಳತ್ತ ಜನರ ಆಸಕ್ತಿ ಹೆಚ್ಚಿದೆ. ಸ್ವಾಭಿಮಾನದ ಬದುಕು ಕಲ್ಪಿಸಬಲ್ಲ ಸರ್ಕಾರವನ್ನು ಬಯಸುತ್ತಿಲ್ಲ. ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಗಳ ಮೂಲಕ ಕುಟುಂಬಕ್ಕೆ ವಾರ್ಷಿಕ 40 ಸಾವಿರ ಆರ್ಥಿಕ ನೆರವು ನೀಡುತ್ತಿದ್ದೇವೆ ಎನ್ನುತ್ತಾರೆ. ಇನ್ನೂ 10 ಗ್ಯಾರಂಟಿಗಳನ್ನು ನೀಡಲಿ, ನನಗೆ ಅಸೂಯೆಯಿಲ್ಲ. ಆದರೆ ಇದರ ಪರಿಣಾಮವನ್ನೂ ಜನ ತಿಳಿಯಬೇಕಲ್ಲವೇ? ಎಂದು ಪ್ರಶ್ನಿಸಿದರು.

ಸಮಾನತೆಗಾಗಿ ಈ ಗ್ಯಾರಂಟಿಗಳು ಬೇಕು ಎಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ಆದರೆ ರಾಜ್ಯದ ಮೇಲೆ 5.66 ಲಕ್ಷ ಕೋಟಿ ಸಾಲದ ಹೊರೆಯಿದೆ. ಈ ವರ್ಷ 86 ಸಾವಿರ ಕೋಟಿ ಸಾಲ ಮಾಡುತ್ತಿದ್ದಾರೆ. ಈ ಸಾಲ ತೀರಿಸುವವರು ಯಾರು?. ಪ್ರತಿ ಕುಟುಂಬ ಹಾಗೂ ವ್ಯಕ್ತಿಯ ಮೇಲೆ ಸಾಲದ ಹೊರೆ ಬೀಳುತ್ತದೆ. ಶಿಕ್ಷಣ, ಆರೋಗ್ಯ, ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಶಾಶ್ವತ ಕಾರ್ಯಕ್ರಮ ರೂಪಿಸದೆ, ರೈತರ ಬದುಕಿಗೆ ಭದ್ರತೆ ನೀಡದೆ, ಇನ್ನೂ ಎಷ್ಟು ವರ್ಷಗಳ ಕಾಲ ಗ್ಯಾರಂಟಿ ಕಾರ್ಯಕ್ರಮಗಳನ್ನು ನೀಡಲು ಸಾಧ್ಯ?. ಈ ನಿಟ್ಟಿನಲ್ಲಿ ದೂರದೃಷ್ಟಿಯಿಂದ ಜೆಡಿಎಸ್‌ನ ಪಂಚರತ್ನ ಯೋಜನೆಗಳನ್ನು ರೂಪಿಸಲಾಗಿತ್ತು. ಆದರೆ ಜನ, ತಾತ್ಕಾಲಿಕ ಕಾರ್ಯಕ್ರಮಗಳಿಗೆ ಪ್ರಭಾವಿತರಾದರು ಎಂದರು.

ಗುತ್ತಿಗೆದಾರರ ಸಂಘದ ಅಧ್ಯಕ್ಷ ಇಂಗ್ಲಿಷ್ ಪತ್ರಿಕೆಗೆ ನೀಡಿರುವ ಸಂದರ್ಶನದಲ್ಲಿ ಬಿಜೆಪಿ ಸರ್ಕಾರದಲ್ಲಿ 40 ಪರ್ಸೆಂಟ್ ಕಮಿಷನ್ ಪಡೆಯುತ್ತಿದ್ದದ್ದಕ್ಕೆ ಸಾಕ್ಷಿಗಳಿಲ್ಲ, ಈ ಸರ್ಕಾರದಲ್ಲೂ ಮುಂದುವರೆಯಬಹುದು. ಆದರೆ 20 ಪರ್ಸೆಂಟ್ ತೆಗೆದುಕೊಳ್ಳಿ ಎಂದಿರುವುದಾಗಿ ತಿಳಿಸಿದ್ದಾರೆ ಎಂದರೆ ಈಗಿನ ಪರಿಸ್ಥಿತಿ ಅರ್ಥವಾಗುತ್ತದೆ. ರಾಜ್ಯಪಾಲರಿಗೆ ಸಚಿವರೊಬ್ಬರ ವಿರುದ್ಧ ಪತ್ರ ಬರೆದಿರುವ ಸಂಬಂಧ ಸಿಐಡಿ ತನಿಖೆಗೆ ವಹಿಸಿದ್ದಾರೆ. ಆರೋಪ ಹೊತ್ತವರಿಂದಲೇ ವರದಿ ಕೇಳಿದ್ದಾರೆ. ಪ್ರಕರಣದ ಸತ್ಯಾಸತ್ಯತೆಯ ತನಿಖೆ ಬಿಟ್ಟು, ಪತ್ರದ ಅಸಲಿಯತ್ತಿನ ಹಿಂದೆ ಬಿದ್ದಿದ್ದಾರೆ ಎಂದು ವ್ಯಂಗ್ಯವಾಡಿದರು.

ಶ್ರೀಕಂಠೇಗೌಡರು ಬಯಸಿದರೆ ಸ್ಪರ್ಧೆಗೆ ಪಕ್ಷ ತೀರ್ಮಾನ

ಮೈಸೂರು, ಆ.20– ಶ್ರೀಕಂಠೇಗೌಡರು ಬಯಸಿದರೆ ವಿಧಾನಪರಿಷತ್‌ಗೆ ಶಿಕ್ಷಕರ ಕ್ಷೇತ್ರದಿಂದ ನಡೆಯುವ ಚುನಾವಣೆಗೆ ಪಕ್ಷ ಪರಿಗಣಿಸಲಿದೆ. ಆದರೆ ರಾಜಕೀಯ ಸುಧಾರಣೆ ಮೈಸೂರಿನಿಂದಲೇ ಆರಂಭವಾಗಬೇಕು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ಈಗಿನ ಪರಿಸ್ಥಿತಿಯಲ್ಲಿ ಶ್ರೀಕಂಠೇಗೌಡರಂತಹ ಉತ್ತಮ ಸಂಸದೀಯ ಪಟುಗಳ ಅವಶ್ಯಕತೆ ಇದೆ. ಇವರು ವಿಶೇಷವಾಗಿ ಶಿಕ್ಷಕ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿ, ಪರಿಹಾರ ಕಲ್ಪಿಸಿದ್ದಾರೆ. ಈ ಕ್ಷೇತ್ರಕ್ಕೆ ಜೆಡಿಎಸ್ ದೊಡ್ಡ ಕೊಡುಗೆ ನೀಡಿದೆ. ಹೆಚ್.ಡಿ.ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ 1 ಲಕ್ಷ ಶಿಕ್ಷಕರ ನೇಮಕ ಮಾಡಿದ್ದರು. ನಾನು ಮೊದಲ ಬಾರಿ ಮುಖ್ಯಮಂತ್ರಿಯಾದಾಗ ಅನುದಾನ ರಹಿತ ಶಾಲೆಗಳಿಗೆ ಅನುದಾನ ಕಲ್ಪಿಸಿದೆ. ಪದವಿಪೂರ್ವ ಹಾಗೂ ಪ್ರಥಮದರ್ಜೆ ಕಾಲೇಜು ಕಾರ್ಯಾರಂಭಿಸಿ, ಶಿಕ್ಷಕರ ನೇಮಕ ಮಾಡಿದೆ. 2ನೇ ಬಾರಿ ಸಿಎಂ ಆದಾಗ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಿದೆ ಎಂದು ತಿಳಿಸಿದರು.

ಶ್ರೀಕಂಠೇಗೌಡರಿಗೆ ಸೇವೆ ಸಲ್ಲಿಸಲು ಮತ್ತೆ ಅವಕಾಶವಾಗಬೇಕು ಎಂದು ಶಾಸಕ ತನ್ವೀರ್ ಸೇಠ್ ಹಾಗೂ ಪ್ರೊ.ರಾಜಶೇಖರ್ ಅವರು ಹೇಳಿದರು. ಮುಂದಿನ ದಿನಗಳಲ್ಲಿ ಶಿಕ್ಷಕರ ಕ್ಷೇತ್ರದ ಚುನಾವಣೆ ಎದುರಾಗುತ್ತದೆ. ರಾಜಕೀಯ ವ್ಯವಸ್ಥೆ ಬದಲಾಗದಿದ್ದರೆ ಶ್ರೀಕಂಠೇಗೌಡರಂತಹ ಸಂಸದೀಯ ಪಟುಗಳನ್ನು ನೋಡಲು ಸಾಧ್ಯವಿಲ್ಲ. ಕ್ರಿಕೆಟ್, ಮಟ್ಕಾ ದಂಧೆ ಮಾಡಿ ಹಣ ಮಾಡಿರುವವರು ಆ ಬಲದಿಂದಲೇ ಗೆದ್ದು ಬರುತ್ತಾರೆ. ಮೈಸೂರಿನಲ್ಲಿ ವಿದ್ಯಾವಂತರು, ಬುದ್ಧಿವಂತರು, ಸುಸಂಸ್ಕೃತರಿದ್ದೀರಿ. ಮೈಸೂರಲ್ಲಿ ಶಿಕ್ಷಣ ಕಾಶಿ ಎನ್ನಬಹುದು. ಶ್ರೀಕಂಠೇಗೌಡರು ಬಯಸಿದರೆ ಪಕ್ಷ ಅವಕಾಶ ನೀಡಲಿದೆ. ಆದರೆ ಗೆಲ್ಲಿಸುವ ನಿರ್ಧಾರವನ್ನು ನೀವು ಮಾಡಬೇಕು. ಉತ್ತಮ ಸಂಸದೀಯ ಪಟುವನ್ನು ಆಯ್ಕೆ ಮಾಡುವ ಉತ್ತಮ ಸಂದೇಶ ಇಲ್ಲಿಂದಲೇ ಆರಂಭವಾಗಬೇಕು. ಆಗ ಮಾತ್ರ ಈ ಅಭಿನಂದನಾ ಕಾರ್ಯಕ್ರಮಕ್ಕೆ ನಿಜವಾದ ಅರ್ಥ ಬರುತ್ತದೆ ಎಂದು ಮನವಿ ಮಾಡಿದರು.

ವಿಶ್ವಾಸ ವ್ಯಕ್ತಪಡಿಸಿದ ಹೆಚ್‌ಡಿಕೆ: ಶಾಸಕ ತನ್ವೀರ್ ಸೇಠ್ ಮಾತನಾಡಿ, ಕೆಟಿ.ಶ್ರೀಕಂಠೇಗೌಡರನ್ನು ಹಾಡಿ ಹೊಗಳಿದರು. ಕೊನೆಯಲ್ಲಿ ಇವರ ಮುಂದಿನ ಜೀವನ ಸುಖಕರವಾಗಿರಲಿ. ಸಮಾಜಕ್ಕೆ ಇವರ ಸೇವೆ ಅಗತ್ಯ. ಆದರೆ ರಾಜಕೀಯ ಬದಲಾವಣೆ ಸಂದರ್ಭದಲ್ಲಿ ಯಾರು ಎಲ್ಲಿರುತ್ತಾರೋ ಹೇಳಲಾಗದು. ಯಾವ ವಿಧಾನದಲ್ಲಾದರೂ ಶ್ರೀಕಂಠೇಗೌಡರ ಸೇವೆ ಸಮಾಜಕ್ಕೆ ಸಿಗುವಂತಾಗಲಿ ಎಂದು ನಗುತ್ತಾ ಮಾತು ಮುಗಿಸಿದರು. ಇದಕ್ಕೆ ನಕ್ಕು ಸುಮ್ಮನಾಗಿದ್ದ ಹೆಚ್.ಡಿ.ಕುಮಾರಸ್ವಾಮಿ ತಮ್ಮ ಭಾಷಣದಲ್ಲಿ ಪ್ರತಿಕ್ರಿಯೆ ನೀಡಿದರು. ತನ್ವೀರ್ ಸೇಠ್ ಅವರು ರಾಜಕೀಯ ಬದಲಾವಣೆ ಬಗ್ಗೆ ಮಾತನಾಡಿದರು. ಆದರೆ ಶ್ರೀಕಂಠೇಗೌಡರು ಮಹಾತ್ಮ ಗಾಂಧಿ, ಲೋಹಿಯಾ, ಹೆಚ್.ಡಿ.ದೇವೇಗೌಡರ ಹೋರಾಟದ ಪ್ರಭಾವದೊಂದಿಗೆ ಬೆಳೆದಿದ್ದಾಗಿ ಹೇಳಿದ್ದಾರೆ ಎನ್ನುವ ಮೂಲಕ ಶ್ರೀಕಂಠೇಗೌಡರು ಪಕ್ಷ ತೊರೆಯುವುದಿಲ್ಲ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಮಾಜಿ ಸಿಎಂ ತನ್ವೀರ್ ಸೇಠ್!: ಪ್ರೊ.ಹೆಚ್.ಎಂ.ರಾಜಶೇಖರ್ ಅಭಿನಂದನಾ ನುಡಿ ಆರಂಭಿಸುವ ಮುನ್ನ ಗಣ್ಯರ ಹೆಸರು ಹೇಳುವ ಭರದಲ್ಲಿ ಮಾಜಿ ಸಿಎಂ, ಹಾಲಿ ಶಾಸಕ ತನ್ವೀರ್ ಸೇಠ್ ಎಂದರು. ತಕ್ಷಣ ಹೆಚ್.ಡಿ.ಕುಮಾರಸ್ವಾಮಿ ನಗುತ್ತಾ, ಪಕ್ಕದಲ್ಲೇ ಇದ್ದ ತನ್ವೀರ್ ಸೇಠ್ ಕೈಕುಲುಕಿದರು. ಸುತ್ತೂರು ಶ್ರೀಗಳು, ಜಿಟಿಡಿ ಸೇರಿದಂತೆ ಇಡೀ ಸಭಾಂಗಣದಲ್ಲಿ ನಗು ಉಕ್ಕಿತು.

ಶ್ರೀಗಳ ಸಾನ್ನಿಧ್ಯ, ಸಾಧಕರ ಸಮ್ಮುಖದಲ್ಲಿ ಕು.ನಿನಾದ ಎಸ್.ಹೆಗ್ಡೆ ಭರತನಾಟ್ಯ ರಂಗಪ್ರವೇಶ

ಮೈಸೂರಿನ ಸಾಂಸ್ಕೃತಿಕ ರಾಯಭಾರಿ ಪಟ್ಟ ಇಮ್ಮಡಿಗೊಳ್ಳಬೇಕಿದೆ; ಯದುವೀರ್ ಅಭಿಮತ





ಮೈಸೂರು, ಆ.20(ಸಿಎನ್)-ಶ್ರೀಗಳ ಸಾನಿಧ್ಯ ಹಾಗೂ ಸಾಧಕರ ಸಮ್ಮುಖದಲ್ಲಿ ಹಿರಿಯ ಪೊಲೀಸ್ ಅಧಿಕಾರಿ ಎಸ್.ಸಂದೇಶ್ ಕುಮಾರ್ ಹಾಗೂ ಕೆ.ದೀಪ್ತಿ ದಂಪತಿ ಪುತ್ರಿ, ಕು.ನಿನಾದ ಎಸ್.ಹೆಗ್ಡೆ ವಿಧ್ಯುಕ್ತ ಭರತನಾಟ್ಯ ರಂಗ ಪ್ರವೇಶ ನೆರವೇರಿತು.

ನಗರದ ಕಲಾಮಂದಿರದಲ್ಲಿ ಭಾನುವಾರ ನಡೆದ ಕು.ನಿನಾದ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮದಲ್ಲಿ ರಾಜವಂಶಸ್ಥ ಯದುವೀರ್ ಒಡೆಯರ್ ಮಾತನಾಡಿ, ನಮ್ಮ ಮೈಸೂರು ಪರಂಪರೆಯ ಗತ ವೈಭವಕ್ಕೆ ಮತ್ತೊಂದು ಸಾಕ್ಷಿ ಎಂದರೆ ಭರತನಾಟ್ಯ ಎನ್ನಬಹುದು. ಕಲೆಗಳ ತವರೂರಾಗಿದ್ದ ಹಿಂದಿನ ಮೈಸೂರನ್ನು ನಾವು ಮರುಸ್ಥಾಪಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ನಮ್ಮ ಮೈಸೂರಿಗರು ಇಂತಹ ಕಾರ್ಯಕ್ರಮಗಳ ಮೂಲಕ ನಾಂದಿ ಹಾಡಬೇಕಿದೆ ಎಂದು ಸಲಹೆ ನೀಡಿದರು.

ಮೈಸೂರಿನ ಸಾಂಸ್ಕೃತಿಕ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿರುವುದು ಹೆಮ್ಮೆಯ ವಿಚಾರವಾಗಿದೆ. ಇಡೀ ಭಾರತದ ಪರಂಪರೆಯೂ ನಾಟ್ಯ ರಂಗವನ್ನು ಸಾಂಕೇತಿಸುತ್ತದೆ. ನಮ್ಮ ಬ್ರಹ್ಮಾಂಡ ಹಾಗುಹೋಗುಗಳು ಸಹ ನಟರಾಜನ ಒಂದು ಭಂಗಿಯಲ್ಲಿ ಅಡಕವಾಗಿದೆ. ಈ ವಿಸ್ಮಯವೇ ನಮ್ಮ ಸನಾತನ ಧರ್ಮದ ದ್ಯೋತಕವಾಗಿದೆ ಎಂದರು.

ನಮ್ಮ ಪೂರ್ವಜರ ಕಾಲದಿಂದಲೂ ಮೈಸೂರು ಕಲೆಗೆ ಕೇಂದ್ರವಾಗಿತ್ತು ಇಲ್ಲಿಂದ ಚದುರಿದ ಕಲೆಗಳನ್ನು ಮತ್ತೆ ಮೈಸೂರಿನಲ್ಲಿ ಕ್ರೋಢೀಕರಿಸಿ ಸಾಂಸ್ಕೃತಿಕ ರಾಯಬಾರಿ ಎಂಬ ಪಟ್ಟವನ್ನು ಇಮ್ಮಡಿಗೊಳಿಸಬೇಕಿದೆ ಎಂದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಮಂಜಮ್ಮ ಜೋಗತಿ ಮಾತನಾಡಿ, ದೇವರು ದೇವಸ್ಥಾನದಲ್ಲಿ ಇಲ್ಲ, ಬದಲಾಗಿ ನಾವು ಮಾಡುವ ಕೆಲಸದಲ್ಲಿ ಇದ್ದಾರೆ. ನಮ್ಮ ಕರ್ತವ್ಯವನ್ನು ಬಹಳ ಜವಾಬ್ದಾರಿಯಿಂದ ಪ್ರತಿಫಲಾಪೇಕ್ಷೆ ಬಯಸದೆ ಮಾಡಬೇಕು. ಆಗ ಬಿರುದು, ಸನ್ಮಾನಗಳು ನಮ್ಮನ್ನು ಅರಸಿ ಬರುತ್ತವೆ ಎಂದರು.

ಗುರುಗಳಿಗೆ, ಸಮಯಕ್ಕೆ ಮೊದಲು ಆದ್ಯತೆ ಕೊಡಬೇಕು. ಗುರುಗಳ ಗುಲಾಮನಾಗುವ ತನಕ ದೊರೆಯದು ಮುಕುತಿ ಎಂಬ ಮಾತಿನಂತೆ ಬದುಕಬೇಕು. ನಾನು ಯಾವುದೇ ಕಾಲೇಜು ಮೆಟ್ಟಿಲು ಹತ್ತಿಲ್ಲ, ನಾನು ಓದಿದ್ದು 8ನೇ ತರಗತಿ. ಆದರೆ ರಾಜ್ಯದ ಎಲ್ಲಾ ಕಾಲೇಜು ಮೆಟ್ಟಿಲು ಹತ್ತುವಂತೆ ಮಾಡಿದ್ದು ನಾನು ಕಲಿತಿದ್ದ ಜಾನಪದ ಕಲೆ ಎಂದರು.

ನನಗೆ ಬಂದ ಪದ್ಮಶ್ರೀ ಪ್ರಶಸ್ತಿ ನಮ್ಮ ಸಮಾಜದ ತೃತೀಯ ಲಿಂಗಿಗಳಿಗೆ, ಪತ್ರಕರ್ತರಿಗೆ, ನನ್ನ ಗುರುಗಳಿಗೆ ಅರ್ಪಿಸುತ್ತೇನೆ. ಒಂದು ತಳ ಸಮುದಾಯದಿಂದ ಬಂದಂತಹ ನನ್ನನ್ನು ಗುರುತಿಸಿ ಉನ್ನತ ಪ್ರಶಸ್ತಿ ನೀಡಿರುವುದು ನಮ್ಮ ಸಮಾಜದವರಿಗೆ ಪ್ರೇರಣೆಯಾಗಲಿ ಎಂದರು.

ವೇದಿಕೆ ಕಾರ್ಯಕ್ರಮದ ಬಳಿಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ನಾಟ್ಯ ವಿದುಷಿ ಪಂಕಜ ರಾಮಕೃಷ್ಣ ಅವರಿಂದ ಕು.ನಿನಾದರಿಗೆ ಕಿಂಕಿಣಿ(ನೂಪುರ)ಪ್ರದಾನ ಮಾಡಲಾಯಿತು. ಗುರುಗಳಿಗೆ ಪುಷ್ಪಾಂಜಲಿ ಅರ್ಪಿಸುವ ಮೂಲಕ ಕು.ನಿನಾದ ಭರತನಾಟ್ಯಕ್ಕೆ ಅಧಿಕೃತ ಚಾಲನೆ ನೀಡಿದರು. ಇದೇ ವೇಳೆ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಚಂಬಿ ಪುರಾಣಿಕ್, ದೀಮಹಿ ಸೆಂಟರ್ ಆಫ್ ಆರ್ಟ್ಸ್‌ನ ಡಾ. ಸೀತಾ ಕೋಟೆ, ಲಹರಿ ಮ್ಯೂಸಿಕ್‌ನ ನಿರ್ದೇಶಕ ಶ್ರೀ ಲಹರಿ ವೇಲು ಅವರನ್ನು ಅಭಿನಂದಿಸಲಾಯಿತು.

ಈ ವೇಳೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಶ್ರೀಗಳು, ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದ ಸ್ವಾಮೀಜಿ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ಜಿಲ್ಲಾಧಿಕಾರಿ ಡಾ.ಕೆವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ನಿಷ್ಠಾವಂತರ ಕಡೆಗಣಿಸದಿರಿ: ಬಿ.ಕೆ. ಹರಿಪ್ರಸಾದ್

ಬೆಂಗಳೂರು: 'ಹೊಸದಾಗಿ ಪಕ್ಷಕ್ಕೆ ಬಂದ ನಾಯಕರುಗಳಿಂದ ವಿರೋಧ ಬಂದರೂ ಲೆಕ್ಕಿಸದೆ ಪಕ್ಷದ ನಿಷ್ಠಾವಂತರಿಗೆ ಅಧಿಕಾರದಲ್ಲಿ ಅವಕಾಶಗಳನ್ನು ಕಲ್ಪಿಸಬೇಕು ಎಂದು ಪಕ್ಷದ ನಾಯಕರಿಗೆ ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಸಲಹೆ ನೀಡಿದರು.

ಕೆಪಿಸಿಸಿ ಕಚೇರಿಯಲ್ಲಿ ಮಾಜಿ ಪ್ರಧಾನಿ ದಿ. ರಾಜೀವ್ ಗಾಂಧಿ ಮತ್ತು ಮಾಜಿ ಮುಖ್ಯಮಂತ್ರಿ ದಿ. ದೇವರಾಜ ಅರಸು ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜೀವ್ ಗಾಂಧಿ ಹೇಳಿದಂತೆ ನಡೆದುಕೊಳ್ಳುತ್ತಿದ್ದರು. ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಕೂಡ ಅವರನ್ನೇ ಅನುಸರಿಸುತ್ತಾರೆಂದು ನಾನು ಭಾವಿಸುತ್ತೇನೆ. ಕಾರ್ಯಕರ್ತರು ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ. ನಮ್ಮವರಿಗೆ ಏನಾದರೂ ಸಹಾಯ ಮಾಡಬೇಕೆನ್ನುವ ಸಂದರ್ಭದಲ್ಲಿ ಹೊಸದಾಗಿ ಪಕ್ಷಕ್ಕೆ ಬಂದ ನಾಯಕರು ಅಡ್ಡಿಪಡಿಸುತ್ತಾರೆ. ಅದನ್ನು ಮೀರಿ ನಿಷ್ಠಾವಂತ ಕಾರ್ಯಕರ್ತರಿಗೆ ರಕ್ಷಣೆ ನೀಡಿದರೆ ಮಾತ್ರ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಜೀವಂತವಾಗಿರಲು ಸಾಧ್ಯ ಎಂದು ಎಚ್ಚರಿಸಿದರು.

ಪ್ರತಿ ಪಂಚಾಯಿತಿಯಲ್ಲೂ ರಾಜೀವ್ ಯುವ ಶಕ್ತಿಕೇಂದ್ರ: ಡಿಕೆಶಿ

ರಾಜೀವ್ ಯುವಶಕ್ತಿ ಕೇಂದ್ರ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲೂ ಸ್ವಾಮಿ ವಿವೇಕಾನಂದ ಸಂಘ ರಚನೆಗೆ ಹಿಂದಿನ ಸರ್ಕಾರ ಪ್ರಯತ್ನಿಸಿತ್ತು. ಹೊಸ ಸರ್ಕಾರ ರಚನೆಯಾಗುತ್ತಿದ್ದಂತೆ ರಾಜೀವ್ ಗಾಂಧಿ ಯುವ ಶಕ್ತಿ ಸಂಘ ಸ್ಥಾಪನೆಗೆ ಮುಂದಾಗಿದೆ. ರಾಜ್ಯದ ಪ್ರತಿ ಪಂಚಾಯಿತಿಯಲ್ಲೂ ರಾಜೀವ್ ಗಾಂಧಿ ಯುವ ಶಕ್ತಿ ಕೇಂದ್ರವನ್ನು ಪುನರಾರಂಭಿಸಲಾಗುತ್ತದೆ ಎಂದು ಉಪ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಎಸ್.ಎಂ. ಕೃಷ್ಣ ಅವರ ಸಂಪುಟದಲ್ಲಿ ನಾನು ನಗರಾಭಿವೃದ್ಧಿ ಸಚಿವನಾಗಿದ್ದಾಗ ರಾಜೀವ್ ಗಾಂಧಿ ಯುವ ಶಕ್ತಿ ಕೇಂದ್ರವನ್ನು ಪ್ರತಿ ಪಂಚಾಯಿತಿಯಲ್ಲಿ ಸ್ಥಾಪನೆ ಮಾಡಿಸಿದ್ದೆ. ಬೇರೆ ಸರ್ಕಾರಗಳು ರಾಜೀವ್ ಗಾಂಧಿ ಅವರ ಹೆಸರು ಇದೆ ಎಂದು ಈ ಯೋಜನೆ ಮುಂದುವರೆಸಲಿಲ್ಲ ಎಂದರು.